ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ—೪೪

# ಮುನಿಸಿಪಾಲಿಟಿಗಳು

ಎಚ್. ಕೆ. ಕೆ. ರಾವ್, ಎಂ.ಎ.

ಮೈಸೂರು

ರ ವಿಶ್ವವಿದ್ಯಾನಿಲಯ

೧೯೪೨

ಬೆಲೆ: ೪ ಆಣೆ

UNIVERSAL
LIBRARY
OU_198446
UNIVERSAL
LIBRARY

# ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ – ೫೫

# ಮುನಿಸಿಪಾಲಿಟಿಗಳು

ಎಚ್. ಕೃಷ್ಣರಾವ್. ಎಂ.ಎ.

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೫೩

ಮೈಸೂರು ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮ್ಯಾನೇಜರ್
ಟಿ. ಎಸ್. ರಾಘವಾಚಾರ್ಯರಿಂದ ಮುದ್ರಿಸಲ್ಪಟ್ಟಿದು.

ಮೊದಲನೆಯ ಮುದ್ರಣ ೨೦೦೦ ಪ್ರತಿಗಳು

೧-೧೨-೧೯೪೨

# ಮುನ್ನುಡಿ

ಈ ಪ್ರಚಾರಪುಸ್ತಕಮಾಲೆ ಮೂರು ವರ್ಷಗಳ ಹಿಂದೆ ಪ್ರಾರಂಭವಾಯಿತು. ಅತಿ ಸುಲಭವಾದ ಬೆಲೆಯಿಟ್ಟು ಇಂಥ ಪುಟ್ಟ ಪುಸ್ತಕಗಳನ್ನು ಹೊರಡಿಸಿದರೆ, ಅವನ್ನು ಓದಿ ಮೆಚ್ಚುವವರು ಮೈಸೂರಿನ ಜನರಲ್ಲಿ ಬಹುವಾಗಿ ದೊರೆಯುವರೆಂಬ ಭರವಸೆಯೇ ಈ ಪ್ರಯತ್ನಕ್ಕೆ ಪ್ರೇರಕ. ಮೊಟ್ಟಮೊದಲು ಮೈಸೂರು ವಿಶ್ವವಿದ್ಯಾನಿಲಯ ಕೈಕೊಂಡ ಈ ಹೊಸ ಮಾರ್ಗದ ಉದ್ಯಮವು ಅದನ್ನು ಏರ್ಪಡಿಸಿದವರ ಅತ್ಯಂತ ನಿರೀಕ್ಷೆಯನ್ನೂ ಮೀರಿ ಫಲಕಾರಿಯಾಗಿದೆಯೆಂದು ದಿಟವಾಗಿ ಹೇಳಬಹುದು. ಈ ಮೂರು ವರ್ಷಗಳಲ್ಲಿ ೩೪ ಪುಸ್ತಕಗಳು ಪ್ರಕಟವಾಗಿವೆ. ಇವುಗಳಲ್ಲಿ ೧೨ ಸಾಹಿತ್ಯಕ್ಕೆ ಸಂಬಂಧಪಟ್ಟವು; ೧೧ ಭೌತ ಮತ್ತು ಜೀವವಿಜ್ಞಾನಗಳನ್ನು ಕುರಿತವು; ಉಳಿದವನ್ನು ಸಾಮಾಜಿಕಶಾಸ್ತ್ರಗಳ ಗುಂಪಿಗೆ ಸೇರಿಸಬಹುದು. ಇವುಗಳ ವಿಷಯಕ್ಷೇತ್ರವು ವಿಶಾಲವಾದದ್ದು. ಕನ್ನಡದ ವಿಚಾರದಲ್ಲಿ ಯಾರ ಮಾತಿಗೆ ಮನ್ನಣೆಯಿದೆಯೋ ಅಂಥ ಮಹನೀಯರು ಈ ಪುಸ್ತಕಗಳನ್ನು ಅತ್ಯುತ್ಸಾಹದಿಂದ ಬರಮಾಡಿಕೊಂಡಿದ್ದಾರೆ. ಈ ಮಾಲೆಯಲ್ಲಿ ಹೊಸದೊಂದು ಪುಸ್ತಕ ಹೊರಬಿದ್ದ ದಿನವೇ ಸುಮಾರು ೬೦೦ ಪ್ರತಿಗಳು ಮಾರಾಟವಾಗುತ್ತವೆ; ಈ ಮೂರು ವರ್ಷಗಳ ಅವಧಿಯಲ್ಲಿ ಸುಮಾರು ೬೦,೦೦೦ ಪ್ರತಿಗಳು ವಿಕ್ರಯವಾಗಿವೆ. ಈ ಪುಸ್ತಕಮಾಲೆಯನ್ನು ಪ್ರಾರಂಭಿಸಿದವರು ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಛಾನ್ಸೆಲರ್ ಪದವಿಯಿಂದ ಈಗತಾನೆ ವಿಶ್ರಾಂತಿ ಪಡೆದಿರುವ ರಾಜಕಾರ್ಯಪ್ರವೀಣ ಶ್ರೀಮಾನ್ ಎನ್. ಎಸ್. ಸುಬ್ಬರಾಯರು;

ಇದು ಯುಕ್ತವಾಗಿಯೇ ಇಷ್ಟೊಂದು ಜನಪ್ರಿಯವಾಗಿರುವುದನ್ನು ನೋಡಿ ಅವರಿಗೆ ತುಂಬ ತೃಪ್ತಿಯುಂಟಾಗಿರಬೇಕು. ಈ ಪುಸ್ತಕಗಳನ್ನು ಯಾವ ಪ್ರತಿಫಲವೂ ಇಲ್ಲದೆ ಬರೆದು ಕೊಟ್ಟಿರುವ ಗ್ರಂಥಕರ್ತರಿಗೆ ಮೈಸೂರು ವಿಶ್ವವಿದ್ಯಾನಿಲಯದ ವಂದನೆಗಳು ಸಲ್ಲಬೇಕಾಗಿವೆ. ಈ ಮಾತುಗಳನ್ನು ಮುಗಿಸುವುದಕ್ಕೆ ಮುಂಚೆ ಈ ಮಾಲೆಯ ಪ್ರಧಾನ ಸಂಪಾದಕರಾದ ಶ್ರೀಮಾನ್ ಜಿ. ಹನುಮಂತರಾಯರನ್ನು ಕುರಿತು ಮೆಚ್ಚಿಕೆಯ ಮಾತೊಂದನ್ನು ನಾನು ಆಡದಿದ್ದರೆ ಲೋಪವಾದೀತು. ಸಂಪಾದಕ ಕಾರ್ಯದಲ್ಲಿ ಇವರು ಸಲ್ಲಿಸಿರುವ ಕಾಲ, ಶಕ್ತಿ, ಶ್ರದ್ಧೆ ಇವು ಎಷ್ಟೆಂಬುದು ಅವರ ದುಡಿಮೆಯನ್ನು ಹತ್ತಿರದಿಂದ ನೋಡಿದವರಿಗೆ ಮಾತ್ರ ಗೊತ್ತಾಗಬಲ್ಲುದು. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರಪುಸ್ತಕಮಾಲೆ ಇಂದಿನಂತೆಯೇ ಮುಂದೆಯೂ ಬಹುಕಾಲ ಜನಪ್ರಿಯವಾಗಿ ನಿಲ್ಲಲೆಂದು ಹಾರೈಸುತ್ತೇನೆ.

ಮೈಸೂರು,

ತಾ|| ೨೪-೪-೧೯೪೨.

**ಇ. ಜಿ. ಮೆಕಾಲ್ಪೈನ್**

ವೈಸ್-ಛಾನ್ಸೆಲರ್

# ಅರಿಕೆ

ವಿಶ್ವವಿದ್ಯಾನಿಲಯದ ಅಧ್ಯಾಪಕಸಂಘದ ಆಶ್ರಯದಲ್ಲಿ ನಾನು ಚಳ್ಳಕೆರೆ ಮತ್ತು ಚಿಕ್ಕಮಗಳೂರುಗಳಲ್ಲಿ ಮಾಡಿದ ಪ್ರಚಾರೋಪನ್ಯಾಸಗಳ ಮುಖ್ಯಾಂಶಗಳು ಈ ಪುಟ್ಟ ಪುಸ್ತಕದಲ್ಲಿ ಅಡಗಿವೆ. ಈ ಪುಸ್ತಕವನ್ನು ಬರೆಯಲು ಶ್ರೀಮಾನ್ ಜಿ. ಹನುಮಂತರಾಯರೂ ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್ಯರೂ ತುಂಬ ಸಹಾಯಮಾಡಿರುತ್ತಾರೆ. ಇದಕ್ಕಾಗಿ ನಾನು ಅವರನ್ನು ಬಹುವಾಗಿ ವಂದಿಸುತ್ತೇನೆ.

ಮೈಸೂರು,
ತಾ|| ೨೦-೧೧-೧೯೪೨.

**ಎಚ್. ಕೃಷ್ಣರಾವ್.**

# ವಿಷಯಾನುಕ್ರಮಣಿಕೆ


೧. ಪೀಠಿಕೆ ....... ೧

೨. ಪ್ರಾಚೀನ ಮುನಿಸಿಪಾಲಿಟಿಗಳು ....... ೪

೩. ಆಧುನಿಕ ಮುನಿಸಿಪಾಲಿಟಿಗಳು ....... ೧೨

೪. ಇಂಗ್ಲೆಂಡಿನ ಮುನಿಸಿಪಾಲಿಟಿಗಳು ....... ೧೯

೫. ಫ್ರೆಂಚ್ ಮುನಿಸಿಪಾಲಿಟಿಗಳು ....... ೩೧

೬. ಇಂಡಿಯಾ ದೇಶದ ಮುನಿಸಿಪಾಲಿಟಿಗಳು ೪೦

೭. ಪುರಸೇವೆ ....... ೪೯

# ಮುನಿಸಿಪಾಲಿಟಿಗಳು

## ೧. ಪೀಠಿಕೆ

ಒಂದು ಶಾಸ್ತ್ರವನ್ನಾಗಲಿ ಕಲೆಯನ್ನಾಗಲಿ ಅಭ್ಯಾಸಮಾಡುವ ಸಮಯದಲ್ಲಿ ನಾವು ಗಮನಿಸಬೇಕಾದ ಎರಡು ಅಂಶಗಳಿರುವುವು. ಒಂದು ತತ್ತ್ವವಿಚಾರ, ಮತ್ತೊಂದು ಪ್ರಯೋಗವಿಚಾರ. ಇತರ ಶಾಸ್ತ್ರಗಳಂತೆ ರಾಜ್ಯಶಾಸ್ತ್ರದಲ್ಲಿ ತತ್ತ್ವಪ್ರಯೋಗಗಳು ಹೆಣೆದುಕೊಂಡಿರುವುವು. ರಾಜ್ಯವೆಂದರೆ ಒಂದು ಗೊತ್ತಾದ ಭೂಭಾಗವನ್ನಾಕ್ರಮಿಸಿಕೊಂಡು ಒಂದು ನಿರ್ದಿಷ್ಟವಾದ ಅಧಿಕಾರಕ್ಕೊಳಪಟ್ಟಿರುವ ಜನಾಂಗ. ರಾಜ್ಯದ ಸ್ವಭಾವ, ಲಕ್ಷಣ, ಧ್ಯೇಯ—ಇವುಗಳನ್ನು ವಿವರಿಸುವುದೇ ರಾಜಕೀಯತತ್ತ್ವಭಾಗ. ರಾಜ್ಯದ ಉದ್ದೇಶವನ್ನು ಸಾಧಿಸುವವರು ಯಾರು, ಅದನ್ನು ಸಾಧಿಸುವ ಕ್ರಮ ಯಾವುದು, ಅದಕ್ಕೆ ಬೇಕಾದ ಸಲಕರಣೆಗಳು ಯಾವುವು ಎಂಬ ವಿಷಯಗಳನ್ನು ತಿಳಿಸುವುದೇ ಪ್ರಯೋಗಭಾಗ. ಸರ್ಕಾರವು ರಾಜ್ಯದ ಧ್ಯೇಯವನ್ನು ಈಡೇರಿಸುವುದಕ್ಕಾಗಿ ನಿರ್ಮಿತವಾದ ಸಾಧನವಿಶೇಷ. ದೇಶದ ಹಿತಕ್ಕನುಗುಣವಾದ ಶಾಸನಗಳನ್ನು ಮಾಡುವುದು, ಶಾಸನಗಳನ್ನು ಆಚರಣೆಗೆ ತರುವುದು, ಪ್ರಜೆಗಳಿಗೆ ನ್ಯಾಯವನ್ನು ದೊರಕಿಸುವುದು—ಇವು ಸರ್ಕಾರದ ಮುಖ್ಯ ಕರ್ತವ್ಯಗಳು. ಈ ಕಾರ್ಯಗಳನ್ನು ದಕ್ಷತೆಯಿಂದಲೂ ಮಿತವ್ಯಯದಿಂದಲೂ ನಿಯಮನಿಬಂಧನೆಗಳಿಗನುಸಾರವಾಗಿಯೂ ನಡೆಯಿಸುವ ಕ್ರಮ ಅಥವಾ ಪ್ರಯೋಗಕ್ಕೆ ಆಡಳಿತವೆಂದು ಹೆಸರು.

ರಾಜ್ಯಶಾಸ್ತ್ರದ ತತ್ತ್ವ, ಪ್ರಯೋಗ—ಇವುಗಳಲ್ಲಿ ಪ್ರಯೋಗ

ಭಾಗವೇ ಇತ್ತೀಚೆಗೆ ವಿಶೇಷವಾಗಿ ರಾಷ್ಟ್ರಶಾಸ್ತ್ರಜ್ಞರ ಮನಸ್ಸನ್ನು ಆಕರ್ಷಿಸಿರುವುದು. ಜನಜೀವನ ತೊಡಕಾಗಿ, ಹಲವಾರು ರೀತಿಗಳಲ್ಲಿ ಅದು ಸರ್ಕಾರದ ಅಧೀನಕ್ಕೆ ಈಡಾಗುತ್ತಿರುವುದೂ ಒಂದು ಕಾರಣ. ದುಷ್ಟನಿಗ್ರಹ ಶಾಂತಿಸ್ಥಾಪನೆಗಳಲ್ಲದೆ ಪ್ರಜಾಪಾಲನೆಯೂ ಸರ್ಕಾರದ ಮುಖ್ಯವಾದ ಕರ್ತವ್ಯವೆಂಬ ನೀತಿಗನುಸಾರವಾಗಿ ಜನರು ಸರ್ಕಾರದಿಂದ ನಾನಾ ವಿಧವಾದ ಸಹಾಯ, ಅನುಕೂಲಗಳನ್ನು ನಿರಂತರವಾಗಿ ನಿರೀಕ್ಷಿಸುತ್ತಿರುವುದು ಮತ್ತೊಂದು ಕಾರಣ. ವೈಜ್ಞಾನಿಕಮನೋಭಾವವು ಅರ್ಥಶಾಸ್ತ್ರ, ವೈದ್ಯಶಾಸ್ತ್ರ ಮೊದಲಾದವುಗಳನ್ನು ಮಾರ್ಪಡಿಸಿರುವಂತೆಯೇ ಆಡಳಿತಶಾಸ್ತ್ರವನ್ನೂ ಮಾರ್ಪಡಿಸಿದೆ. ಒಂದೆರಡು ಮಾತಿನಲ್ಲಿ ಹೇಳುವುದಾದರೆ ಪ್ರತಿಯೊಂದು ದೇಶದ ಪ್ರಜೆಗಳು, ಸಂಸ್ಥೆಗಳು, ಪ್ರಾಂತಗಳು, ವಸತಿ ವಾಹನಗಳು–ಎಲ್ಲವೂ ಸರ್ಕಾರದ ಅಧೀನಕ್ಕೆ ಒಳಪಟ್ಟಿವೆ. ಒಂದುದೇಶದ ಸ್ಥಿತಿಗತಿಗಳನ್ನು ಪರೀಕ್ಷಿಸುವುದಕ್ಕೆ ಅದರ ಆಡಳಿತದ ನೀತಿರೀತಿಯೇ ಒರೆಗಲ್ಲಾಗಿ ಪರಿಗಣಿಸಲ್ಪಟ್ಟಿದೆ.

ಸರ್ಕಾರದ ವ್ಯಾಪನೆ ಸರ್ವತೋಮುಖವಾಗಿದೆ. ಅದರ ಆಡಳಿತಕ್ಕೆ ದೇಶಾದ್ಯಂತವೂ ಒಳಪಟ್ಟಿರುವುದು. ಒಂದು ದೃಷ್ಟಿಯಿಂದ ನೋಡಿದರೆ ಇದು ನ್ಯಾಯವೆಂದೇ ಹೇಳಬೇಕು. ದೇಶದ ಸರ್ವಾಧಿಕಾರವನ್ನು ವಹಿಸಿರುವ ಪ್ರಭುತ್ವ ಒಬ್ಬನಲ್ಲಾಗಲಿ ಒಂದು ವಂಶವಲ್ಲಾಗಲಿ, ಪರಿಷತ್ತಿನಲ್ಲಾಗಲಿ, ಇರುವುದೇ ಶಾಸ್ತ್ರೀಯ. ಹಾಗಿಲ್ಲದಿದ್ದರೆ ದೇಶದಲ್ಲಿ ಐಕಮತ್ಯವಾಗಲಿ, ಶಾಂತಿಸ್ಥಾಪನೆಯಾಗಲಿ ಸಾಧ್ಯವಾಗಲಾರದು. ಆದರೆ ಮತ್ತೊಂದು ದೃಷ್ಟಿಯಿಂದ ಈ ವಿಷಯವನ್ನು ಪರಿಶೀಲಿಸಿದರೆ ರಾಜ್ಯದ ವಿಶಿಷ್ಟಕೆಲಸಗಳನ್ನೂ ಒಂದೇ ಸರ್ಕಾರಕ್ಕೆ ವಹಿಸುವುದು

ಸಾಧ್ಯವೇ, ಹಾಗೆ ಮಾಡುವುದು ಉಚಿತವೇ ಎಂಬ ಸಂದೇಹ ಬರುವುದು. ಉದಾಹರಣೆಗಾಗಿ: ಮನುಷ್ಯನ ಶರೀರ ಒಂದು, ಅದರ ಅಂಗಗಳಾದರೋ ಅನೇಕ. ಈ ಅಂಗಗಳ ಕೆಲಸಗಳು ಪ್ರತ್ಯೇಕವಾಗಿದ್ದರೂ ಆ ಕೆಲಸಗಳೆಲ್ಲವೂ ಜೀವದ ಉದ್ದೇಶದ ಕಡೆಗೆ ತಿರುಗುವುವು. ಹೀಗೆಯೇ ಪ್ರತಿಯೊಂದು ರಾಜ್ಯದ ಉದ್ದೇಶಸಾಧನೆಯೂ ಮಾರ್ಪಾಡಾಗಬೇಕು. ಒಟ್ಟು ಶರೀರದ ಕ್ಷೇಮದ ಜೊತೆಗೆ ಪ್ರತಿಯೊಂದು ಅಂಗದ ಬೆಳವಣಿಗೆಯು ಹೇಗೆ ಸಾಧ್ಯವಾಗುತ್ತಿರುವುದೋ ಹಾಗೆಯೇ ಇಡೀ ದೇಶದ ಅಭಿವೃದ್ಧಿಯ ಜೊತೆಗೆ ಪ್ರತಿಯೊಂದು ಗ್ರಾಮ, ಪಟ್ಟಣ, ನಗರ, ಪ್ರಾಂತಗಳ ಅಭಿವೃದ್ಧಿಯೂ ಸಾಧ್ಯವಾಗಬೇಕು. ಆಗಲೀಗ ರಾಷ್ಟ್ರನಿರ್ಮಾಣದ ಉದ್ದೇಶವು ನಿಜವಾಗಿಯೂ ಫಲಿಸುವುದು. ಮುಂದುವರಿಯುತ್ತಿರುವ ಪಾಶ್ಚಾತ್ಯರಾಜ್ಯಗಳು ಇಡೀದೇಶದ ಹಿತಸಾಧನೆಗಾಗಿ ಕೇಂದ್ರಸರ್ಕಾರವನ್ನೂ ಪ್ರಾಂತಗಳ ಕ್ಷೇಮದ ಸಲುವಾಗಿ ಪ್ರಾಂತ್ಯಸರ್ಕಾರವನ್ನೂ ಅವುಗಳ ನಗರಗಳು, ಪಟ್ಟಣಗಳು ಹಳ್ಳಿಗಳು—ಇವುಗಳ ಆಡಳಿತಕ್ಕಾಗಿ ಸ್ಥಳೀಯ ಸರ್ಕಾರವನ್ನೂ ಏರ್ಪಡಿಸಿರುವುವು. ಇಂತಹ ಸಂಸ್ಥೆಗಳಲ್ಲಿ ಪಟ್ಟಣ ಮತ್ತು ನಗರಗಳ ಆಡಳಿತವನ್ನು ನೋಡಿಕೊಳ್ಳುವುದಕ್ಕಾಗಿ ಸ್ಥಾಪಿತವಾದ ಸಂಸ್ಥೆಗಳು ಇತ್ತೀಚೆಗೆ ಬಹು ಪ್ರಸಿದ್ಧಿಗೆ ಬಂದು ತಮ್ಮ ಆಶ್ರಯದಲ್ಲಿ ವಾಸಮಾಡುತ್ತಿರುವ ಪೌರರಿಗೆ ನಾನಾ ವಿಧವಾದ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವುವು. ಇವೇ ಮುನಿಸಿಪಾಲಿಟಿಗಳು. ಇವುಗಳ ಆಡಳಿತ ವಿಚಾರವನ್ನು ಮಾತ್ರ ತೆಗೆದುಕೊಂಡು ಸಂಕ್ಷೇಪವಾಗಿ ವಿವರಿಸುವುದೇ ಈ ಪುಟ್ಟ ಪುಸ್ತಕದ ಉದ್ದೇಶ.

# ೨. ಪ್ರಾಚೀನಕಾಲದ ಮುನಿಸಿಪಾಲಿಟಿಗಳು

ಪಟ್ಟಣ, ನಗರ, ಗ್ರಾಮ—ಇವು ಒಂದಕ್ಕೊಂದು ಪರಸ್ಪರ ಆಧಾರವಾದುವು. ಜನಜೀವನಕ್ಕೆ ಇವು ಮೂರೂ ಅತ್ಯಾವಶ್ಯಕ. ಪಟ್ಟಣವಾಸಿಗಳ ಜೀವನಕ್ಕೆ ಆವಶ್ಯಕವಾದ ದವಸಧಾನ್ಯಗಳನ್ನು ಗ್ರಾಮಗಳು ಹೇಗೆ ನಿರಂತರವಾಗಿ ಒದಗಿಸಿಕೊಡುತ್ತಿರುವುವೋ ಹಾಗೆಯೇ ಪಟ್ಟಣಗಳೂ ನಗರಗಳೂ ಹಳ್ಳಿಗಳಿಗೆ ಕೈಗಾರಿಕೆಯ ಸಾಮಾನುಗಳನ್ನೂ ವೈಜ್ಞಾನಿಕಸೌಕರ್ಯಗಳನ್ನೂ ಒದಗಿಸಿಕೊಡುತ್ತಿರುವುವು. ರಾಷ್ಟ್ರದ ಜೀವನಕ್ಕೆ ಗ್ರಾಮ ಮತ್ತು ನಗರಗಳೆರಡರ ಸೇವೆಯೂ ಬೇಕು.

ಪಟ್ಟಣಗಳೂ ನಗರಗಳೂ ನಾಗರಿಕತೆಯ ಕೇಂದ್ರಗಳು. ನಾಗರಿಕ ಜೀವನವೆಂದರೆ ನಗರಗಳಲ್ಲಿ ವಾಸಿಸುವರ ಜೀವನ ಕ್ರಮವೆಂದರ್ಥ. ರಾಜಕೀಯ, ಆರ್ಥಿಕ, ವೈಜ್ಞಾನಿಕ ಚಳುವಳಿಗಳ ಬೆಳವಣಿಗೆಗಾಗಿಯೇ ಪಟ್ಟಣ, ನಗರಗಳು ಇರುವುವೆಂದು ಹೇಳಬಹುದು. ನಾಗರಿಕತೆಯು ಎಷ್ಟು ಪುರಾತನವೋ ನಗರಗಳು ಕೂಡ ಅಷ್ಟೇ ಪುರಾತನವಾದುವು. ನಗರಗಳು ನಾಗರಿಕತೆಗೆ ಆಶ್ರಯವನ್ನು ಕೊಟ್ಟು ನಿರಂತರವಾಗಿ ಮಾನವ ವರ್ಗಕ್ಕೆ ಸಹಕಾರಿಯಾಗಿರುವುವು.

ನಮ್ಮ ದೇಶ ಬಹಳ ಪುರಾತನವಾದುದು. ಪೂರ್ವಕಾಲದ ಹಿಂದೂಸ್ಥಾನದಲ್ಲಿ ಪಟ್ಟಣ, ನಗರಗಳ ಸಂಖ್ಯೆ ವಿರಳವಾದರೂ ಅವು ಕೀರ್ತಿಯಲ್ಲಿ ಇತರದೇಶದ ಪಟ್ಟಣಗಳಿಗೂ ನಗರಗಳಿಗೂ ಕಡಿಮೆಯಾಗಿರಲಿಲ್ಲ. ಆಗಿನ ಪಟ್ಟಣಗಳು ಆರ್ಥಿಕಜೀವನಕ್ಕೂ

ನಾಗರಿಕಜೀವನಕ್ಕೂ ಆಶ್ರಯುವನ್ನು ಕೊಟ್ಟವು. ನಮ್ಮ ಪೂರ್ವಿಕರ ಸಾಂಘಿಕ ಮತ್ತು ಸಹಕಾರಸ್ವಭಾವಗಳಿಗೆ ಆ ಕಾಲದ ಪಟ್ಟಣ ಗಳೇ ದೊಡ್ಡ ನಿದರ್ಶನ. ಆಗ ಅನೇಕ ಕುಲಗಳು (ಸಾಮಾಜಿಕ ಗುಂಪುಗಳು), ಗಣಗಳು (ರಾಜಕೀಯ ಸಂಸ್ಥೆಗಳು) ಶ್ರೇಣಿಗಳು (ಆರ್ಥಿಕ ಸಂಸ್ಥೆಗಳು) ತಮ್ಮ ಕೆಲಸಕಾರ್ಯಗಳ ಮೂಲಕ ಪಟ್ಟಣ ಗಳನ್ನು ಪ್ರಸಿದ್ಧಿಗೆ ತಂದಿದ್ದುವು. ಆ ಸಂಸ್ಥೆಗಳು ಉಪನಿಯಮ ಗಳನ್ನು ಮಾಡುವ ಅಧಿಕಾರವನ್ನೂ ನ್ಯಾಯವನ್ನು ತೀರ್ಮಾನ ಮಾಡುವ ಹಕ್ಕನ್ನೂ ಕೇಂದ್ರಸರ್ಕಾರದಿಂದ ಪಡೆದು ಬಹು ಪ್ರಾಬಲ್ಯಕ್ಕೆ ಬಂದಿದ್ದವು. ಆಗಿನ ಜನರಿಗೆ ಪ್ರಜಾಪ್ರಭುತ್ವವು ಹೊಸದಾಗಿರಲಿಲ್ಲ. ಒಂದು ಗುಂಪಿನ ಜನರು ಆ ಗುಂಪಿನ ಸಮಿತಿಯ ಸದಸ್ಯರಾಗಿರಬೇಕೆಂದೂ ಅವರಿಗೆ ವಾಕ್ ಸ್ವಾತಂತ್ರ್ಯ ವಿರಬೇಕೆಂದೂ ಆ ಗುಂಪಿನ ಆಡಳಿತವನ್ನು ವಹಿಸಿದ್ದ ಮುಖ್ಯಾಧಿಕಾರಿಗಳು ಗುಂಪಿನ ಸಮಿತಿಗೆ ಜವಾಬ್ದಾರರಾಗಿರಬೇ ಕೆಂದೂ ಸಂಪ್ರದಾಯವಿತ್ತು. ಒಂದುಕಡೆ ಕುಲ, ಗಣ, ಶ್ರೇಣಿ ಗಳು, ಅವುಗಳ ಐಶ್ವರ್ಯ, ಸ್ವತಂತ್ರ ಆಡಳಿತಗಳಿಂದ ದೇಶದ ಮಹತ್ವವನ್ನು ಹೆಚ್ಚಿಸಿದ್ದವು; ಮತ್ತೊಂದು ಕಡೆ ಅವುಗಳ ಪ್ರಾಬಲ್ಯದಿಂದ ಕೇಂದ್ರಸರಕಾರವನ್ನು ಕೂಡ ಪ್ರತಿಭಟಿಸು ತ್ತಿದ್ದುವು. ದೇಶೋನ್ನತಿಗೆ ಆಧಾರವಾದ ಇಂತಹ ಗುಂಪು ಗಳನ್ನು ರಾಜನು ಸಾಮ, ದಾನ, ಭೇದೋಪಾಯಗಳಿಂದ ತನಗೆ ಸಹಕಾರಿಗಳಾಗಿ ಮಾಡಿಕೊಳ್ಳಬೇಕೆಂದು ಹೇಳುವ ಭಾರತದ ವಚನವು ಆ ಗುಂಪುಗಳ ಪ್ರಾಬಲ್ಯವನ್ನು ಸೂಚಿಸು ವುದು. ಚಾಣಕ್ಯನ ಕಾಲದಲ್ಲಿ ಅಶ್ವಶಾಲೆ, ಗಜಶಾಲೆಗಳ ಅಧ್ಯಕ್ಷರಿಗೆ ರಾಜ್ಯದಲ್ಲಿ ಯಾವ ಸ್ಥಾನ ಮಾನಗಳು ಸಲ್ಲುತ್ತಿದ್ದವೋ ಅವು ಆಗಿನ ಶ್ರೇಣಿಮುಖ್ಯರಿಗೂ ಸಲ್ಲುತ್ತಿ

ದ್ದವು. ಅಂದಮೇಲೆ ಶ್ರೇಣಿಗಳು ಪ್ರಬಲವಾಗಿದ್ದವು ಎಂದು ಮತ್ತೆ ಬೇರೆ ಹೇಳಬೇಕಾಗಿಲ್ಲ. ಒಟ್ಟಿನಲ್ಲಿ ನಮ್ಮ ಪೂರ್ವ ಕಾಲದ ಪಟ್ಟಣಗಳು ತಮಗೆ ಸೇರಿದ ನಿವಾಸಿಗಳನ್ನು ಪರ ರಾಯರ ಭೀತಿಯಿಂದ ರಕ್ಷಿಸಿಕೊಂಡು ಬಂದದ್ದಲ್ಲದೆ ಪೌರರ ಆಡಳಿತ ಕೇಂದ್ರಗಳಾಗಿಯೂ ನಾಗರಿಕ ಜೀವನಕ್ಕೆ ಮಹ ದಾಶ್ರಯಗಳಾಗಿಯೂ ಪ್ರಗತಿಗೆ ಹಿನ್ನೆಲೆಯಾಗಿಯೂ ಸಮಾ ಜಕ್ಕೆ ರತ್ನಪ್ರಾಯವಾಗಿಯೂ ಇದ್ದವು ಎಂಬುದು ಕೌಟಿಲ್ಯನ ಅರ್ಥಶಾಸ್ತ್ರದಿಂದಲೂ ಗುಪ್ತಸಂತತಿಗೆ ಸೇರಿದ ರಾಜರ ಶಾಸನ ಗಳಿಂದಲೂ ವಿಜಯನಗರಸಾಮ್ರಾಜ್ಯದ ಚರಿತ್ರೆಯಿಂದಲೂ ಗೊತ್ತಾಗುವುದು.

ಆಧುನಿಕ ಪಾಶ್ಚಾತ್ಯರ ನಾಗರಿಕತೆಗೆ ಪೂರ್ವಕಾಲದ ಗ್ರೀಸ್ ದೇಶವು ಮಾತೃಸ್ಥಾನ. ಗ್ರೀಸ್‌ದೇಶದ ಚರಿತ್ರೆ ಎಂದರೆ ಆ ದೇಶಕ್ಕೆ ಸೇರಿದ ಕೆಲವು ಮುಖ್ಯ ಪಟ್ಟಣಗಳ ಚರಿತ್ರೆ ಎಂದು ಹೇಳಬಹುದು. ಸಾಹಿತ್ಯ, ವಿಜ್ಞಾನ, ತತ್ವಶಾಸ್ತ್ರ, ಕಲಾಚತು ರತೆ, ರಾಜನೀತಿ ನೈಪುಣ್ಯ, ನಿಶ್ಚಲವಾದ ದೇಶಾಭಿಮಾನ, ಇವೇ ಮೊದಲಾದ ಜೀವನದ ಉದಾತ್ತ ಧ್ಯೇಯಗಳಿಗೂ ಅವುಗಳ ಸಾಧನೋಪಾಯಗಳಿಗೂ ಪೂರ್ವಕಾಲದ ಗ್ರೀಸಿನ ನಗರವಾಸಿಗಳು, ಅದರಲ್ಲೂ ಅಥೆನ್ಸಿನ ಪೌರರು ಪ್ರಪಂಚಕ್ಕೇ ಮಾರ್ಗದರ್ಶಿಗಳಾಗಿದ್ದರು.

ಗ್ರೀಕರ ತರುವಾಯ ಪ್ರಸಿದ್ಧಿಗೆ ಬಂದ ರೋಮನ್ನರು ಕೂಡ ಪಟ್ಟಣದಲ್ಲಿ ಹುಟ್ಟಿ ಬೆಳೆದವರು. ಇವರು ಒಂದು ಸಣ್ಣ ನಗರ ರಾಷ್ಟ್ರವನ್ನು ಹೂಡಿ ಕಾಲಕ್ರಮದಲ್ಲಿ ತಮ್ಮ ಸಾಹಸ ದಿಂದ ಇಟಲಿ ಪರ್ಯಾಯದ್ವೀಪವನ್ನೂ ಮೆಡಿಟರೇನಿಯನ್ ಸಮುದ್ರದ ಸುತ್ತಮುತ್ತಲಿನ ದೇಶಗಳನ್ನೂ ಜಯಿಸಿ ದೊಡ್ಡ

ಚಕ್ರಾಧಿಪತ್ಯವನ್ನು ಕಟ್ಟಿದರು. ರೋಮನ್ನರ ಚಕ್ರಾಧಿಪತ್ಯದ ವೈಭವ, ಆಡಳಿತದ ದಕ್ಷತೆ, ಶಿಸ್ತು, ಕಾನೂನುಗಳ ರಚನೆ, ಶಾಂತಿ ಸ್ಥಾಪನೆಯ ಕಾರ್ಯಾಚರಣೆ--ಇವು ಚರಿತ್ರಾರ್ಹವಾಗಿರುವುವಲ್ಲದೆ ಈಗಲೂ ಅನೇಕರಿಗೆ ಮಾರ್ಗದರ್ಶಿಯಾಗಿರುವುವು. ಇವರು ಜಯಿಸಿದ ದೇಶಗಳನ್ನು ಊರ್ಜಿತಗೊಳಿಸುವುದು, ಆ ಪ್ರದೇಶ ಗಳಲ್ಲಿ ಶಾಂತಿಯನ್ನು ಸ್ಥಾಪಿಸುವುದು, ತಮ್ಮ ರಾಜಕೀಯ ಪದ್ಧತಿ, ಭಾಷೆ ಮೊದಲಾದ ನಾಗರಿಕ ಜೀವನ ಸಂಪ್ರದಾಯ ಗಳನ್ನು ಹರಡುವುದು—ಇವೇ ಮೊದಲಾದ ಉದ್ದೇಶಗಳಿಂದ ಅಲ್ಲಲ್ಲಿ ಅಧಿನಿವೇಶನ (ಕಾಲೊನಿ) ಗಳನ್ನು ಸ್ಥಾಪಿಸಿದರು. ಇಂತಹ ಅಧಿನಿವೇಶನಗಳಲ್ಲಿ ವಾಸಮಾಡುತ್ತಿದ್ದ ರೋಮನ್ನರು ರೋಮ್‌ಪಟ್ಟಣದ ನಿವಾಸಿಗಳಿಗೆ ದೊರೆಯುತ್ತಿದ್ದ ಹಕ್ಕುಗಳ ನ್ನೆಲ್ಲಾ ಅನುಭವಿಸಿಕೊಂಡು ಮಾತೃಭೂಮಿಯ ಸೇವೆಯನ್ನು ಮಾಡುತ್ತಿದ್ದರು. ಜಯಿಸಿದ ಪ್ರಾಂತಗಳನ್ನು ಇತರ ಪ್ರಾಂತ ಗಳ ಸಂಪರ್ಕವಿಲ್ಲದಂತೆ ಪ್ರತ್ಯೇಕಿಸುವುದು, ಆ ಪ್ರಾಂತಗಳ ಜನರಮೇಲೆ ತೆರಿಗೆ ಕಂದಾಯಗಳನ್ನು ಹೊರಿಸುವುದು, ಅವ ರನ್ನು ನಿರಾಯುಧರನ್ನಾಗಿ ಮಾಡುವುದು- ಇವೇ ರೋಮನ್ನರ ಚಕ್ರಾಧಿಪತ್ಯ ಆಡಳಿತದ ರಹಸ್ಯ. ಜಯಿಸಿದ ಪ್ರಾಂತಗಳನ್ನು ಸರ್ವದಾ ಹೀನದೆಸೆಗೆ ತಳ್ಳಲಿಲ್ಲ. ಕೆಲವು ಪ್ರಾಂತಗಳ ಜನರಿಗೆ ಇತರ ಪ್ರಾಂತಗಳೊಡನೆ ವ್ಯಾಪಾರಮಾಡಲೂ ವಿವಾಹ ಬೆಳೆ ಸಲೂ ಅಗತ್ಯವಾದ ಹಕ್ಕುಗಳನ್ನು ರೋಮನ್ನರು ಕೊಟ್ಟರು. ಇಂತಹ ಹಕ್ಕುಗಳನ್ನು ಪಡೆದ ಪ್ರಾಂತಗಳಿಗೂ ಪಟ್ಟಣಗಳಿಗೂ "ಮ್ಯುನಿಸಿಪಿಯ" ಎಂಬ ಹೆಸರು ಬಂತು. ರೋಮನ್ನರ ಹೆಚ್ಚು ವಿಶ್ವಾಸಕ್ಕೆ ಪಾತ್ರರಾದ ಜನರಿಗೆ ಸ್ವಲ್ಪಮಟ್ಟಿಗೆ ಸ್ವತಂತ್ರ ಆಡಳಿತದ ಹಕ್ಕೂ ಲಭಿಸಿತು. ಒಟ್ಟಿನಲ್ಲಿ ಜಯಿಸಿದ ಪ್ರಾಂತ

ಗಳ ಪಟ್ಟಣಗಳಿಗೆಲ್ಲಾ ಒಂದೇ ವಿಧವಾದ ಹಕ್ಕು ಅಥವಾ ಸ್ವಾತಂತ್ರ್ಯವನ್ನು ರೋಮನ್ನರು ಕೊಡಲಿಲ್ಲ. ಪ್ರತಿಯೊಂದು ಪ್ರಾಂತ ಅಥವಾ ಪಟ್ಟಣದೊಡನೆ ರೋಮನ್ನರು ಪ್ರತ್ಯೇಕವಾದ ಒಪ್ಪಂದವನ್ನು ಮಾಡಿಕೊಂಡು ಆಯಾ ಪ್ರಾಂತ ಅಥವಾ ಪಟ್ಟಣಗಳು ಹೊಂದಬಹುದಾದ ಹಕ್ಕುಗಳನ್ನು ಪರಸ್ಪರ ಒಪ್ಪಂದಗಳಲ್ಲಿ ನಮೂದಿಸುತ್ತಿದ್ದರು.

ಕೆಲವು ಕಾಲಾನಂತರ ಇಟಲಿದೇಶದಲ್ಲಿದ್ದ ಪಟ್ಟಣಗಳಿಗೆಲ್ಲಾ ಮುನಿಸಿಪಲ್ ಹಕ್ಕುಗಳು ದೊರೆತವು. ಅವುಗಳ ಆಡಳಿತವನ್ನು ನೋಡಿಕೊಳ್ಳುವುದಕ್ಕಾಗಿ ಒಂದು ಪ್ರಜಾಸಮಿತಿ, ಸೆನೆಟ್ ಎಂಬ ಶ್ರೀಮಂತರ ಸಭೆ, ಅನೇಕ ಅಧಿಕಾರಿಗಳು (ಮ್ಯಾಜಿಸ್ಟ್ರೇಟ್ಸ್), ನ್ಯಾಯಸ್ಥಾನಗಳು ಇವು ಏರ್ಪಾಡಾದವು. ಈ ಹಕ್ಕುಗಳು ಇಟಲೀದೇಶದ ಪಟ್ಟಣಗಳಿಗೂ ಇಡೀ ಚಕ್ರಾಧಿಪತ್ಯದಲ್ಲಿದ್ದ ಪಟ್ಟಣಗಳಿಗೂ ದೊರೆತವು. ಒಟ್ಟಿನಲ್ಲಿ ಅನೇಕ ಪಟ್ಟಣಗಳಿಗೆ ಪ್ರತ್ಯೇಕವಾದ ಅಧಿಕಾರಿಗಳು, ಪ್ರಜಾಸಮಿತಿ, ಸೆನೆಟ್, ನ್ಯಾಯಸ್ಥಾನಗಳು, ಸೈನ್ಯ, ಪೋಲೀಸ್, ಹಣಕಾಸಿನ ಮೇಲಿನ ಆಡಳಿತ--ಇವೇ ಮೊದಲಾದ ಸೌಕರ್ಯಗಳು ದೊರೆತವು. ಮುನಿಸಿಪಾಲಿಟಿಗಳ ಹಣಕಾಸಿನ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದಕ್ಕೋಸ್ಕರ ಕೇಂದ್ರಸರ್ಕಾರ ಆಡಿಟರುಗಳನ್ನು ನೇಮಿಸಿತು. ಮುನಿಸಿಪಾಲಿಟಿಗಳು ಸಾಲವನ್ನು ತೆಗೆದುಕೊಳ್ಳುವಾಗಲೂ ಸಾರ್ವಜನಿಕ ಆಸ್ತಿಗಳನ್ನು ಮಾರುವಾಗಲೂ ಕೇಂದ್ರಸರ್ಕಾರದ ಆಡಿಟರುಗಳ ಅಪ್ಪಣೆಯನ್ನು ಪಡೆಯಬೇಕೆಂಬ ನಿಬಂಧನೆಗಳು ಆಚರಣೆಗೆ ಬಂದವು. ಒಟ್ಟಿನಲ್ಲಿ ರೋಮನ್ನರ ಚಕ್ರಾಧಿಪತ್ಯದಲ್ಲಿ ಕೇಂದ್ರಸರ್ಕಾರದ ಪ್ರಾಬಲ್ಯವು ಅತ್ಯಧಿಕವಾಗಿತ್ತು. ಎಲ್ಲಾ ವಿಷಯಗಳಲ್ಲಿಯೂ ಕೇಂದ್ರಸರ್ಕಾರದ ಸಂಪ್ರ

ದಾಯಗಳೇ ಮೇಲ್ಪಂಕ್ತಿಯಾಗಿದ್ದವು. ಜಯಿಸಿದ ಪ್ರಾಂತ ಪಟ್ಟಣಗಳಿಗೆ ಪೂರ್ಣಸ್ವಾತಂತ್ರ್ಯವನ್ನು ಕೊಡಬೇಕೆಂಬುದು ರೋಮನ್ನರ ಸಂಕಲ್ಪವಾಗಿರಲಿಲ್ಲ. ಆದರೂ ಚಕ್ರಾಧಿಪತ್ಯಕ್ಕೆ ಸೇರಿದ ಪ್ರಾಂತಗಳಿಗೆ ಸ್ವಲ್ಪಮಟ್ಟಿಗಾದರೂ ಆಡಳಿತ ಅಧಿಕಾರವನ್ನು ಕೊಡುವ ಸಂಪ್ರದಾಯವನ್ನು ಆಚರಣೆಗೆ ತಂದವರಲ್ಲಿ ರೋಮನ್ನರು ಮೊದಲನೆಯವರೆಂದು ಹೇಳಬಹುದು.

ಆ ಕಾಲದ ಪಾಶ್ಚಾತ್ಯಪ್ರಪಂಚವನ್ನೆಲ್ಲಾ ಆಕ್ರಮಿಸಿದ್ದ ರೋಮನ್ನರ ಚಕ್ರಾಧಿಪತ್ಯವು ಸುಮಾರು 500 ವರ್ಷಗಳ ಕಾಲ ಬೆಳೆದು ಕೊನೆಗೆ ಒಡೆದು ಆ ಪ್ರಪಂಚವನ್ನೆಲ್ಲಾ ಅಲ್ಲೋಲಕಲ್ಲೋಲವಾಡಿತು. ಎಲ್ಲೆಲ್ಲಿಯೂ ಅನಾಯಕತ್ವ ತಲೆದೋರುತ್ತಾ ಬಂದಿತು. ಈ ಸನ್ನಿವೇಶದಲ್ಲಿ ದೊಡ್ಡ ದೊಡ್ಡ ಜಮೀನುದಾರರೂ ಕ್ರೈಸ್ತಮತಾಧಿಕಾರಿಗಳೂ ಅತಿ ಪ್ರಾಬಲ್ಯಕ್ಕೆ ಬಂದರು. ಕೈಗಾರಿಕೆ ವ್ಯಾಪಾರಗಳನ್ನು ಜೀವನೋಪಾಯಗಳನ್ನಾಗಿ ಮಾಡಿಕೊಂಡಿದ್ದ ಅನೇಕರು ನಗರಗಳನ್ನು ಸೇರಿ ಅವುಗಳಿಗೆ ಜೀವಕಳೆಯನ್ನು ತುಂಬಿದರು. ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸಿಕೊಂಡ ಪಟ್ಟಣಗಳು ಸ್ವತಂತ್ರ ಆಡಳಿತಕ್ಕೆ ಹೊಡೆದಾಡಲುಪಕ್ರಮಿಸಿದವು. ದ್ರವ್ಯಸಹಾಯವನ್ನು ಅಪೇಕ್ಷಿಸುತ್ತಿದ್ದ ಆ ಕಾಲದ ರಾಜರು ಮುಂದುವರಿಯುತ್ತಿದ್ದ ಪಟ್ಟಣಗಳಿಂದ ಹಣವನ್ನು ಪಡೆದು ಅವುಗಳಿಗೆ ಸ್ವತಂತ್ರ ಆಡಳಿತದ ಹಕ್ಕುಗಳನ್ನು ಕೊಟ್ಟರು. ಅಂತಹ ಪಟ್ಟಣಗಳಿಗೆ ಛಾರ್ಟರ್ಡ್ ಟೌನ್ಸ್‌ಗಳೆಂದು ಹೆಸರು ಬಂತು. ಸ್ವತಂತ್ರಾಧಿಕಾರವನ್ನು ಪಡೆದ ಪಟ್ಟಣಗಳಲ್ಲಿ ಶ್ರೀಮಂತರಿಗೂ ಇತರ ಪ್ರಜೆಗಳಿಗೂ ಹೋರಾಟವುಂಟಾಗಿ ಕೊನೆಯಲ್ಲಿ ಪ್ರಜಾಸರ್ಕಾರಗಳು ಏರ್ಪಾಡಾದವು. ಆ ಪಟ್ಟಣ

ಗಳಲ್ಲಿ ಕೆಲವು ಕೈಗಾರಿಕೆಗಳಲ್ಲೂ ಮತ್ತೆ ಕೆಲವು ವ್ಯಾಪಾರ ದಲ್ಲೂ ಇನ್ನು ಕೆಲವು ರಕ್ಷಣಾಕಾರ್ಯಗಳಲ್ಲೂ ಬಲುಮಟ್ಟಿಗೆ ಮುಂದುವರಿದವು. ಆ ಪಟ್ಟಣಗಳು ಸಂಪತ್ತು, ಸ್ವತಂತ್ರಾಧಿ ಕಾರಗಳಿಂದ ಅತಿ ಪ್ರಾಬಲ್ಯಕ್ಕೆ ಬಂದು ಆ ಕಾಲದ ರಾಜರು ಚಕ್ರವರ್ತಿಗಳನ್ನು ಕೂಡ ಹೆದರಿಸುವಂತಿದ್ದವು. ಉದಾಹರಣೆಗಾಗಿ ಇಟಲಿಗೆ ಸೇರಿದ ವೆನಿಸ್, ಜಿನೋವಾ, ಹ್ಯಾನ್ಸಿಯಾಟಿಕ್‌ಲೀಗ್ ಎಂಬ ವ್ಯಾಪಾರಸಂಸ್ಥೆಗೆ ಸೇರಿದ್ದ ಕೊಲೋನ್, ಬ್ರನ್ಸ್‌ವಿಕ್, ಲ್ಯುಬೆಕ್, ಡ್ಯಾನ್ಜಿಗ್ ಮೊದಲಾದ ಜರ್ಮನೀದೇಶದ ಪಟ್ಟಣಗಳು ವ್ಯಾಪಾರದಲ್ಲಿ ಸುಪ್ರಸಿದ್ಧವಾಗಿ ದ್ದವು. ಇಟಲಿದೇಶಕ್ಕೆ ಸೇರಿದ ಲಾಂಬಾರ್ಡಿ ಪಟ್ಟಣಗಳು ರಕ್ಷಣೆಯ ಕಾರ್ಯಗಳಲ್ಲಿಯೂ ಫ್ಲಾರೆನ್ಸ್ ಪಟ್ಟಣ ಸಾಹಿತ್ಯ ಕಲೆಗಳಲ್ಲಿಯೂ ಆ ಕಾಲದ ಪ್ರಪಂಚಕ್ಕೆ ಮಾದರಿಯಾಗಿದ್ದವು. ಈ ಪ್ರಕಾರ ಯೂರೋಪಿನ ಮಧ್ಯಯುಗದಲ್ಲಿ ಪಟ್ಟಣಗಳು ಪ್ರಸಿದ್ಧಿಗೆ ಬಂದು ನಾಗರಿಕಜೀವನಕ್ಕೆ ಆಶ್ರಯವನ್ನು ಕೊಟ್ಟು ಕೈಲಾದಮಟ್ಟಿಗೆ ಪ್ರಜಾಸೇವೆಯನ್ನು ಮಾಡಿದವು.

ಕಾಲಕ್ರಮದಲ್ಲಿ ಕೇಂದ್ರಸರ್ಕಾರ ಪ್ರಬಲವಾಗಿ, ರಾಜರ ಅಧಿಕಾರ ದರ್ಪಗಳಿಂದ ಪಟ್ಟಣಗಳ ಪ್ರಾಬಲ್ಯವು ಕಡಮೆ ಯಾಯಿತು. ಆದರೆ 19ನೆಯ ಶತಮಾನದಿಂದೀಚೆಗೆ ಪುನಃ ಅವು ತಲೆಯೆತ್ತಿ ನಾಗರಿಕ ಜೀವನಕ್ಕೆ ಹೆಚ್ಚು ಪ್ರೋತ್ಸಾಹ ವನ್ನು ಕೊಡಲಾರಂಭಿಸಿರುವುವು. ಈ ಬದಲಾವಣೆಗೆ ಇಂಗ್ಲೆಂಡಿ ನಲ್ಲಿ ಪ್ರಾರಂಭವಾದ ಆರ್ಥಿಕಕ್ರಾಂತಿಯು ಮುಖ್ಯ ಕಾರಣವೆನ್ನ ಬಹುದು. ಆ ಕ್ರಾಂತಿಯು ಇಂಗ್ಲೆಂಡಿನಿಂದ ಇಡೀ ಪ್ರಪಂಚ ವನ್ನೆಲ್ಲಾ ಆವರಿಸಿರುವುದು. ಅದರ ಫಲವಾಗಿ ಕಾಡುಗಳು ಊರುಗಳಾದವು. ಹಳ್ಳಿಗಳು ದೊಡ್ಡಪಟ್ಟಣಗಳಾದವು. ಜನರು

ತಂಡೋಪತಂಡವಾಗಿ ಹಳ್ಳಿಗಳನ್ನು ಬಿಟ್ಟು ಹೊಸ ಕೈಗಾರಿಕೆಯ ಕೇಂದ್ರಗಳನ್ನು ಸೇರಲಾರಂಭಿಸಿದರು. ಕೈಗಾರಿಕೆಗಳಿಂದ ವ್ಯಾಪಾರ, ವ್ಯಾಪಾರದಿಂದ ಬ್ಯಾಂಕುಗಳು, ರೈಲು, ಜಹಜು ಇವೇ ಮೊದಲಾದ ನಾನಾವಿಧವಾದ ಆರ್ಥಿಕಸೌಕರ್ಯಗಳು ಹೆಚ್ಚಿದುವು. ಇಂತಹ ಚಳುವಳಿಗಳು ಹೆಚ್ಚಿದ ಕಡೆಗಳಲ್ಲಿ ಜನಸಾಂದ್ರತೆ ಅಧಿಕವಾಗುತ್ತ ಬಂತು. ಒಂದು ಕಡೆ ಆರ್ಥಿಕ ಪ್ರಪಂಚದಲ್ಲಿ ಪೈಪೋಟಿ, ಮತ್ತೊಂದು ಕಡೆ ಕೈಗಾರಿಕೆ ಯಜಮಾನರ ಸ್ವಾರ್ಥ, ಇನ್ನೊಂದು ಕಡೆ ಕೂಲಿಗಾರರ ಕಷ್ಟಜೀವನ, ಇವು ದಿನೇ ದಿನೇ ಅಧಿಕವಾಗುತ್ತ ಬಂದು ನಗರ ಜೀವನವನ್ನು ತೊಡಕಿಗೆ ಸಿಕ್ಕಿಸಿದವು. ಎಲ್ಲೆಲ್ಲಿಯೂ ಜನಜಾಗ್ರತೆ ಹೆಚ್ಚಿ ಪ್ರತಿನಿಧಿಸರ್ಕಾರ ಪ್ರಸಿದ್ಧಿಗೆ ಬರಲಾರಂಭಿಸಿತು. ಈ ಸನ್ನಿವೇಶದಲ್ಲಿ ದೊಡ್ಡ ದೊಡ್ಡ ಪಟ್ಟಣಗಳ ನಿವಾಸಿಗಳು ಅವುಗಳ ಆಡಳಿತವನ್ನು ತಾವೇ ನೋಡಿಕೊಳ್ಳಲು ಅಭಿಲಾಷೆಪಟ್ಟರು. ಕೇಂದ್ರಸರಕಾರಗಳಿಗೂ ಕೂಡ ಲಕ್ಷಾಂತರ ಪ್ರಜೆಗಳನ್ನುಳ್ಳ ಆ ದೊಡ್ಡಪಟ್ಟಣಗಳ ಆಡಳಿತವನ್ನು ನೋಡಿಕೊಳ್ಳುವುದು ಕಷ್ಟವೆಂದು ತೋರಿತು. ಈ ಎರಡು ಕಾರಣಗಳಿಂದ ದೊಡ್ಡ ಪಟ್ಟಣಗಳಿಗೆ ಸ್ವತಂತ್ರ ಆಡಳಿತದ ಅಧಿಕಾರ ದೊರೆತು ಮುನಿಸಿಪಾಲಿಟಿಗಳೆಂಬ ಪೌರಸಂಸ್ಥೆಗಳು ಸ್ಥಾಪಿತವಾದುವು.

# ೩. ಆಧುನಿಕ ಮುನಿಸಿಪಾಲಿಟಿಗಳು

ಮುನಿಸಿಪಾಲಿಟಿ ಎಂದರೆ ಒಂದು ಪಟ್ಟಣ ಅಥವಾ ನಗರದ ಆಡಳಿತವನ್ನು ನಡೆಸುವ ಸಂಸ್ಥೆ ಎಂದರ್ಥ. ಪೌರರ ಆರೋಗ್ಯ, ವಿದ್ಯಾಭ್ಯಾಸ, ರಕ್ಷಣೆ, ನೀರು, ದೀಪ, ವಸತಿ ಮುಂತಾದ ಸೌಕರ್ಯಗಳನ್ನು ನೋಡಿಕೊಳ್ಳುವುದು ಮ್ಯುನಿಸಿಪಾಲಿಟಿಯ ಸಾಮಾನ್ಯ ಧ್ಯೇಯಗಳು. ಇದು ಇತರ ಸಂಸ್ಥೆಗಳ ಮೇಲೂ ಪ್ರಜೆಗಳ ಮೇಲೂ ನ್ಯಾಯಸ್ಥಾನದಲ್ಲಿ ವ್ಯಾಜ್ಯವನ್ನು ಹೂಡ ಬಹುದು; ಇತರ ಸಂಸ್ಥೆಗಳೂ ಪ್ರಜೆಗಳೂ ಮ್ಯುನಿಸಿಪಾಲಿಟಿಯ ಮೇಲೂ ನ್ಯಾಯಸ್ಥಾನಗಳಲ್ಲಿ ವ್ಯಾಜ್ಯ ಹೂಡಬಹುದು. ಮುನಿಸಿಪಾಲಿಟಿಗೆ ಪ್ರತ್ಯೇಕವಾದ ಮುದ್ರೆ ಉಂಗುರ, ಅಧಿಕಾರಿ ವರ್ಗ, ಬೊಕ್ಕಸ, ಉಪನಿಯಮಗಳನ್ನು ಮಾಡುವ ಅಧಿಕಾರ, ಅಧಿಕಾರಿಗಳನ್ನು ನೇಮಿಸಿಕೊಂಡು ಅವರಿಂದ ಕೆಲಸವನ್ನು ತೆಗೆದುಕೊಳ್ಳುವ ಜವಾಬ್ದಾರಿ—ಇವೆಲ್ಲವೂ ಉಂಟು.

ಆದರೆ ಮುನಿಸಿಪಾಲಿಟಿಗಳಿಗೆ ಅಧಿಕಾರ ಪಾರಮ್ಯವಿಲ್ಲ. ಅವು ಸ್ಥಾಪನೆಯಾಗಿ ಕೆಲಸಮಾಡಲು ಕೇಂದ್ರ ಸರ್ಕಾರದ ಅನುಮತಿ ಅತ್ಯಾವಶ್ಯಕ. ಮುನಿಸಿಪಾಲಿಟಿಗಳ ಅಧಿಕಾರದ ಎಲ್ಲೆಯನ್ನು ವಿಸ್ತರಿಸುವುದೂ ಸಂಕುಚಿಸುವುದೂ ಕೇಂದ್ರ ಸರ್ಕಾರದ ಕೈಯಲ್ಲಿವೆ. ಇವೆರಡರ ಪರಸ್ಪರ ಸಂಬಂಧ ಎಲ್ಲ ದೇಶಗಳಲ್ಲೂ ಒಂದೇ ವಿಧವಾಗಿಲ್ಲ. ಇದು ಪಾಶ್ಚಾತ್ಯ ದೇಶಗಳಲ್ಲಿ ಮೂರು ರೀತಿಯಾಗಿರುವಂತೆ ತೋರುವುದು. ಮುನಿಸಿಪಾಲಿಟಿಗಳಿಗೆ ಹೆಚ್ಚು ಆಡಳಿತ ಸ್ವಾತಂತ್ರ್ಯವನ್ನು ಕೊಡದೆ ಅವುಗಳನ್ನು ಕೇಂದ್ರ ಸರ್ಕಾರದ ಕೈಗೊಂಬೆಗಳಂತೆ ಮಾಡುವುದು ಒಂದುವಿಧ. ಫ್ರಾನ್ಸ್ ದೇಶದ ಮುನಿಸಿಪಾಲಿಟಿಗಳೇ ಇದಕ್ಕೆ

ನಿದರ್ಶನ. ಆ ದೇಶದ ಮ್ಯುನಿಸಿಪಾಲಿಟಿಗಳು ಕೇಂದ್ರ ಸರ್ಕಾರದ ಅಜ್ಞಾವರ್ತಿಗಳು. ಮ್ಯುನಿಸಿಪಲ್ ತೆರಿಗೆ, ಕಂದಾಯ, ಮುನಿಸಿಪಾಲಿಟಿಯ ಆಸ್ತಿ, ಪೋಲಿಸ್ ಇವುಗಳ ಮೇಲೆಲ್ಲಾ ಕೇಂದ್ರ ಸರ್ಕಾರಕ್ಕೆ ಪೂರ್ಣಾಧಿಕಾರವುಂಟು. ಅವುಗಳ ಸಂಬಂಧವಾಗಿ ಬರುವ ವ್ಯಾಜ್ಯಗಳನ್ನು ತೀರ್ಮಾನಮಾಡುವ ಅಧಿಕಾರವು ಕೂಡ ಕೇಂದ್ರ ಸರ್ಕಾರದ ನ್ಯಾಯಸ್ಥಾನಕ್ಕೇ (ಅಡ್ಮಿನಿಸ್ಟ್ರೇಟಿವ್ ಕೋರ್ಟು) ಸೇರಿರುತ್ತದೆ.

ಕೇಂದ್ರಸರ್ಕಾರವು ಮುನಿಸಿಪಾಲಿಟಿಗಳಿಗೆ ಎಷ್ಟರಮಟ್ಟಿಗೆ ಸ್ವತಂತ್ರಾಧಿಕಾರವನ್ನು ಕೊಡಬಹುದೊ ಅಷ್ಟನ್ನೂ ಶಾಸನಗಳ ಮೂಲಕ ಕೊಟ್ಟು ಅವುಗಳ ಗೋಜಿಗೆ ಹೋಗದಿರುವುದು ಮತ್ತೊಂದು ವಿಧ. ಅಮೆರಿಕಾ ಸಂಯುಕ್ತ ರಾಜ್ಯದಲ್ಲಿರುವ ಮುನಿಸಿಪಾಲಿಟಿಗಳು ಇದಕ್ಕೆ ಉದಾಹರಣೆಗಳಾಗಿವೆ. ಮುನಿಸಿಪಾಲಿಟಿಗಳನ್ನು ಸ್ಥಾಪಿಸುವ ವೇಳೆಯಲ್ಲಿ ಯಾವ ಮುನಿಸಿಪಾಲಿಟಿಗೆ ಎಷ್ಟು ಸ್ವಾತಂತ್ರ್ಯವನ್ನು ಕೊಡಬಹುದು ಎಂಬುದನ್ನು ಪ್ರತಿಯೊಂದು ಸಂಸ್ಥಾನ (ಉಪರಾಜ್ಯ) ನಿರ್ಣಯಿಸುವುದು. ಹಾಗೆ ನಿರ್ಧರಿಸಿ ಒಂದು ಸಲ ಸ್ವತಂತ್ರಾಧಿಕಾರವನ್ನು ಮುನಿಸಿಪಾಲಿಟಿಗೆ ಕೊಟ್ಟ ಮೇಲೆ ಸಂಸ್ಥಾನದ ಸರ್ಕಾರ ಆ ಮುನಿಸಿಪಾಲಿಟಿಯ ಆಡಳಿತ ಕಾರ್ಯಗಳಲ್ಲಿ ತಲೆಹಾಕುವ ಹಾಗಿಲ್ಲ. ಅಂದರೆ ಮುನಿಸಿಪಾಲಿಟಿ ಸ್ಥಾಪನೆಯ ಕಾಲದಲ್ಲಿ ರಚಿಸಿದ ಶಾಸನವನ್ನು ಮೀರದಂತೆ ಅವು ಸ್ವತಂತ್ರ ಆಡಳಿತವನ್ನು ನಡೆಯಿಸಬಹುದು. ಪೌರರ ಮೇಲೆ ತೆರಿಗೆ, ಕಂದಾಯಗಳನ್ನು ಹಾಕುವುದು, ಪುರದ ರಕ್ಷಣೆಗೋಸ್ಕರ ಪೋಲಿಸ್ ಸಿಬ್ಬಂದಿಯನ್ನು ನೇಮಿಸಿ ಸೂಕ್ತವಾದ ನಿಬಂಧನೆಗಳನ್ನು ಮಾಡುವುದು, ನೀರು, ದೀಪ, ವಾಹನ ಮುಂತಾದ ಸೌಕರ್ಯಗಳನ್ನು ಏರ್ಪಡಿ

ಸುವುದು, ನ್ಯಾಯವ್ಯವಸ್ಥೆಗೆ ತಕ್ಕ ಏರ್ಪಾಡು ಮಾಡುವುದು-ಇವೆಲ್ಲವನ್ನೂ ಆಯಾ ಮುನಿಸಿಪಾಲಿಟಿಯು ಸ್ವತಂತ್ರವಾಗಿ ನಡೆಸಬಹುದು. ಇವುಗಳಲ್ಲಿ ಉಪರಾಜ್ಯದ ಸರ್ಕಾರವು ಪ್ರವೇಶಿಸಲು ಅವಕಾಶವೇ ಇಲ್ಲ. ಆದರೆ ಇಷ್ಟು ಸ್ವತಂತ್ರವನ್ನು ಅನುಭವಿಸುತ್ತಿರುವ ಅಮೆರಿಕಾದೇಶದ ಮುನಿಸಿಪಾಲಿಟಿಗಳೂ ಕೂಡ ಇತ್ತೀಚೆಗೆ ಕಾಲ ಧರ್ಮ ವ್ಯತ್ಯಾಸದಿಂದ ಉಪರಾಜ್ಯ ಸರ್ಕಾರಗಳ ಅಧೀನಕ್ಕೆ ಹೆಚ್ಚು ಹೆಚ್ಚಾಗಿ ಒಳಪಡುತ್ತಿರುವುವು. ಮುನಿಸಿಪಾಲಿಟಿಗಳ ವರಮಾನ ಕಡಿಮೆಯಾಗಿ ವಿಶೇಷಜ್ಞರ (ಎಕ್ಸ್‌ಪರ್ಟ್ಸ್) ಸಲಹೆಗಳ ಸೌಲಭ್ಯವಿಲ್ಲದಿರುವುದರಿಂದಲೂ ಆಡಳಿತ ಕಾರ್ಯಗಳು ಬರಬರುತ್ತಾ ಅತಿ ಸಂಕೀರ್ಣವಾಗುತ್ತಿರುವುದರಿಂದಲೂ ಅವು ಸಂಸ್ಥಾನದ ಸಹಾಯವನ್ನು ಕೋರುತ್ತಿರುವುವು.

ಕೇಂದ್ರ ಸರ್ಕಾರದ ಅಧಿಕಾರಕ್ಕಾಗಲಿ ಮುನಿಸಿಪಾಲಿಟಿಗಳ ಒಳ ಆಡಳಿತದ ಸ್ವಾತಂತ್ರ್ಯಕ್ಕಾಗಲಿ ಕುಂದು ಬಾರದಂತೆ ಆಡಳಿತ ಸಾಮರಸ್ಯವಿರುವುದು ಮತ್ತೊಂದು ರೀತಿಯದು. ಇವಕ್ಕೆ ಇಂಗ್ಲೆಂಡಿನ ಮುನಿಸಿಪಾಲಿಟಿಗಳು ಒಳ್ಳೆಯ ನಿದರ್ಶನಗಳು. ಇಂಗ್ಲೆಂಡಿನ ಮುನಿಸಿಪಾಲಿಟಿಗಳು ಆ ದೇಶದ ಕೇಂದ್ರ ಸರ್ಕಾರದಿಂದ ಅಂದರೆ ಪಾರ್ಲಿಮೆಂಟಿನಿಂದ ಪುರಾಡಳಿತದ ಅಧಿಕಾರವನ್ನು ಪಡೆದಿರುತ್ತವೆಯಾದರೂ ಆ ದೇಶದಲ್ಲಿ ಕೇಂದ್ರ ಸರ್ಕಾರಕ್ಕೂ ಮುನಿಸಿಪಾಲಿಟಿಗಳಿಗೂ ಹೆಚ್ಚು ಸೌಹಾರ್ದವಿರುತ್ತದೆ. ಅಂದರೆ ಕೇಂದ್ರ ಸರ್ಕಾರದ ಮೇಲ್ವಿಚಾರಣೆ, ಮುನಿಸಿಪಾಲಿಟಿಗಳ ಸ್ವತಂತ್ರಾಡಳಿತ—ಇವುಗಳೆರಡಕ್ಕೂ ಕುಂದಕ ಬರದಂತೆ ಸಾಮರಸ್ಯವನ್ನು ಸಾಧಿಸಿರುವುದು ಇಂಗ್ಲಿಷರ ಆಡಳಿತದ ರೀತಿ. ಮುನಿಸಿಪಲ್ ಆಡಳಿತವು ಯಶಸ್ವಿಯಾಗಿ ನಡೆಯಬೇ

ಕೆಂಬುದು ಕೇಂದ್ರಸರ್ಕಾರದ ಮೇಲ್ವಿಚಾರಣೆಯ ಉದ್ದೇಶವೇ ಹೊರತು ಮುನಿಸಿಪಾಲಿಟಿಗಳ ಸ್ವತಂತ್ರಾಧಿಕಾರವನ್ನು ಅಪಹರಿಸ ಬೇಕೆಂಬುದಲ್ಲ. ಉದಾಹರಣೆಗಾಗಿ ಮುನಿಸಿಪಾಲಿಟಿಗಳು ಮಾಡ ಬೇಕೆಂದಿರುವ ಸಾಲ, ಅವುಗಳ ಆಯುವ್ಯಯವನ್ನು ತನಿಖೆಮಾಡು ವುದು, ಆಡಳಿತ ವಿಚಾರದಲ್ಲಿ ಸಲಹೆ ಬುದ್ಧಿವಾದಗಳನ್ನು ಹೇಳು ವುದು, ದ್ರವ್ಯಾಭಾವವಿರುವ ಮುನಿಸಿಪಾಲಿಟಿಗಳಿಗೆ ದ್ರವ್ಯಸಹಾ ಯವನ್ನು (ಗ್ರಾಂಟು) ಮಾಡುವುದು, ಅಸಭ್ಯರೀತಿಯಿಂದ ಪ್ರವ ರ್ತಿಸುತ್ತಿರುವ ಮುನಿಸಿಪಾಲಿಟಿಗಳಿಗೆ ಕೊಡುವ ಗ್ರ್ಯಾಂಟು ಗಳನ್ನು ರದ್ದುಗೊಳಿಸುವುದು, ದಾರಿದ್ರ್ಯ ನಿವಾರಣೆ—ಈ ವಿಷ ಯಗಳಲ್ಲಿ ಕೇಂದ್ರ ಸರಕಾರವು ಮೇಲ್ವಿಚಾರಣೆಯನ್ನು ನಡೆಯಿ ಸುತ್ತಿರುವುದು.

ಇಂಗ್ಲೆಂಡಿನ ಮುನಿಸಿಪಾಲಿಟಿಗಳು ಹೆಜ್ಜೆಹೆಜ್ಜೆಗೂ ಫ್ರಾನ್ ಸಿನ ಮುನಿಸಿಪಾಲಿಟಿಗಳಂತೆ ಕೇಂದ್ರ ಸರ್ಕಾರದ ಅಪ್ಪಣೆ ಯನ್ನು ಪಡೆಯಬೇಕಾಗಿಲ್ಲ. ಇಂಗ್ಲೆಂಡಿನಲ್ಲಿ ಕೇಂದ್ರ ಸರ್ಕಾ ರದ ಮೇಲ್ವಿಚಾರಣೆ ಎಂದರೆ ಪಾರ್ಲಿಮೆಂಟಿನ ಮೇಲ್ವಿ ಚಾರಣೆ ಎಂದು ಸಾಮಾನ್ಯ ಅರ್ಥ. ಪಾರ್ಲಿಮೆಂಟಿನ ಅಧಿಕಾರ ಪ್ರಾಬಲ್ಯವೆಂದರೆ ಶಾಸನಪ್ರಾಬಲ್ಯವೆಂದು ವಿಶೇಷಾರ್ಥ. ಜರ್ಮನಿ, ಫ್ರಾನ್ಸ್‌ದೇಶಗಳಲ್ಲಿಯಾದರೋ ಶಾಸನಗಳ ಪ್ರಾಶಸ್ತ್ಯಕ್ಕಿಂತ ಕೇಂದ್ರ ಸರಕಾರದ ಅಧಿಕಾರಿಗಳ ದರ್ಪವೇ ಅಧಿಕ. ಫ್ರಾನ್ಸ್ ಜರ್ಮನಿ ದೇಶಗಳಲ್ಲಿ ಕೇಂದ್ರ ಸರ್ಕಾರ ಮುನಿಸಿಪಲ್ ಮುಖ್ಯಾಧಿ ಕಾರಿಗಳನ್ನು ನೇಮಿಸುವುದು, ಮ್ಯುನಿಸಿಪಾಲಿಟಿಗಳು ಕೊಡುವ ತೀರ್ಪನ್ನು ರದ್ದುಮಾಡಬಲ್ಲದು, ಮ್ಯುನಿಸಿಪಲ್ ಸದಸ್ಯರನ್ನು ವಜಾಮಾಡಬಲ್ಲದು, ಮ್ಯುನಿಸಿಪಲ್ ಸಮಿತಿಗೂ ಕೂಡಾ ಮುಟ್ಟುಗೋಲು ಹಾಕಬಲ್ಲದು. ಈ ಕಾರಣಗಳಿಂದ ಆ ದೇಶ

ಗಳ ಮುನಿಸಿಪಾಲಿಟಿಗಳು ಕೇಂದ್ರ ಸರ್ಕಾರದ ಅಧೀನದಲ್ಲಿರುವುವು ಎಂದು ಹೇಳಬಹುದು.

ಇಂಗ್ಲೆಂಡಿನಲ್ಲಿಯಾದರೂ ಕೇಂದ್ರ ಅಧಿಕಾರಿಗಳ ದರ್ಪಕ್ಕಿಂತಲೂ ಶಾಸನದಿಂದ ವಿಧಾಯಕವಾದ ನೀತಿಗೆ ಹೆಚ್ಚು ಮನ್ನಣೆ ಇರುವುದರಿಂದ ಕೇಂದ್ರ ಸರ್ಕಾರದಿಂದ ಮುನಿಸಿಪಾಲಿಟಿಗಳ ಸ್ವತಂತ್ರ ಆಡಳಿತಕ್ಕೆ ಹೆಚ್ಚು ಅಡಚಣೆ ಇಲ್ಲ. ಆದುದರಿಂದ ಆ ಮುನಿಸಿಪಾಲಿಟಿಗಳು ಕ್ರಮಕ್ರಮವಾಗಿಯೂ ಅವಿಚ್ಛಿನ್ನವಾಗಿಯೂ ಬೆಳೆಯುತ್ತಾ ಪ್ರಜಾಸೇವೆಯನ್ನು ಮಾಡುತ್ತಿರುವುವು.

ನಮ್ಮ ದೇಶದ ಮುನಿಸಿಪಾಲಿಟಿಗಳಾದರೋ ಇನ್ನೂ ಬಾಲ್ಯಾವಸ್ಥೆಯಲ್ಲಿವೆ. ಇವುಗಳಿಗೆ ಇಂಗ್ಲೆಂಡಿನ ಮುನಿಸಿಪಾಲಿಟಿಗಳು ಮಾದರಿಯಾಗಿದ್ದರೂ ಆ ಮಾದರಿ ಮುನಿಸಿಪಾಲಿಟಿಗಳಿಗೂ ನಮ್ಮ ಮುನಿಸಿಪಾಲಿಟಿಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. 1870 ನೆಯ ಇಸವಿಯ ವರೆಗೆ ಇಂಡಿಯಾದಲ್ಲಿ ಮದರಾಸ್, ಬೊಂಬಾಯಿ, ಕಲ್ಕತ್ತೆಗಳನ್ನು ಹೊರತು ಇತರ ದೊಡ್ಡ ಪಟ್ಟಣಗಳಲ್ಲಿ ಮುನಿಸಿಪಲ್ ಸಂಸ್ಥೆಗಳೇ ಇರಲಿಲ್ಲ. ಲಾರ್ಡ್ ಮೇಯೋ ಅಧಿಕಾರಕ್ಕೆ ಬಂದಾಗ ಸ್ಥಳೀಯ ಪ್ರಾಂತ್ಯಗಳಿಗೆ ಹಣಕಾಸಿನ ವಿಚಾರದಲ್ಲಿ ಸ್ವಲ್ಪ ಸ್ವತಂತ್ರಾಧಿಕಾರ ದೊರೆಯಿತು. "ವಿದ್ಯಾಭ್ಯಾಸ, ಆರೋಗ್ಯ ರಕ್ಷೆ, ಸೇತುವೆ ಮೊದಲಾದ ಸಾರ್ವಜನಿಕ ಕೆಲಸಗಳು ವಿಚಕ್ಷಣೆಯಿಂದ ನಡೆಯಬೇಕಾದರೆ ಆ ಕೆಲಸಗಳನ್ನು ನಡೆಯಿಸುವ ಜವಾಬ್ದಾರಿಯನ್ನು ಸ್ಥಳೀಯ ಪ್ರಾಂತಗಳಿಗೆ ವಹಿಸಬೇಕು" ಎಂಬ ಸಂಪ್ರದಾಯ ಮೊದಲಾಯಿತು. ಇವನ ತರುವಾಯ ಅಧಿಕಾರಕ್ಕೆ ಬಂದ ರಿಪನ್ ಸ್ಥಳೀಯ ಸರಕಾರ ಪದ್ಧತಿಗೆ ಮತ್ತಿಷ್ಟು ಪ್ರೋತ್ಸಾಹ ಕೊಟ್ಟನು. ಯಾವ ಯಾವ ಪ್ರಾಂತಗಳಲ್ಲಿ

ಖಾಸಗಿ ಜನರು ಬುದ್ಧಿವಂತರಾಗಿ ದೇಶಸೇವೆಗೆ ಸಿದ್ಧರಾಗಿರುವರೋ ಅಲ್ಲಿನ ಸ್ಥಳೀಯ ಸರ್ಕಾರಗಳಿಗೆ ಸ್ವತಂತ್ರಾಧಿಕಾರವನ್ನು ಕೊಡುವುದು ಸೂಕ್ತವೆಂಬುದು ಅವನ ನೀತಿ. ಇವನ ಸುಧಾರಣೆಗಳು ಕೂಡಲೆ ಫಲಿಸದಿದ್ದರೂ ಕ್ರಮೇಣ ಜನರ ದೃಷ್ಟಿಯನ್ನು ಬದಲಾಯಿಸಿ, ರಾಜ್ಯ ನಮ್ಮದು, ಆಡಳಿತದ ಜವಾಬ್ದಾರಿ ನಮಗೆ ಸೇರಿದ್ದು ಎಂಬ ಹೊಸ ತಿಳಿವು ಉತ್ಸಾಹಗಳನ್ನು ಜನರಲ್ಲಿ ಹುಟ್ಟಿಸುವುವೆಂದು ಅವನು ನಂಬಿದ್ದನು. ಆದರೆ ಈ ಸುಧಾರಣೆಗಳಿಂದ ಸ್ಥಳೀಯ ಸರಕಾರಗಳ ಸ್ಥಿತಿಯು ಮುಂದುವರಿಯಲಿಲ್ಲ. ಒಂದು ಕಡೆ ಕೇಂದ್ರ ಸರ್ಕಾರದ ತಾತ್ಸಾರ, ಮತ್ತೊಂದು ಕಡೆ ಜನರ ಅಜ್ಞಾನ, ದಾರಿದ್ರ್ಯ - ಇವು ಸ್ಥಳೀಯ ಸ್ವತಂತ್ರಾಧಿಕಾರಕ್ಕೆ ಅಡಚಣೆಗಳಾಗಿದ್ದುವು. 1909 ರಲ್ಲಿ ಕೇಂದ್ರ ಸರಕಾರದ ಅಧಿಕಾರದಲ್ಲಿ ಸ್ವಲ್ಪಭಾಗವನ್ನು ಸ್ಥಳೀಯ ಸರಕಾರಗಳಿಗೆ ಕೊಡುವ ಉದ್ದೇಶದಿಂದ 'ಡಿಸೆಂಟ್ರಲೈಜೇಷನ್ ಕಮಿಟಿ' ನೇಮಕವಾಯಿತು. ಸ್ಥಳೀಯ ಸರ್ಕಾರಗಳಲ್ಲಿ ಪ್ರಜೆಗಳಿಂದ ಚುನಾಯಿತರಾದ ಅಧಿಕಾರಿಗಳಿರಬೇಕು, ಚಿಲ್ಲರೆ ವರಮಾನದ ಬಾಬುಗಳನ್ನು ಕೇಂದ್ರ ಸರ್ಕಾರ ಸ್ಥಳೀಯ ಸರ್ಕಾರಗಳಿಗೆ ವಹಿಸಬೇಕು; ಸ್ಥಳೀಯ ಸರ್ಕಾರಗಳನ್ನು ಪರಾಮರ್ಶಿಸುವುದಕ್ಕೋಸ್ಕರ ಲೋಕಲ್ ಸೆಲ್ಫ್ ಗೌರ್ನ್ಮೆಂಟ್ ಇಲಾಖೆಯೊಂದನ್ನು ಸ್ಥಾಪಿಸಬೇಕು; ನೀರು, ಆರೋಗ್ಯ ಮೊದಲಾದ ಪ್ರಜಾಸೌಕರ್ಯಗಳಿಗಾಗಿ ಕೇಂದ್ರ ಸರ್ಕಾರ ಸ್ಥಳೀಯ ಸರ್ಕಾರಗಳಿಗೆ ದ್ರವ್ಯಸಹಾಯ ಮಾಡಬೇಕು - ಇವೇ ಮೊದಲಾದ ಸುಧಾರಣೆಗಳು ಬಂದವು.

ಇಷ್ಟಾದರೂ ಸ್ಥಳೀಯಸರ್ಕಾರಗಳ ಸ್ಥಿತಿಯು ಮುಂದುವರಿಯಲಿಲ್ಲ. ಹೀನಸ್ಥಿತಿಯಲ್ಲಿದ್ದ ಸ್ಥಳೀಯ ಸರ್ಕಾರಗಳನ್ನು

ಮೇಲಕ್ಕೆ ಎತ್ತಬೇಕೆಂಬ ಉದ್ದೇಶದಿಂದ ಇನ್ನೂ ಕೆಲವು ಸುಧಾರಣೆಗಳನ್ನು ಗೌರ್ನರ್ ಜನರಲ್ ಛಂಸ್ಫರ್ಡ್ ಆಚರಣೆಗೆ ತಂದನು. (ಮಾಂಟೆಗ್ಯೂ-ಛಂಸ್ಫರ್ಡ್ ಸುಧಾರಣೆ). ಚುನಾವಣೆ ಪದ್ಧತಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು, ಸ್ಥಳೀಯ ಸರ್ಕಾರಗಳ ಆಯವ್ಯಯದ ವಿಷಯದಲ್ಲಿ ಕೇಂದ್ರ ಸರ್ಕಾರ ಹೆಚ್ಚಾಗಿ ಅಡ್ಡಿ ಬರಕೂಡದು. ಸ್ಥಳೀಯ ಸರ್ಕಾರದ ಸಮಿತಿಗಳಲ್ಲಿ ಚುನಾಯಿತರ ಸಂಖ್ಯೆಯನ್ನು ಹೆಚ್ಚಿಸಿ ನಾಮಕರಣ ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡಬೇಕು, ಓಟು ಕೊಡುವ ಹಕ್ಕು ಸಾಮಾನ್ಯ ಪ್ರಜೆಗಳಿಗೆಲ್ಲಾ ದೊರೆಯಬೇಕು, ಮುನಿಸಿಪಾಲಿಟಿಗಳಿಗೆ ಪೌರರಿಂದ ಚುನಾಯಿತನಾದ ಅಧ್ಯಕ್ಷನನ್ನು ಕೊಡಬೇಕು -- ಈ ರೀತಿಯಾದ ಸುಧಾರಣೆಗಳು ಆಚರಣೆಗೆ ಬಂದವು.

ಪ್ರಕೃತ ಬ್ರಿಟಿಷ್ ಇಂಡಿಯಾದಲ್ಲಿ ಸುಮಾರು 800 ಮುನಿಸಿಪಾಲಿಟಿಗಳಿವೆ. ಇವು ಆಯಾಯ ಪ್ರಾಂತಗಳಲ್ಲಿರುವ ಸರ್ಕಾರಗಳಿಂದ (ಪ್ರಸಿಡೆನ್ಸಿ ಸರ್ಕಾರಗಳು) ಸ್ಥಾಪಿಸಲ್ಪಟ್ಟು ಆಯಾಯ ಪ್ರಾಂತಸರ್ಕಾರಗಳ ಆಶ್ರಯದಲ್ಲಿರುವುವು. ಮುನಿಸಿಪಾಲಿಟಿಗಳ ಮೇಲೆ ಇಂಡಿಯಾಕೇಂದ್ರಸರ್ಕಾರಕ್ಕೆ ಪ್ರತ್ಯಕ್ಷವಾದ ಅಧಿಕಾರವಿಲ್ಲ. ಆದರೆ ಇವುಗಳಮೇಲೆ ಆ ಪ್ರಾಂತಗಳಲ್ಲಿರುವ ಸರ್ಕಾರಗಳಿಗೆ ಪೂರ್ಣಾಧಿಕಾರವಿರುವುದು. ಮುನಿಸಿಪಲ್ ಆಡಳಿತದ ವರದಿಯನ್ನು ಕೇಳುವುದು, ಸಂದೇಹಬಂದಾಗ ಮುನಿಸಿಪಲ್ ಆಡಳಿತವನ್ನು ತನಿಖೆಮಾಡುವುದು, ಹದಗೆಡುತ್ತಿರುವ ಮುನಿಸಿಪಲ್ ಆಡಳಿತವನ್ನು ಸರಿಪಡಿಸುವುದಕ್ಕೋಸ್ಕರ ಅಧಿಕಾರಿಗಳನ್ನು ಕಳುಹಿಸುವುದು, ಮುನಿಸಿಪಲ್ ಆಡಳಿತಗಳು ಹೀಗೆಯೇ ನಡೆಯಬೇಕೆಂದು ಆಗಿಂದಾಗ್ಗೆ ಆಜ್ಞೆಮಾಡುವುದು, ಮುನಿಸಿಪಾಲಿಟಿಗಳು ಒಪ್ಪಿ ಕಳುಹಿಸುವ ಉಪನಿಯಮ

ಸಲಹೆಗಳನ್ನು ಅನುಮೋದಿಸುವುದು ಅಥವಾ ರದ್ದುಮಾಡುವುದು, ಮುನಿಸಿಪಾಲಿಟಿಗಳು ಮಾಡಬೇಕೆಂದಿರುವ ಸಾಲಕ್ಕೆ ಅನುಮತಿಯನ್ನು ಕೊಡುವುದು ಅಥವಾ ಮುಟ್ಟುಗೋಲು ಹಾಕುವುದು - ಇವೆಲ್ಲಕ್ಕೂ ಪ್ರಾಂತಸರ್ಕಾರಗಳಿಗೆ ಅಧಿಕಾರವಿದೆ. ಪ್ರಜಾಕ್ಷೇಮದ ಮತ್ತು ಆಡಳಿತದ ವಿಚಕ್ಷಣೆಯ ದೃಷ್ಟಿಗಳಿಂದ ಈ ನಿರ್ಬಂಧಗಳಲ್ಲಿ ಕೆಲವು ನ್ಯಾಯವೆಂದೇ ಹೇಳಬಹುದು. ಆದರೆ ಸ್ವತಂತ್ರಾಧಿಕಾರಕ್ಕಿಂತ ನಿರ್ಬಂಧಗಳೇ ಅಧಿಕವಾಗಿರುವುದರಿಂದ ಇಂಡಿಯಾದೇಶದ ಮುನಿಸಿಪಾಲಿಟಿಗಳು ಪಾಶ್ಚಾತ್ಯ ದೇಶಗಳ ಮುನಿಸಿಪಾಲಿಗಳ ಮಟ್ಟಕ್ಕೆ ಇನ್ನೂ ಬಂದಿಲ್ಲವೆಂದು ಹೇಳಬಹುದು.

---

## ೪. ಇಂಗ್ಲೆಂಡಿನ ಮುನಿಸಿಪಾಲಿಟಿಗಳು

ಒಂದು ದೇಶದ ಜನರು ಸ್ವತಂತ್ರವಾಗಿರುವುದಕ್ಕೆ ಆ ದೇಶದ ಸ್ಥಳೀಯ ಸಂಸ್ಥೆಗಳಿಗಿರುವ ಸ್ವಾತಂತ್ರ್ಯವೇ ಹೆಗ್ಗುರುತು. ಸ್ಥಳೀಯ ಸಂಸ್ಥೆಗಳು ಜನರ ಕಷ್ಟಸುಖಗಳನ್ನು ವಿಚಾರಿಸುವುದಲ್ಲದೆ ಆಡಳಿತವಿಚಾರದಲ್ಲಿ ಜನರಿಗೆ ಪ್ರಥಮಶಿಕ್ಷಣವನ್ನು ಕೊಡುವುವು. ಸ್ವಾತಂತ್ರ್ಯತತ್ವಕ್ಕನುಸಾರವಾಗಿ ಸರ್ಕಾರವನ್ನು ರಚಿಸುವುದು ಕಷ್ಟವಲ್ಲ. ಆ ಸ್ವಾತಂತ್ರ್ಯವನ್ನು ಆಚರಣೆಗೆ ತರುವುದೀಗ ಕಷ್ಟ. ಸ್ಥಳೀಯ ಸಂಸ್ಥೆಗಳಿಗೆ ಸ್ವಾತಂತ್ರ್ಯವನ್ನು ಕೊಡದೆ ಕೇಂದ್ರಸರ್ಕಾರದ ಮೂಲಕವೇ ಸ್ವತಂತ್ರ ತತ್ವವನ್ನು ಆಚರಣೆಗೆ ತರುವುದೆಂದರೆ ಮರಳಿನ ಪಾಯದಮೇಲೆ ಮಹಲನ್ನು ಕಟ್ಟುವು

ದಕ್ಕೆ ಪ್ರಯತ್ನಿಸಿದಂತಾಗುವುದು. ಸ್ವಾತಂತ್ರ್ಯದ ಸತ್ವವನ್ನು ತಲೆಮಾರಿನಿಂದ ರಕ್ಷಿಸಿಕೊಂಡು ಬಂದಿರುವ ಜನರಲ್ಲಿ ಆಂಗ್ಲೇಯರು ಆದರ್ಶಪ್ರಾಯರಾಗಿರುತ್ತಾರೆ. ಆಂಗ್ಲೇಯರ ಸ್ಥಳೀಯ ಸಂಸ್ಥೆಗಳೇ ಇದಕ್ಕೆ ದೊಡ್ಡ ನಿದರ್ಶನ.

**ನಗರಾಧ್ಯಕ್ಷ:** ಇಂಗ್ಲೆಂಡಿನಲ್ಲಿರುವ ಪ್ರತಿಯೊಂದು ಮುನಿಸಿಪಾಲಿಟಿಯ ಆಡಳಿತದ ಜವಾಬ್ದಾರಿಯು ನಗರಾಧ್ಯಕ್ಷ (ಮೇಯರ್), ಪುರಪ್ರಮುಖರು (ಎಲ್ಡರ್‌ಮೆನ್), ಪುರಸಮಿತಿ (ಕೌನ್ಸಿಲ್), ಪುರಾಧಿಕಾರಿಗಳಿಗೆ ಸೇರಿರುವುದು. ನಗರಾಧ್ಯಕ್ಷನು ಪುರಸಮಿತಿಯಿಂದ ಚುನಾಯಿತನಾದ ಶ್ರೇಷ್ಠಾಧಿಕಾರಿ. ಅಧ್ಯಕ್ಷನ ಸ್ಥಾನಕ್ಕೆ ಬರುವ ಉಮೇದುವಾರನಿಗೆ ಪುರಸಮಿತಿಗೆ ಉಮೇದುವಾರರಾಗಿ ನಿಲ್ಲುವವರಿಗೆ ಇರಬೇಕಾದ ಯೋಗ್ಯತೆಯಿದ್ದರೆ ಸಾಕು. ಆದರೆ ಚುನಾಯಿತನಾಗಬೇಕಾದರೆ ಅವನು ಪೌರರಲ್ಲಿ ಗಣ್ಯನಾಗಿಯೂ ಅನುಕೂಲಸ್ಥನಾಗಿಯೂ ಇರಬೇಕಾದುದು ಅತ್ಯಾವಶ್ಯಕ. ಏಕೆಂದರೆ ಅಧ್ಯಕ್ಷನಿಗೆ ಇರಬೇಕಾದದ್ದು ಆಡಳಿತದ ಅನುಭವವಲ್ಲ, ದ್ರವ್ಯಾನುಕೂಲ. ಪಟ್ಟಣಕ್ಕೆ ಬರುವ ದೊಡ್ಡ ಮನುಷ್ಯರನ್ನು ಸತ್ಕರಿಸಿ ಅವರನ್ನು ಸಂತೋಷಗೊಳಿಸುವ ಶಕ್ತಿಯು ಅಧ್ಯಕ್ಷನಲ್ಲಿರಬೇಕು. ಅಧ್ಯಕ್ಷನ ಅಧಿಕಾರಾವಧಿ ಒಂದು ವರ್ಷ. ಇವನಿಗೆ ವೇತನವಿಲ್ಲ, ಆದರೆ ಅಧ್ಯಕ್ಷಸ್ಥಾನದ ಗೌರವವನ್ನು ಕಾಪಾಡಿಕೊಳ್ಳುವುದಕ್ಕೆ ತಕ್ಕ ಗೌರವದ ವೇತನ ಉಂಟು. ಯೋಗ್ಯವಾದ ವೇತನವನ್ನು ದೊಡ್ಡ ಮುನಿಸಿಪಾಲಿಟಿಗಳು ಕೊಡಬಲ್ಲವೇ ಹೊರತು ಸಣ್ಣ ಮುನಿಸಿಪಾಲಿಟಿಗಳು ಕೊಡಲಾರವೆಂದು ಮತ್ತೆ ಬೇರೆ ಹೇಳಬೇಕಾಗಿಲ್ಲ.

ಪೌರರ ಪ್ರತಿನಿಧಿಸಭೆಯ ಕಾರ್ಯಕಲಾಪಗಳು ನಗರಾಧ್ಯಕ್ಷನ

ಅಧ್ಯಕ್ಷತೆಯಲ್ಲಿ ನಡೆಯುವುವು. ಆಡಳಿತದ ವಿಚಾರದಲ್ಲಿ ಅಧ್ಯಕ್ಷನ ಕೈವಾಡ ಕಡಿಮೆ. ಸಮಿತಿಯು ಕೊಡುವ ತೀರ್ಪನ್ನು ರದ್ದುಮಾಡುವುದಕ್ಕೂ ಮುನಿಸಿಪಲ್ ನೌಕರರನ್ನು ನೇಮಿಸುವುದಕ್ಕೂ ಅಧ್ಯಕ್ಷನಿಗೆ ಅಧಿಕಾರವಿಲ್ಲ. ಆದರೂ ಅಧ್ಯಕ್ಷನಿಗೆ ಪಟ್ಟಣದಲ್ಲಿ ಗಣ್ಯಸ್ಥಾನವುಂಟು. ಅಲ್ಲಿನ ವಿಶೇಷಕಾರ್ಯಗಳು ಅಧ್ಯಕ್ಷನ ನೇತೃತ್ವದಲ್ಲಿ ನಡೆಯುವುವು. ಮುನಿಸಿಪಾಲಿಟಿಗೆ ಸೇರಿದ ಉಪಸಮಿತಿಗಳಲ್ಲೆಲ್ಲಾ ಅಧ್ಯಕ್ಷನೇ ಅಗ್ರಾಸನವನ್ನು ವಹಿಸುವನು. ಪೌರರ ದೈನಂದಿನ ಅಹವಾಲುಗಳನ್ನು ಕೇಳಿ ಅವುಗಳನ್ನು ಅಧಿಕಾರಿಗಳಿಗೆ ತಿಳಿಸಿ ಜನರಿಗೆ ನೆರವಾಗುವುದು ಅಧ್ಯಕ್ಷನ ಮತ್ತೊಂದು ಕರ್ತವ್ಯ. ಪುರಪ್ರಮುಖರು (ಎಲ್ಡರ್ ಮೆನ್) ಕೂಡ ಸಮಿತಿಯಿಂದಲೇ ಚುನಾಯಿತರಾದರು. ಪುರಸಮಿತಿ ಸದಸ್ಯರ ಒಟ್ಟು ಸಂಖ್ಯೆಯಲ್ಲಿ ಸುಮಾರು ⅓ ಭಾಗದಷ್ಟು ಪುರಪ್ರಮುಖರಿರಬಹುದೆಂದು ಶಾಸನವಿರುವುದು. ಪುರಪ್ರಮುಖರ ಅಧಿಕಾರಾವಧಿ 6 ವರ್ಷಗಳು. ಇವರ ಪೈಕಿ ½ ಭಾಗ 3 ವರ್ಷಗಳಿಗೊಂದಾವರ್ತಿ ಕೆಲಸದಿಂದ ನಿವೃತ್ತರಾಗುವರು. ಆಡಳಿತದಲ್ಲಿ ಪರಿಶ್ರಮವಿರುವವರನ್ನೇ ಪುರಪ್ರಮುಖರನ್ನಾಗಿ ಚುನಾಯಿಸುವುದು ಸಂಪ್ರದಾಯ. ಈ ಕಾರಣದಿಂದ ಕೆಲವರನ್ನು 3-4 ಸಲ ಪುರಪ್ರಮುಖರನ್ನಾಗಿ ಚುನಾಯಿಸುವುದೂ ಉಂಟು. ಪುರಪ್ರಮುಖರಿಗಾಗಿ ಬೇರೆ ಸಮಿತಿಯಿಲ್ಲ. ಪುರಸಮಿತಿಯಲ್ಲಿ ಇವರೂ ಇತರ ಸದಸ್ಯರೂ ಕಲೆತು ಸೌಹಾರ್ದದಿಂದ ಕೆಲಸಮಾಡುವರು. ಕೆಲವು ವೇಳೆ ಪುರಪ್ರಮುಖರು ಉಪಸಮಿತಿಗಳ ಅಧ್ಯಕ್ಷರಾಗಿಯೊ ಚುನಾವಣೆಕಾಲದಲ್ಲಿ ರಿಟರ್ನಿಂಗ್ ಆಫೀಸರಾಗಿಯೊ ಕೆಲಸಮಾಡುವುದುಂಟು.

**ಪುರಸಮಿತಿ:** ಸಮಿತಿಯ ಸದಸ್ಯರು ಪೌರರಿಂದ ಚುನಾ

ಯಿತರಾದವರು. ಸದಸ್ಯರನ್ನು ಚುನಾಯಿಸುವ ಹಕ್ಕು ಪ್ರಾಪ್ತ ವಯಸ್ಕರಾದ ಪೌರರಿಗೆಲ್ಲಾ (ಗಂಡಸರು, ಹೆಂಗಸರು) ಇರುವುದು. ಸಮಿತಿ ಸದಸ್ಯರ ಸಂಖ್ಯೆ ಮುನಿಸಿಪಾಲಿಟಿ ಪ್ರಜಾಸಂಖ್ಯೆಗನುಗುಣವಾಗಿರುವುದು. ಉದಾಹರಣೆಗಾಗಿ, ಬರ್ಮಿಂಗ್ಯಾಂನಲ್ಲಿ 72, ಲಿವರ್‌ಪೂಲಿನಲ್ಲಿ 130 ಸದಸ್ಯರಿರುವರು. ಸಣ್ಣ ಮುನಿಸಿಪಲ್ ಸಮಿತಿಯು ಸಭೆ ತಿಂಗಳಿಗೊಂದಾವರ್ತಿಯೂ ದೊಡ್ಡ ಮುನಿಸಿಪಾಲಿಟಿಗಳ ಸಭೆ ವಾರಕ್ಕೊಂದಾವರ್ತಿಯೂ ಸೇರುವುದು. ನಗರಾಧ್ಯಕ್ಷನಾಗಲಿ ಪುರಪ್ರಮುಖರಲ್ಲೊಬ್ಬನಾಗಲಿ ಅಗ್ರಸ್ಥಾನದಲ್ಲಿ ಕುಳಿತು ಸಮಿತಿಯ ಕಾರ್ಯಕಲಾಪಗಳನ್ನು ನಡೆಯಿಸುವನು. ಮುಸಿಪಲ್ ಸಭೆಗಳಲ್ಲಿ ಬಂದು ಕುಳಿತಿರುವುದಕ್ಕೆ ಪೌರರಿಗೆಲ್ಲಾ ಅವಕಾಶವುಂಟು. ಸಮಿತಿಯು ಒಪ್ಪಿದ ಠರಾವುಗಳು ವರ್ತಮಾನಪತ್ರಿಕೆಗಳಲ್ಲಿ ಪ್ರಕಟವಾಗುವುದರಿಂದ ಅವುಗಳ ವಿಚಾರದಲ್ಲಿ ಯಾವ ವಿಧವಾದ ರಹಸ್ಯವೂ ಇಲ್ಲ.

**ಸಮಿತಿಯ ಅಧಿಕಾರ:** ದೇಶದ ಸಾಮಾನ್ಯ ಕಾನೂನು ಮುನಿಸಿಪಾಲಿಟಿಗಳಿಗೆ ಮಾತ್ರ ಅನ್ವಯಿಸುವ ಕಾನೂನು, ಆರೋಗ್ಯ, ಗೃಹವಸತಿಗಳಿಗೆ ಸಂಬಂಧಪಟ್ಟ ಸಾರ್ವಜನಿಕ ಕಾನೂನು, ಕೇಂದ್ರ ಸರ್ಕಾರದ ಮುಖ್ಯಾಧಿಕಾರಿಗಳು ಹೊರಡಿಸುವ ಆಜ್ಞೆಗಳು—ಇವುಗಳ ಮೂಲಕ ಮುನಿಸಿಪಾಲಿಟಿಗಳು ಆಡಳಿತದ ಅಧಿಕಾರವನ್ನು ಪಡೆಯುತ್ತವೆ.

ಪೌರರ ಆರೋಗ್ಯ, ಆಸ್ತಿಗಳ ರಕ್ಷಣೆ, ಜನ ಮತ್ತು ವಾಹನಗಳ ತಿರುಗಾಟ—ಇವೆಲ್ಲಕ್ಕೂ ಸಂಬಂಧವಾದ ಮಸೂದೆಗಳನ್ನು ಮೂರಾವರ್ತಿ ಪ್ರತ್ಯೇಕವಾದ ದಿವಸಗಳಲ್ಲಿ ಸಮಿತಿಯ ಮುಂದಿಟ್ಟು ಸದಸ್ಯರು ಚರ್ಚಿಸಿ ಒಪ್ಪಿದನಂತರ ಆ ಮಸೂದೆಗಳನ್ನು

ಉಪನಿಬಂಧನೆಗಳನ್ನಾಗಿ ಮಾಡುವುದು ಆ ದೇಶದ ಸಂಪ್ರದಾಯ. ಕೆಲವು ಸಂದರ್ಭಗಳಲ್ಲಿ—ಎಂದರೆ ಸಾರ್ವಜನಿಕ ಆರೋಗ್ಯ ವಿಷಯದಲ್ಲಿ ಮುನಿಸಿಪಲ್ ಸಮಿತಿಯು ಒಪ್ಪಿದ ಉಪನಿಬಂಧನೆಗಳನ್ನು ಸ್ಥಳೀಯ ಸರ್ಕಾರ ರದ್ದುಮಾಡುವುದೂ ಉಂಟು.

ಸಮಿತಿಗೆ ಮುನಿಸಿಪಾಲಿಟಿಯ ಹಣಕಾಸಿನ ಮೇಲೆ ಸರ್ವಾಧಿಕಾರವಿರುವುದು. ಮುನಿಸಿಪಾಲಿಟಿಗೆ ಸೇರಿದ ಆಸ್ತಿಗಳಿಂದ ಬರುವ ಬಾಡಿಗೆ, ನೀರು, ದೀಪ, ಟ್ರಾಮ್ವೆ—ಇವುಗಳನ್ನು ಒದಗಿಸಿ ಕೊಡುವುದರಿಂದ ಬರುವ ವರಮಾನ, ಉಪನಿಬಂಧನೆಗಳನ್ನುಲ್ಲಂಘಿಸಿದವರು ಕೊಡುವ ಜುಲ್ಮಾನೆ, ಪದಾರ್ಥಗಳ ಮೇಲೆ ಹಾಕುವ ಸುಂಕ, ಪೌರರ ವರಮಾನ, ಕಸಬು, ಆಸ್ತಿಗಳ ಮೇಲಿನ ತೆರಿಗೆ—ಇವು ಮುನಿಸಿಪಾಲಿಟಿಯ ವರಮಾನದ ಮುಖ್ಯಾಂಶಗಳು. ಇವುಗಳನ್ನು ವಸೂಲ್ಮಾಡುವ ಅಧಿಕಾರವೂ ವಸೂಲಾಗಿ ಬಂದ ವರಮಾನವನ್ನು ಪೌರರ ಸೌಕರ್ಯಕ್ಕೋಸ್ಕರ ಖರ್ಚು ಮಾಡುವ ಅಧಿಕಾರವೂ ಸಮಿತಿಗೆ ಸೇರಿರುವುದು. ಮುನಿಸಿಪಾಲಿಟಿಗೆ ಸೇರಿದ ದುಡ್ಡನ್ನು ಖರ್ಚುಮಾಡಲು ಸಮಿತಿಯು ಸ್ಥಳೀಯ ಅಥವಾ ಕೇಂದ್ರ ಸರ್ಕಾರದ ಅಪ್ಪಣೆಯನ್ನಾಗಲಿ ಅಧ್ಯಕ್ಷನ ಅಪ್ಪಣೆಯನ್ನಾಗಲಿ ಪಡೆಯಬೇಕಾದುದಿಲ್ಲ. ಮುನಿಸಿಪಲ್ ಬಡ್ಜೆಟ್ಟನ್ನು ಒಪ್ಪುವುದಕ್ಕೂ ಬದಲಾಯಿಸುವುದಕ್ಕೂ ಸಮಿತಿಗೇ ಪೂರ್ಣಾಧಿಕಾರವುಂಟು. ಹಣಕಾಸಿನ ವಿಚಾರದಲ್ಲಿ ಮತ್ತೊಬ್ಬರ ಅಧಿಕಾರಕ್ಕೆ ಒಳಪಡದೆ ಇರುವುದರಿಂದ ಇಂಗ್ಲೆಂಡಿನ ಮುನಿಸಿಪಾಲಿಟಿಗಳು ಸ್ವತಂತ್ರಾಧಿಕಾರವನ್ನು ನಡೆಯಿಸುತ್ತಿರುವುವಲ್ಲದೆ ಕೆಲವು ವೇಳೆ ದುಂದು ವೆಚ್ಚವನ್ನು ಕೂಡ ಮಾಡುತ್ತಿರುವುವು. ಆದರೆ ಮುನಿಸಿಪಾಲಿಟಿಗೆ ಸಾಲವನ್ನು ತೆಗೆದುಕೊ

ಳ್ಳುವ ವಿಷಯದಲ್ಲಿ ಮಾತ್ರ ಸ್ವಲ್ಪ ನಿರ್ಬಂಧವಿರುವುದು. ದೀರ್ಘ ಕಾಲ • ಸಾಲವನ್ನು ತೆಗೆದುಕೊಳ್ಳುವುದಕ್ಕೆ ಮುಂಚಿತವಾಗಿ ಕೇಂದ್ರ ಸರ್ಕಾರದ ಅಪ್ಪಣೆಯನ್ನು ಪಡೆಯಬೇಕೆಂದೂ ಭಾರಿ ಕಟ್ಟಡಗಳನ್ನು ಕಟ್ಟುವುದಕ್ಕೆ ಮುಂಚೆ ಕೇಂದ್ರ ಸರ್ಕಾರದ ಖಜಾನೆ ಇಲಾಖೆಯ ಅಪ್ಪಣೆಯನ್ನೂ ಚರಂಡಿ, ಆಸ್ಪತ್ರೆ- ಇವುಗಳ ಬಡಾವಣೆಗಾಗಿ ಸಾಲಮಾಡುವುದಕ್ಕೆ ಮುಂಚಿತವಾಗಿ ಸ್ಥಳೀಯ ಸರ್ಕಾರದ ಅಪ್ಪಣೆಯನ್ನೂ ಪಡೆಯಬೇಕೆಂಬ ನಿಯಮವಿರುತ್ತದೆ. ಸಾಲವನ್ನು ತೆಗೆದುಕೊಳ್ಳುವ ವಿಷಯದಲ್ಲಿ ಮೇಲೆ ತಿಳಿಸಿದ ನಿರ್ಬಂಧಗಳಿದ್ದರೂ ದೊಡ್ಡ ಮುನಿಸಿಪಾಲಿಟಿಗಳು ಆಗಿಂದಾಗ್ಗೆ ಸಾಲಗಳನ್ನು ತೆಗೆದುಕೊಳ್ಳುವುದನ್ನು ಬಿಟ್ಟಿಲ್ಲ.

ಉಪನಿಬಂಧನೆಗಳನ್ನು ಮಾಡುವುದು, ಹಣಕಾಸಿನ ಆಡಳಿತ ನಡೆಸುವುದು- ಇವಲ್ಲದೆ ಮುನಿಸಿಪಲ್ ಸಮಿತಿಗೆ ಮತ್ತೆ ಕೆಲವು ಅಧಿಕಾರಗಳಿರುವುವು. ಮುನಿಸಿಪಲ್ ಸರಹದ್ದಿನಲ್ಲಿ-ಕಟ್ಟಡ, ರಸ್ತೆ, ಉದ್ಯಾನವನಗಳನ್ನು ಏರ್ಪಡಿಸುವುದು. ಚರಂಡಿಗಳನ್ನು ತೆಗೆಯಿಸಿ ಊರಿನ ಕಶ್ಮಲವನ್ನು ಹೊರಕ್ಕೆ ಸಾಗಿಸುವುದು, ನೀರು, ದೀಪ, ಟ್ರಾಮ್ಸ್ ಮೊದಲಾದ ಸೌಕರ್ಯಗಳನ್ನು ಒದಗಿಸುವುದು, ಬಡವರಿಗೆ ಅನುಕೂಲವಾಗುವಂತಹ ಸಣ್ಣ ಮನೆಗಳನ್ನು ಕಟ್ಟಿಸಿ ಸುಲಭಬಾಡಿಗೆಗೆ ಕೊಡುವುದು, ಅನಾರೋಗ್ಯವೆಂದು ಕಂಡುಬಂದ ಮನೆಗಳನ್ನು ಕೆಡವಿಸುವುದು, ಪೌರರ ಆರೋಗ್ಯಕ್ಕಾಗಿ ಸಾರ್ವಜನಿಕಸ್ನಾನದ ಮನೆ, ಈಜುವಕೊಳ, ಬಟ್ಟೆ ಒಗೆಯುವ ಸ್ಥಳ, ವ್ಯಾಯಾಮಶಾಲೆ ಇವುಗಳನ್ನು ಕಟ್ಟಿಸುವುದು, ಕಲಾಭಿವೃದ್ಧಿ ಜ್ಞಾನಾಭಿವೃದ್ಧಿಯ ದೃಷ್ಟಿಯಿಂದ ಪಾಠಶಾಲೆ, ಮ್ಯೂಸಿಯಂ, ಚಿತ್ರಶಾಲೆ ಮುಂತಾದುವನ್ನು ಸ್ಥಾಪಿಸುವುದು— ಇವು ಸಮಿತಿಯ ಇತರ ಅಧಿಕಾರಗಳು.

ಇಂಗ್ಲೆಂಡಿನ ಮುನಿಸಿಪಾಲಿಟಿಗಳು ಮಾಡುತ್ತಿರುವ ಕೆಲಸಗಳನ್ನು ಹೀಗೆ ವಿಂಗಡಿಸಬಹುದು :

1. **ಕಾನೂನುಗಳಿಗೆ ಸಂಬಂಧಪಟ್ಟ ಕೆಲಸ:** ಪ್ರಜಾ ಅಭಿವೃದ್ಧಿಯ ಸಲುವಾಗಿ ಉಪನಿಯಮಗಳನ್ನು ಮಾಡುವುದು: ಮುನಿಸಿಪಲ್ ನೌಕರವರ್ಗದವರನ್ನು ನೇಮಿಸುವುದು : ಕೇಂದ್ರ ಸರಕಾರದಿಂದ ಪಡೆಯತಕ್ಕದಾದ ಶಾಸನಗಳನ್ನು ಪಡೆಯುವುದು.

2. **ಆಡಳಿತಕ್ಕೆ ಸಂಬಂಧಪಟ್ಟ ಕೆಲಸ:** ಪೌರರ ಅನುಕೂಲಕ್ಕಾಗಿ ದೀಪಗಳನ್ನು ಏರ್ಪಡಿಸುವುದು ; ಕಶ್ಮಲವನ್ನು ಸಾಗಿಸುವುದು : ರೋಗನಿವಾರಣೆಗೋಸ್ಕರ ಆಸ್ಪತ್ರೆ ಮೊದಲಾದವುಗಳನ್ನು ಸ್ಥಾಪಿಸುವುದು.

3. **ಕಾರ್ಯನಿರ್ವಾಹಕಾಂಗಕ್ಕೆ ಸಂಬಂಧಪಟ್ಟ ಕೆಲಸ:** ಕೇಂದ್ರಸರ್ಕಾರದಿಂದ ಹೊರಡುವ ಶಾಸನಗಳನ್ನೂ ಮುನಿಸಿಪಾಲಿಟಿಗಳು ಮಾಡುವ ಉಪನಿಯಮಗಳನ್ನೂ ನೌಕರವರ್ಗದ ಸಹಾಯದಿಂದ ಆಚರಣೆಗೆ ತರುವುದು, ಕುಂಟ, ಕುರುಡ, ಮೂಕ ಮೊದಲಾದ ಅಂಗಹೀನರು, ದರಿದ್ರರು ಇವರ ಯೋಗಕ್ಷೇಮಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವುದು.

4. **ಪೌರರಕ್ಷಣೆಸಂಬಂಧವಾದ ಕೆಲಸ:** ಮುನಿಸಿಪಾಲಿಟಿಯ ಆಶ್ರಯದಲ್ಲಿ ನ್ಯಾಯಸ್ಥಾನಗಳನ್ನು ನಿರ್ಮಿಸಿ ಜನರಿಗೆ ಸುಲಭವಾಗಿ ನ್ಯಾಯ ದೊರೆಯುವಂತೆ ಮಾಡುವುದು; ಪೋಲಿಸ್ ಸಿಬ್ಬಂದಿಯನ್ನು ಏರ್ಪಡಿಸಿ ಪೌರರ ಆಸ್ತಿ ಸಮೃದ್ಧಿ ಸ್ವಾತಂತ್ರ್ಯಗಳನ್ನು ಕಾಪಾಡುವುದು ; ಬೆಂಕಿಯಿಂದುಂಟಾಗುವ ಅನಾಹುತಗಳನ್ನು ಕಡಿಮೆಮಾಡುವುದು : ಜನರ ಮತ್ತು ವಾಹನಗಳ

ಸಂಚಾರಕ್ಕೆ ಸಂಬಂಧಿಸುವ ಉಪನಿಯಮಗಳನ್ನು ಆಚರಣೆಗೆ ತರುವುದು; ಅಳತೆ ತೂಕಗಳ ಉಪನಿಯಮಗಳು ವರ್ತಕರಿಂದ ಗೌರವಿಸಲ್ಪಡುತ್ತಿರುವುವೋ ಇಲ್ಲವೋ ಎಂಬುದನ್ನು ಮೇಲ್ವಿಚಾರಣೆಮಾಡುವುದು.

5. **ಬೆಳವಣಿಗೆಗೆ ಸಂಬಂಧಪಟ್ಟ ಕೆಲಸ:** ಪೌರರ ಜ್ಞಾನಸಾಧನಗಳಾದ ಪಾಠಶಾಲೆಗಳನ್ನೂ ಪುಸ್ತಕ ಭಂಡಾರಗಳನ್ನೂ ಮ್ಯೂಸಿಯಂಗಳನ್ನೂ ಚಿತ್ರಶಾಲೆಗಳನ್ನೂ ಸ್ಥಾಪಿಸುವುದು; ಶಾರೀರಕ ಬೆಳವಣಿಗೆಗೋಸ್ಕರ ವ್ಯಾಯಾಮಶಾಲೆ, ಸ್ನಾನದ ಕೊಳ, ಬಟ್ಟೆ ಒಗೆಯುವ ಸ್ಥಳಗಳನ್ನು ಏರ್ಪಡಿಸುವುದು.

6. **ಪ್ರಜಾನುಕೂಲಕ್ಕೆ ಸಂಬಂಧಪಟ್ಟ ಕೆಲಸ:** ರಸ್ತೆ, ಸೇತುವೆಗಳನ್ನು ಏರ್ಪಡಿಸುವುದು, ಕೇಂದ್ರ ಸರಕಾರದಿಂದ ಹೊರಡುವ ಪುರರಚನೆ ಗೃಹವಸತಿ ಮತ್ತು ರಚನೆಗಳಿಗೆ ಸಂಬಂಧವಾದ ಶಾಸನಗಳನ್ನು ಆಚರಣೆಗೆ ತರುವುದು -ಎಂದರೆ ಪಟ್ಟಣಗಳನ್ನು ಶಾಸ್ತ್ರಸಮ್ಮತವಾಗಿ ರಚಿಸಿ ವಾಸಕ್ಕೆ ಅಯೋಗ್ಯವಾದ ಮನೆಗಳನ್ನು ಕೆಡವಿಸಿ, ವಾಸಕ್ಕೆ ಅನುಕೂಲವಾದ ಮನೆಗಳನ್ನು ಕಟ್ಟಿಸುವುದು, ಬಡವರ ಸಲುವಾಗಿ ಹೊಸದಾಗಿ ಸಣ್ಣ ಸಣ್ಣ ಬಾಡಿಗೆ ಮನೆಗಳನ್ನು ಏರ್ಪಡಿಸುವುದು.

7. **ವಾಣಿಜ್ಯ ಸಂಬಂಧವಾದ ಕೆಲಸ:** ಮಾರ್ಕೆಟ್ಟು, ನೀರು, ಗ್ಯಾಸು, ವಿದ್ಯುಚ್ಛಕ್ತಿ, ರೈಲು, ಬಸ್ಸು, ಟ್ರಾಮ್ವೆ ಮೊದಲಾದ ಸೌಕರ್ಯಗಳನ್ನು ಒದಗಿಸಿ ತನ್ಮೂಲಕ ಮುನಿಸಿಪಾಲಿಟಿಯ ವರಮಾನವನ್ನು ಹೆಚ್ಚಿಸುವುದು.

8. **ಸಾರ್ವಜನಿಕ ಸಂಬಂಧವಾದ ಕೆಲಸ:** ವಯಸ್ಸಾದ ಪೌರರಿಗೆ ಜೀವನಕ್ಕೆ ಅನುಕೂಲವಾಗುವಂತೆ ಪೆನ್ಷನ್,

ಜೀವವಿಮೆ ಮೊದಲಾದುವುಗಳಿಗೆ ತಕ್ಕ ಏರ್ಪಾಡುಗಳನ್ನು ಕೇಂದ್ರ ಸರ್ಕಾರದ ಆಶ್ರಯದಲ್ಲಿ ಮಾಡುವುದು.

9. **ಹಣಕಾಸಿನ ಸಂಬಂಧವಾದ ಕೆಲಸ:** ಪೌರರಿಂದ ತೆರಿಗೆ, ಕಂದಾಯಗಳನ್ನು ವಸೂಲು ಮಾಡುವುದು; ಪೌರರಿಗೆ ನಾನಾವಿಧವಾದ ವಿನೋದ ಸೌಕರ್ಯಗಳನ್ನು ಒದಗಿಸಿ ಅವುಗಳ ಮೂಲಕ ವರಮಾನವನ್ನು ಹೆಚ್ಚಿಸುವುದು; ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದು ಸಾಲ ತೆಗೆದುಕೊಂಡು ಪಟ್ಟಣವು ನಾನಾಮುಖವಾಗಿ ಅಭಿವೃದ್ಧಿಗೆ ಬರುವಂತೆ ಏರ್ಪಾಡು ಮಾಡುವುದು.

**ಉಪಸಮಿತಿಗಳು :** ಪುರಸಮಿತಿಯು ಮಾಡಬೇಕಾದ ಕೆಲಸಗಳು ಅತ್ಯಧಿಕವಾಗಿರುವುದರಿಂದ ಅದರ ಸಹಾಯಕ್ಕಾಗಿ ಅನೇಕ ಉಪಸಮಿತಿಗಳು ಇರುವುವು. ಪ್ರತಿಯೊಂದು ಮುನಿಸಿಪಾಲಿಟಿಯಲ್ಲೂ ಕನಿಷ್ಠಪಕ್ಷ ಇಂತಹ 2 ಕಮಿಟಿಗಳಾದರೂ ಇರಬೇಕೆಂಬ ನಿಯಮವಿರುವುದು. ರಕ್ಷಣೆಯ ಕಮಿಟಿ, ವಿದ್ಯಾಭ್ಯಾಸದ ಕಮಿಟಿ—ಇವು ಮುಖ್ಯವಾದ ಉಪಸಮಿತಿಗಳು. ಇವುಗಳ ಜೊತೆಗೆ ದೊಡ್ಡ ಮುನಿಸಿಪಾಲಿಟಿಗಳು ಹೆಚ್ಚು ಕಮಿಟಿಗಳನ್ನು ಏರ್ಪಡಿಸಬಹುದೆಂಬ ಸಂಪ್ರದಾಯವಿರುವುದು. ಕಮಿಟಿಗಳ ಪೈಕಿ ವರ್ಷವೆಲ್ಲಾ ಕೆಲಸಮಾಡುವ ಕಮಿಟಿಗಳು ಕೆಲವು. ಇವುಗಳಿಗೆ ಸ್ಟ್ಯಾಂಡಿಂಗ್ ಕಮಿಟಿಗಳೆಂದು ಹೆಸರು. ಉದಾಹರಣೆಗಾಗಿ ಲಿವರ್‌ಪೂಲಿನಲ್ಲಿ 14, ಬರ್ಮಿಂಗ್ಹ್ಯಾಮಿನಲ್ಲಿ 18 ಸ್ಟ್ಯಾಂಡಿಂಗ್ ಕಮಿಟಿಗಳಿರುವುವು. ವಿಶೇಷ ಕೆಲಸಗಳನ್ನು ಮಾಡುವುದಕ್ಕೋಸ್ಕರ ಏರ್ಪಾಡಾಗುವ ಕಮಿಟಿಗಳು ಕೆಲವು. ಇವುಗಳಿಗೆ ಸ್ಪೆಷಲ್ ಕಮಿಟಿಗಳೆಂದು ಹೆಸರು. ಸ್ಟ್ಯಾಂಡಿಂಗ್ ಕಮಿಟಿಗಳ ಆಶ್ರಯದಲ್ಲಿ ಉಪಸಮಿತಿಗಳು ಕೆಲಸ ಮಾಡಿ

ಕೊಂಡು ಅವುಗಳಿಗೆ ಸಂಬಂಧಪಟ್ಟ ಇಲಾಖೆಗಳ ಕೆಲಸಗಳಿಗೆ ಸಹಕಾರಿಯಾಗಿರುವುವು. ಉಪಸಮಿತಿಗಳು ತಮಗೆ ಸೇರಿದ ಇಲಾಖೆಗಳ ಆಡಳಿತವರದಿಯನ್ನು ಸ್ಟ್ಯಾಂಡಿಂಗ್ ಕಮಿಟಿಗೆ ಒಪ್ಪಿಸುವುವು. ಸ್ಟ್ಯಾಂಡಿಂಗ್ ಕಮಿಟಿಗಳು ಅದನ್ನು ಪುರಸಮಿತಿಯ ಮುಂದೆ ಇಟ್ಟು ಅದರ ಅನುಮತಿಯನ್ನು ಪಡೆಯುವುವು. ಸ್ಟ್ಯಾಂಡಿಂಗ್ ಕಮಿಟಿ ಮತ್ತು ಉಪಸಮಿತಿಗಳ ಸದಸ್ಯರನ್ನು ಚುನಾಯಿಸುವುದಕ್ಕಾಗಿ ವರ್ಷದ ಆರಂಭದಲ್ಲಿ ಒಂದು ಪ್ರತ್ಯೇಕ ಕಮಿಟಿ (ಸೆಲೆಕ್ಷನ್ ಕಮಿಟಿ) ಯನ್ನು ಪುರಸಮಿತಿಯು ಏರ್ಪಡಿಸುವುದು. ಸೆಲೆಕ್ಷನ್ ಕಮಿಟಿ ಮೊದಲಾದ ಕಮಿಟಿಗಳ ಸದಸ್ಯರನ್ನು ಚುನಾಯಿಸುವ ವೇಳೆಯಲ್ಲಿ ಆ ಪಟ್ಟಣದಲ್ಲಿರುವ ರಾಜಕೀಯ ಪಂಗಡಗಳು ಚುರುಕಾಗಿ ಕೆಲಸ ಮಾಡುವುವು. ದೊಡ್ಡ ಮುನಿಸಿಪಾಲಿಟಿಗಳಲ್ಲಿ ಕಮಿಟಿ ಸದಸ್ಯರ ಸಂಖ್ಯೆ 8-10ರಿಂದ 20ರ ವರೆಗೂ ಇರುವುದು. ಉಪಸಮಿತಿಗಳಲ್ಲಿ ಪುರಸಮಿತಿ ಸದಸ್ಯರು (ಸಾಮಾನ್ಯಸದಸ್ಯರು ಮತ್ತು ಪುರಪ್ರಮುಖರು) ಇರುವುದೇ ಸಂಪ್ರದಾಯ. ಉಪಸಮಿತಿಗಳು ಪುರಸಮಿತಿಗೆ ಶಿಫಾರ್ಸು ಮಾಡಬಲ್ಲವೇ ಹೊರತು ಸ್ವತಂತ್ರವಾಗಿ ಯಾವ ಕೆಲಸವನ್ನೂ ಕೈಕೊಳ್ಳಲಾರವು. ಮುನಿಸಿಪಾಲಿಟಿಯ ಕೆಲಸಗಳು ಹೆಚ್ಚಿದ ಹಾಗೆಲ್ಲಾ ಕಮಿಟಿಗಳ ಸಂಖ್ಯೆಯು ಹೆಚ್ಚುವುದು ಸಾಮಾನ್ಯ. ಇದೂ ಅಲ್ಲದೆ ಇಂತಹ ಕಮಿಟಿಗಳಿರುವುದರಿಂದ ವಿಶೇಷಜ್ಞರೂ ಪೌರರ ಪ್ರತಿನಿಧಿಗಳೂ ಕಲೆತು ಆಡಳಿತವನ್ನು ಉತ್ತಮಸ್ಥಿತಿಗೆ ತರಲು ಅವಕಾಶವೂ ಉಂಟು.

**ಮುನಿಸಿಪಾಲಿಟಿಯ ನೌಕರರು:** ಪ್ರತಿಯೊಂದು ಮುನಿಸಿಪಾಲಿಟಿಯಲ್ಲೂ ಕನಿಷ್ಠಪಕ್ಷ ಇಬ್ಬರು ನೌಕರನಾದರೂ (ಎಂದರೆ ಗುಮಾಸ್ತೆ, ಖಜಾಂಚಿ) ಇರಬೇಕೆಂದು ಶಾಸನವು

ವುದು. ಬೇಕಾದರೆ ಹೆಚ್ಚು ಸಿಬ್ಬಂದಿಯನ್ನು ಇಟ್ಟುಕೊಳ್ಳು ವುದಕ್ಕೂ ಮುನಿಸಿಪಾಲಿಟಿಗಳಿಗೆ ಅಧಿಕಾರವುಂಟು. ಸಾಮಾ ನ್ಯವಾಗಿ ಪ್ರತಿಯೊಂದು ದೊಡ್ಡ ಮುನಿಸಿಪಾಲಿಟಿಯಲ್ಲೂ ಒಬ್ಬ ಇಂಜನಿಯರ್, ಒಬ್ಬ ಡಾಕ್ಟರ್, ಒಬ್ಬ ಪೋಲಿಸ್ ಆಫೀಸರು, ಒಬ್ಬ ಗುಮಾಸ್ತೆ, ಒಬ್ಬ ರಸಾಯನಶಾಸ್ತ್ರಜ್ಞ ಮತ್ತು ಇವರ ಸಹಾಯಕ್ಕಾಗಿ ಕಡಿಮೆ ಸಂಬಳದ ಅನೇಕ ಸಣ್ಣ ನೌಕರಮಾನರು ಇರುವರು. ಪುರಸಮಿತಿಗೆ ಮೇಲ್ಕಂಡ ಅಧಿಕಾರಿಗಳನ್ನೆಲ್ಲಾ ನೇಮಿಸುವ ಅಧಿಕಾರವಿದೆ. ಇಂತಹ ಸಂದರ್ಭದಲ್ಲಿ ಮುನಿ ಸಿಪಲ್ ಉಪಸಮಿತಿಗಳು ತಮ್ಮ ಇಲಾಖೆಗಳಿಗೆ ಬೇಕಾದ ವರನ್ನು ನಾಮಕರಣಮಾಡುವುವು. ಹೀಗೆ ನಾಮಕರಣ ಮಾಡಿದವರನ್ನು ಸಾಮಾನ್ಯವಾಗಿ ಪುರಸಮಿತಿ ಒಪ್ಪುವುದು. ಮುನಿಸಿಪಲ್ ಕೆಲಸಗಳಿಗೆ ಆವಶ್ಯಕವಾಗಿರುವ ಉಮೇದು ವಾರರನ್ನು ಆರಿಸುವುದಕ್ಕೋಸ್ಕರ ಪ್ರತ್ಯೇಕವಾದ ಪರೀಕ್ಷೆ ಗಳಾವುವನ್ನೂ ಇಂಗ್ಲೆಂಡಿನ ಮುನಿಸಿಪಾಲಿಟಿಗಳು ಏರ್ಪಡಿಸಿಲ್ಲ. ಕೆಲಸಕ್ಕೆ ತಕ್ಕ ಯೋಗ್ಯತೆ ಉಮೇದುವಾರರಲ್ಲಿ ಇದ್ದರೆ ಸಾಕು ಎನ್ನುವುದು ಆ ಮುನಿಸಿಪಾಲಿಟಿಗಳ ಸಂಪ್ರದಾಯ.

ಮುನಿಸಿಪಲ್ ಅಧಿಕಾರಿಗಳಲ್ಲಿ ಗುಮಾಸ್ತನು (ಕ್ಲಾರ್ಕ) ಮುಖ್ಯಾಧಿಕಾರಿ. ಮುನಿಸಿಪಾಲಿಟಿಗೆ ಸಂಬಂಧಪಟ್ಟ ಸಮಸ್ತ ಕಾಗದಪತ್ರಗಳೂ ಇವನ ವಶದಲ್ಲಿರುವುವು. ಮುನಿಸಿಪಾಲಿಟಿಗೆ ಇವನೇ ವಕೀಲ. ಮುನಿಸಿಪಾಲಿಟಿಯ ನಿಯಮ ಉಪನಿಯ ಮಗಳೆಲ್ಲಾ ಇವನಿಗೆ ಕಂಠಪಾಠವಾಗಿರುತ್ತವೆ. ಮುನಿಸಿಪಾಲಿ ಟಿಯ ಮೀಟಿಂಗುಗಳನ್ನೆಲ್ಲಾ ಏರ್ಪಡಿಸುವವನೂ ಗುಮಾ ಸ್ತೆಯೇ. ನಗರಾಧ್ಯಕ್ಷನ ಪಾಲಿನ ಅನೇಕ ಕೆಲಸಗಳನ್ನು ಗುಮಾ ಸ್ತನು ಮಾಡುವುದೇ ವಾಡಿಕೆ. ವಾರ್ಷಿಕಚುನಾವಣೆಗೆ ಸಂಬಂಧ

ಪಟ್ಟ ಕೆಲಸಗಳನ್ನು ಗುಮಾಸ್ತನೇ ಏರ್ಪಡಿಸುವನು. ಈ ಕಾರಣ ದಿಂದ ಮುನಿಸಿಪಾಲಿಟಿಯ ಆಡಳಿತದ ದಕ್ಷತೆಗೆ ಗುಮಾಸ್ತನೇ ಮುಖ್ಯಸಾಧನವೆಂದು ಹೇಳವುದು ಅತಿಶಯೋಕ್ತಿಯಲ್ಲ.

ಮುನಿಸಿಪಾಲಿಟಿಗೆ ಸೇರಿದ ರಸ್ತೆ, ಚರಂಡಿ, ಉದ್ಯಾನವನ ಕಟ್ಟಡಗಳು-ಇವುಗಳಿಗೆ ಸಂಬಂಧಪಟ್ಟ ಕೆಲಸಗಳನ್ನು ನೋಡಿ ಕೊಳ್ಳುವುದಕ್ಕಾಗಿ ಇಂಜಿನಿಯರ್, ಸರ್ವೆಯರ್ ಮೊದಲಾದ ಅಧಿಕಾರಿಗಳೂ ನೌಕರರೂ ಇರುವರು. ಮುನಿಸಿಪಾಲಿಟಿಯ ಲೆಖ್ಖವನ್ನು ನೋಡಿಕೊಂಡಿರಲು ಖಜಾಂಚಿಯಿರುವನು. ವರುಷಕ್ಕೆ ಎರಡಾವರ್ತಿ ಮುನಿಸಿಪಾಲಿಟಿಯ ಜಮಾಖರ್ಚಿನ ಪಟ್ಟಿಯನ್ನು ತಯಾರುಮಾಡುವುದೂ ದೈನಂದಿನ ಲೆಖ್ಖವನ್ನು ಇಡುವುದೂ ಖಜಾಂಚಿಯ ಕೆಲಸ. ಪೌರರ ಆಸ್ತಿ, ಮುನಿಸಿ ಪಾಲಿಟಿಗೆ ಸೇರಿದ ಆಸ್ತಿ—ಇವುಗಳನ್ನು ರಕ್ಷಿಸುವುದಕ್ಕೋಸ್ಕರ ಒಬ್ಬ ರಕ್ಷಣಾಧಿಕಾರಿ (ಛೀಫ್‌ಕಾನ್ಸ್ಟೆಬಲ್) ಯನ್ನೂ ಪೋಲೀಸ್ ಸಿಬ್ಬಂದಿಗಳನ್ನೂ ಪ್ರತಿಯೊಂದು ಮುನಿಸಿಪಾಲಿ ಟಿಯೂ ಏರ್ಪಡಿಸಿರುವುದು. ಪೋಲಿಸ್ ಸಿಬ್ಬಂದಿ ಹೆಚ್ಚಾಗಿ ಬೇಕಾದಾಗ ಮುನಿಸಿಪಾಲಿಟಿಯು ಈ ವಿಷಯವನ್ನು ಕೇಂದ್ರ ಸರಕಾರಕ್ಕೆ ತಿಳಿಸಿ ಅದರಿಂದ ಸ್ವಲ್ಪ ದ್ರವ್ಯಸಹಾಯವನ್ನು ಪಡೆ ಯುವುದೂ ಉಂಟು.

ಮುನಿಸಿಪಲ್ ಲೆಖ್ಖವನ್ನು ತನಿಖೆಮಾಡಿಸುವುದಕ್ಕಾಗಿ ಪ್ರತಿ ಮುನಿಸಿಪಾಲಿಟಿಯಲ್ಲಿ 3 ಜನ ಆಡಿಟರುಗಳಿರಬೇಕೆಂದು ನಿಯಮವಿದೆ. ವಾರ್ಷಿಕ ಚುನಾವಣೆಯ ಕಾಲದಲ್ಲಿ ಪೌರರು ಇಬ್ಬರು ಆಡಿಟರುಗಳನ್ನು ಚುನಾಯಿಸುವರು. ನಗರಾಧ್ಯಕ್ಷನು ಸಮಿತಿ ಸದಸ್ಯರಲ್ಲೊಬ್ಬನನ್ನು 3 ನೆಯ ಆಡಿಟರನ್ನಾಗಿ ಆರಿಸು ವನು. ಈ ಮೂವರು ಮುನಿಸಿಪಾಲಿಟಿಯ ಆಯವ್ಯಯದ ಜವಾ

ಬ್ದಾರಿಯನ್ನು ಹೊತ್ತಿರುವರು. 25000 ಪ್ರಜೆಗಳುಳ್ಳ ಪ್ರತಿಯೊಂದು ಮುನಿಸಿಪಾಲಿಟಿಯಲ್ಲೂ ನ್ಯಾಯಾಸ್ಥಾನಗಳಿರುವುವು. ಸಣ್ಣ ಸಣ್ಣ ವ್ಯಾಜ್ಯಗಳನ್ನು ತೀರ್ಮಾನ ಮಾಡುವುದು ಈ ನ್ಯಾಯಸ್ಥಾನಗಳ ಕರ್ತವ್ಯ. ಇವುಗಳ ತೀರ್ಪಿನ ಮೇಲೆ ಕೇಂದ್ರ ಸರ್ಕಾರದ ನ್ಯಾಯಸ್ಥಾನಗಳಲ್ಲಿ ಅಪೀಲು ಮಾಡಲವಕಾಶವುಂಟು. ಈ ಪ್ರಕಾರ ಮುನಿಸಿಪಾಲಿಟಿಗೆ ಸೇರಿದ ನ್ಯಾಯಸ್ಥಾನಗಳಿರುವುದರಿಂದ ಪ್ರಜೆಗಳಿಗೆ ಹೆಚ್ಚು ತೊಂದರೆಯೂ ಹೆಚ್ಚು ಖರ್ಚುಗಳೂ ಇಲ್ಲದೆ ನ್ಯಾಯ ದೊರೆಯುವಂತಾಗಿದೆ.

# ೫. ಫ್ರೆಂಚ್ ಮುನಿಸಿಪಾಲಿಟಿಗಳು

ಆಡಳಿತದ ರೀತಿ ಎರಡು ವಿಧ. ಆಡಳಿತದ ಗೊತ್ತಾದ ಕೆಲವು ಭಾಗವನ್ನು ದೇಶದ ಸ್ಥಳೀಯ ಕೇಂದ್ರಗಳಿಗೆ ಒಪ್ಪಿಸಿ ಅವುಗಳನ್ನು ಬಲಪಡಿಸುವುದು ಒಂದು ವಿಧ; ಸ್ಥಳೀಯ ಸರ್ಕಾರಗಳ ಕಾರ್ಯಕಲಾಪಗಳನ್ನೆಲ್ಲ ಕೇಂದ್ರ ಸರ್ಕಾರದ ಅಧೀನ ಮಾಡಿ ಕೇಂದ್ರಸರ್ಕಾರದ ಅಧಿಕಾರವನ್ನು ಬಲಪಡಿಸುವುದು ಮತ್ತೊಂದು ವಿಧ. ಮೊದಲನೆಯ ಪದ್ಧತಿಗೆ ಅಮೆರಿಕಾದ ಸಂಯುಕ್ತರಾಜ್ಯ, ಎರಡನೆಯ ಪದ್ಧತಿಗೆ ಫ್ರಾನ್ಸ್ ಉದಾಹರಣೆಗಳು. ಅಧಿಕಾರವನ್ನೆಲ್ಲ ಕೇಂದ್ರಸರ್ಕಾರದಲ್ಲಿ ಶೇಖರಿಸುವುದರಿಂದ ಸ್ಥಳೀಯ ಅಧಿಕಾರಿಗಳೆಲ್ಲ ಕೇಂದ್ರಸರ್ಕಾರದ ಆಜ್ಞಾನುವರ್ತಿಗಳಾಗಿರುವರು; ಕ್ರಾಂತಿಕಾರ್ಯಗಳಿಗೆ ಅವಕಾಶವಿರುವುದಿಲ್ಲ; ಸ್ಥಳೀಯ ಸರ್ಕಾರದ ಹಿಡಿತದಲ್ಲಿ ಹೆಚ್ಚು ಹಣವಾಗಲಿ

ಪೋಲಿಸ್ ಸಿಬ್ಬಂದಿಯಾಗಲಿ ಇಲ್ಲದಿರುವುದರಿಂದ " ದೇಶಕ್ಕೆ ಯಾವ ವಿಧವಾದ ಅಪಾಯವೂ ಇಲ್ಲವೆಂದು ಹೇಳುವುದು ಫ್ರೆಂಚರ ನೀತಿ.

ಫ್ರಾನ್ಸಿನಲ್ಲಿ 86 ಡಿಪಾರ್ಟ್‌ಮೆಂಟುಗಳು, 276 ಅರೂಂಡಿಸ್‌ಮೆಂಟುಗಳು, ಸಾವಿರಾರು ಕ್ಯಾಂಟನ್‌ಗಳು, 37000 ಕಾಮ್ಯೂನ್ಸ್— ಇವಿಷ್ಟೂ ಕೇಂದ್ರಸರ್ಕಾರದ ಪ್ರತ್ಯಕ್ಷಅಧಿಕಾರಕ್ಕೆ ಒಳಪಟ್ಟಿರುವುವು. ಫ್ರಾನ್ಸಿನಲ್ಲಿ ಕೇಂದ್ರಸರ್ಕಾರದ ಗೋಚರಕ್ಕೆ ಬಾರದಿರುವ ಮುನಿಸಿಪಲ್ ಮತ್ತು ಸ್ಥಳೀಯ ಸರ್ಕಾರದ ಆಡಳಿತವೇ ಇಲ್ಲ. ಅಲ್ಲಿನ ಮುನಿಸಿಪಾಲಿಟಿಗಳಲ್ಲಾಗುವ ಮುಖ್ಯ ಬದಲಾವಣೆಗಳಿಗೆಲ್ಲಾ ಕೇಂದ್ರ ಸರ್ಕಾರದ ಅನುಮತಿಬೇಕು. ಕೇಂದ್ರಸರ್ಕಾರದ ಅಪ್ಪಣೆಯಿಲ್ಲದೆ ಅವುಗಳಲ್ಲಿ ಯಾವ ಸುಧಾರಣೆಯೂ ಸಾಧ್ಯವಿಲ್ಲ. ಈ ಕಾರಣಗಳಿಂದ ಫ್ರೆಂಚರಿಗೆ ಸ್ಥಳೀಯ ಸ್ವಾತಂತ್ರ್ಯಸರ್ಕಾರ ಮತ್ತು ಸ್ಥಳೀಯ ಸ್ವಾತಂತ್ರ್ಯ ಜೀವನಗಳು ಅಪೂರ್ವವಾಗಿರುವುವು.

ಹೀಗೆ ಕೇಂದ್ರ ಸರ್ಕಾರವನ್ನು ಬಲಪಡಿಸುವುದರಿಂದ ದೇಶದ ವಿಶಿಷ್ಟ ಆಡಳಿತವೆಲ್ಲಾ ಒಂದೇ ಸಮನಾಗಿರುವುದು; ಅಧಿಕಾರಿಗಳೂ ದಕ್ಷತೆಯಿಂದ ಕೆಲಸಮಾಡುವರು. ಆದರೆ ಆಡಳಿತ ಜನಕ್ಕೆ ಪ್ರಿಯವಾಗಲಾರದು; ಆಡಳಿತದ ನೀತಿಗೂ ಪ್ರಜಾಮತಕ್ಕೂ ಸಂಬಂಧ ತಪ್ಪುವುದು. ಜನರಿಗೆ ಆಡಳಿತದಲ್ಲಿ ಉತ್ಸಾಹವೂ ಇರುವುದಿಲ್ಲ, ಶಿಕ್ಷಣವೂ ದೊರೆಯಲಾರದು. ಆಡಳಿತದ ನೀತಿಯಲ್ಲಿ ಇರುವ ಈ ನ್ಯೂನತೆಗಳನ್ನು ಫ್ರೆಂಚ್ ರಾಜ್ಯಶಾಸ್ತ್ರಜ್ಞರು ಖಂಡಿಸುತ್ತಿರುವರು. ಸರ್ಕಾರವಾದರೂ ಇಂತಹ ಖಂಡನೆಗೆ ಗಮನವನ್ನು ಕೊಡದೆ ಪೂರ್ವದ ಪದ್ಧತಿಯನ್ನೇ ಅನುಸರಿಸುತ್ತಿರುವುದು.

**ಮುನಿಸಿಪಾಲಿಟಿ ಆಡಳಿತ:** ಫ್ರೆಂಚ್ ಮುನಿಸಿಪಾಲಿಟಿಗೆ ನಗರಾಧ್ಯಕ್ಷ ಮತ್ತು ಪುರಸಮಿತಿಯು ಸದಸ್ಯರು ಮುಖ್ಯರಾದ ಅಧಿಕಾರಿಗಳು. ಅಧ್ಯಕ್ಷನು ಪುರಸಮಿತಿಯಿಂದ ಚುನಾಯಿತನಾದ ಪ್ರಧಾನಾಧಿಕಾರಿ. ಇವನ ಸಹಾಯಕ್ಕಾಗಿ ಒಬ್ಬಿಬ್ಬರು ಉಪಾಧ್ಯಕ್ಷರಿರುವುದೂ ಉಂಟು. ದೊಡ್ಡ ಮುನಿಸಿಪಾಲಿಟಿಗಳಲ್ಲಿ 25,000 ಪ್ರಜೆಗಳಿಗೆ ಒಬ್ಬನಂತೆ ಉಪಾಧ್ಯಕ್ಷರನ್ನು ಚುನಾಯಿಸಬಹುದೆಂದೂ ಯಾವ ಮುನಿಸಿಪಾಲಿಟಿಯಲ್ಲಿಯೂ ಒಟ್ಟು 12 ಉಪಾಧ್ಯಕ್ಷರಿಗಿಂತ ಹೆಚ್ಚಾಗಿರಕೂಡದೆಂದೂ ಶಾಸನವಿರುವುದು. ಬಹಳ ದೊಡ್ಡದಾದ ಲಾಯಿನ್ಸ್ ಪಟ್ಟಣದಲ್ಲಿ ಮಾತ್ರ 17 ಉಪಾಧ್ಯಕ್ಷರಿರುವುದಕ್ಕೆ ಕೇಂದ್ರಸರ್ಕಾರವು ಅನುಮತಿಯನ್ನು ಕೊಟ್ಟಿರುವುದು.

ಸಮಿತಿಯಿಂದ ಚುನಾಯಿತರಾದ ಅಧ್ಯಕ್ಷ, ಉಪಾಧ್ಯಕ್ಷರ ಅಧಿಕಾರಾವಧಿ 4 ವರ್ಷ. ಒಂದಾವರ್ತಿ ಈ ಅಧಿಕಾರಸ್ಥಾನಗಳಿಗೆ ಬಂದವರು ಪುನಃ ಬರುವುದೂ ಉಂಟು. ಒಂದಾವರ್ತಿ ಈ ಸ್ಥಾನಗಳಿಗೆ ಬಂದವರೇ ಪುನಃ ಪುನಃ ಬರುತ್ತಿರುವುದರಿಂದ ಫ್ರೆಂಚ್‌ಮುನಿಸಿಪಾಲಿಟಿಗಳ ಪದ್ಧತಿಯು ಪ್ರತಿನಿಧಿ ಸರ್ಕಾರ ನೀತಿಗೆ ವಿರುದ್ಧವಾಗಿದೆ ಎಂದು ಕೆಲವರು ಆಕ್ಷೇಪಿಸುವರು. ಅಧ್ಯಕ್ಷ, ಉಪಾಧ್ಯಕ್ಷರಿಗೆ ವೇತನವಿಲ್ಲ. ಆದರೆ ಅಧ್ಯಕ್ಷನಿಗೆ ಅಲೊಯನ್ಸ್ ಕೊಡಬಹುದೆಂಬ ಸಂಪ್ರದಾಯವಿರುವುದು.

ಶಾಸನಗಳಿಂದ ಅಧ್ಯಕ್ಷನಿಗೆ ದೊರೆತಿರುವ ಅಧಿಕಾರ ಕಡಿಮೆಯಾಗಿದ್ದರೂ ಉತ್ಸಾಹಶಾಲಿಯಾಗಿಯೂ ದಕ್ಷನಾಗಿಯೂ ಇರುವ ಅಧ್ಯಕ್ಷನಿಗೆ ಹೆಚ್ಚು ಅಧಿಕಾರವನ್ನು ನಡಯಿಸಲವಕಾಶವುಂಟು. ಅಧ್ಯಕ್ಷನು ಮುನಿಸಿಪಾಲಿಟಿಯ ದೊಡ್ಡ ಪ್ರತಿನಿಧಿ. ಪೌರರಲ್ಲಿ ಇವನೇ ಪ್ರಮುಖನು. ಮುನಿಸಿಪಲ್

ನೌಕರವರ್ಗದವರನ್ನು ನೇಮಿಸುವ ಅಧಿಕಾರವೂ ಅವರನ್ನು ಕೆಲಸದಿಂದ ತೆಗೆಯುವ ಅಧಿಕಾರವೂ ಅಧ್ಯಕ್ಷನಿಗಿರುವುದು. ಆದರೆ ಮುನಿಸಿಪಲ್ ಖಜಾಂಚಿ ಪೋಲೀಸ್ ಸಿಬ್ಬಂದಿಗಳನ್ನು ನೇಮಿಸುವ ಅಧಿಕಾರ ಮಾತ್ರ ಸ್ಥಳೀಯ ಸರ್ಕಾರದ ಮುಖ್ಯಾಧಿಕಾರಿಯಾದ ಪ್ರಿಫೆಕ್ಟಿಗೆ ಸೇರಿದ್ದು. ಅಧಿಕಾರವನ್ನು ಕಳೆದುಕೊಂಡ ಮುನಿಸಿಪಲ್ ನೌಕರವರ್ಗದವರು ಕೇಂದ್ರಸರ್ಕಾರದ ನ್ಯಾಯಸ್ಥಾನವಾದ ಕೌನ್ಸಿಲ್ ಆಫ್ ಸ್ಟೇಟಿಗೆ ಅಪೀಲು ಮಾಡಬಹುದು. ಆದರೆ ಇಂತಹ ದೊಡ್ಡ ನ್ಯಾಯಸ್ಥಾನವನ್ನು ಮುಟ್ಟುವುದು ಅನೇಕರಿಗೆ ಅಸಾಧ್ಯವಾಗಿರುವುದರಿಂದ ಆಚರಣೆಯಲ್ಲಿ ನಗರಾಧ್ಯಕ್ಷನಿಗೆ ಮುನಿಸಿಪಲ್ ನೌಕರರಮೇಲೆ ಪೂರ್ಣಾಧಿಕಾರವಿರುವುದೆಂದು ಹೇಳಬೇಕು. ಈ ವಿಚಾರದಲ್ಲಿ ಫ್ರೆಂಚ್ ಮುನಿಸಿಪಲ್ ಅಧ್ಯಕ್ಷನಿಗೆ ಅಮೆರಿಕಾದೇಶದ ಮುನಿಸಿಪಲ್ ಅಧ್ಯಕ್ಷನಿಗಿಂತ ಹೆಚ್ಚು ಅಧಿಕಾರವಿದೆ ಎಂದು ಕಾಣುವುದು. ಏಕೆಂದರೆ ಅಮೆರಿಕಾದೇಶದ ಮುನಿಸಿಪಲ್ ಅಧ್ಯಕ್ಷನಿಂದ ವಜಾಮಾಡಲ್ಪಡುವ ನೌಕರರು ಮುನಿಸಿಪಲ್ ನ್ಯಾಯಾಸ್ಥಾನ ತೀರ್ಪುಕೊಟ್ಟರೆ ಪುನಃ ಕೆಲಸಕ್ಕೆ ಬರುವುದು ಸಾಧ್ಯ. ಹೀಗೆ ಕೆಲಸದಿಂದ ವಜಾಮಾಡಲ್ಪಟ್ಟ ನೌಕರರು ಪುನಃ ಕೆಲಸಕ್ಕೆ ಬರುವುದೂ ಅಮೆರಿಕಾದಲ್ಲಿ ಅಪೂರ್ವವಲ್ಲ.

ಅಧ್ಯಕ್ಷನಿಗೆ ಮುನಿಸಿಪಾಲಿಟಿಯ ಹಣಕಾಸಿನಮೇಲೆ ಸ್ವಲ್ಪ ಅಧಿಕಾರವುಂಟು. ಇವನು ಕೇಂದ್ರಸರಕಾರಕ್ಕೆ ಪ್ರತಿವರ್ಷವೂ ಮುನಿಸಿಪಲ್ ಆಯವ್ಯಯದ ವರದಿಗಳನ್ನು ಕಳುಹಿಸುವನು. ಫ್ರೆಂಚ್ ಮುನಿಸಿಪಾಲಿಟಿಗಳಲ್ಲಿ ವ್ಯಯದಪಟ್ಟಿಯನ್ನು ಬದಲಾಯಿಸುವುದು ಕಷ್ಟ. ಏಕೆಂದರೆ ಪ್ರತಿಯೊಂದು ಮುನಿಸಿಪಾಲಿಟಿಯೂ ಮಾಡಬೇಕಾದ ಖರ್ಚಿನ ಬಾಬುಗಳನ್ನು ಮೊದಲೇ

ಕೇಂದ್ರಸರ್ಕಾರ ನಿರ್ಣಯಿಸಿರುವುದು. ಅವುಗಳಾವುವೆಂದರೆ: ಮುನಿಸಿಪಲ್ ಸಿಬ್ಬಂದಿ ಖರ್ಚು, ಮುನಿಸಿಪಲ್ ಆಸ್ತಿಗಳನ್ನು ರಕ್ಷಿಸುವ ಖರ್ಚು, ಧರ್ಮದಖರ್ಚು, ಪೋಲೀಸ್ ಖರ್ಚು, ಬೆಂಕಿಯಿಂದುಂಟಾಗುವ ಅನರ್ಥಗಳನ್ನು ಕಡಿಮೆಮಾಡುವ ಏರ್ಪಾಡಿನ ಖರ್ಚು, ವಿದ್ಯಾಭ್ಯಾಸದ ಖರ್ಚು. ಖರ್ಚಿನ ಬಾಬು ಗಳನ್ನು ಈರೀತಿ ಕೇಂದ್ರಸರ್ಕಾರ ಕ್ಲುಪ್ತಮಾಡಿರುವುದರಿಂದ ಮುನಿಸಿಪಾಲಿಟಿಯ ಅಧಿಕಾರಿಗಳ ಸ್ವತಂತ್ರ ವಿವೇಚನೆಗೆ ಹೆಚ್ಚು ಅವಕಾಶವಿಲ್ಲ.

ಮುನಿಸಿಪಲ್ ಆಸ್ತಿಗಳನ್ನು ರಕ್ಷಿಸುವ ಜವಾಬ್ದಾರಿ ಅಧ್ಯಕ್ಷ ನಿಗೆ ಸೇರಿರುವುದು. ಆದರೆ ಇದನ್ನು ಕೆಲವು ನಿಯಮಗಳಿಗೆ ಒಳಪಟ್ಟು ನಡೆಸಬೇಕು. ಪೋಲಿಸ್ ಸಿಬ್ಬಂದಿಯನ್ನು ನೇಮಕ ಮಾಡುವ ವೇಳೆಯಲ್ಲೂ ಪೋಲಿಸ್ ಇಲಾಖೆಗೆ ಸಂಬಂಧ ಪಟ್ಟ ನಿಯಮಗಳನ್ನು ಮಾಡುವ ವೇಳೆಯಲ್ಲೂ ನಗರಾಧ್ಯಕ್ಷನು ಸ್ಥಳೀಯ ಸರ್ಕಾರದ ಮುಖ್ಯಾಧಿಕಾರಿಯ ಅನುಮತಿಯನ್ನು ಪಡೆಯಬೇಕೆಂದು ಶಾಸನವಿರುವುದು. ಆದರೆ ಪುರರಕ್ಷಣೆಯ ಜವಾಬ್ದಾರಿಯಾದರೋ ಅಧ್ಯಕ್ಷನದು ಎಂಬ ಸಂಪ್ರದಾಯ ವುಂಟು. ಜೊತೆಗೆ ಪೌರರ ಆಸ್ತಿಪಾಸ್ತಿಗಳಿಗೆ ಕಳ್ಳಕಾಕರಿಂದ ತೊಂದರೆಯುಂಟಾದರೆ ಹಾಗೆ ತೊಂದರೆಪಟ್ಟ ಪೌರರಿಗೆ ಮುನಿಸಿ ಪಾಲಿಟಿಯು ಪರಿಹಾರದ್ರವ್ಯವನ್ನು ಕೊಡಬೇಕೆಂಬ ನಿಯಮ ಬೇರೆ ಇರುವುದು. ಈ ಕಾರಣಗಳಿಂದ ಫ್ರೆಂಚ್ ಮುನಿಸಿ ಪಾಲಿಟಿಗಳ ರಕ್ಷಣೆಯ ನೀತಿ ಅಸಮರ್ಪಕವೆಂದೇ ಹೇಳಬೇಕು.

ಅಧ್ಯಕ್ಷನು ಮೂವರು ಅಧಿಕಾರಿಗಳಿಗೆ ಅಧೀನನಾಗಿರುತ್ತಾನೆ. ಅಸಮರ್ಪಕವಾಗಿ ಕೆಲಸಮಾಡು ವ ಅಧ್ಯಕ್ಷನನ್ನು 1 ತಿಂಗಳವರೆಗೆ ಕೆಲಸದಿಂದ ತೆಗೆಯುವ ಅಧಿಕಾರ ಸ್ಥಳೀಯ ಸರ್ಕಾರದ ಮುಖ್ಯಾ

ಧಿಕಾರಿಗೂ 3 ತಿಂಗಳ ವರೆಗೆ ಕೆಲಸದಿಂದ ತೆಗೆಯುವ ಅಧಿಕಾರ ಕೇಂದ್ರಸರ್ಕಾರದ ಮಂತ್ರಿಗೂ ಜನ್ಮಾವಧಿ ಕೆಲಸದಿಂದ ತೆಗೆಯುವ ಅಧಿಕಾರ ಫ್ರಾನ್ಸಿನ ಅಧ್ಯಕ್ಷನಿಗೂ ಇರುವುದು. ಆದರೆ ಫ್ರಾನ್ಸಿನಲ್ಲಿ ಜವಾಬ್ದಾರಿ ಸರ್ಕಾರವಿರುವುದರಿಂದ ಮುನಿಸಿಪಲ್ ಅಧ್ಯಕ್ಷರನ್ನು ಕೆಲಸದಿಂದ ತೆಗೆಯುವ ಅಧಿಕಾರಿಗಳು ಬಹುಜಾಗರೂಕತೆಯಿಂದಲೇ ವರ್ತಿಸಬೇಕಾಗುವುದು.

**ಪುರಸಮಿತಿ :** ಪುರಸಮಿತಿಯ ಸದಸ್ಯರ ಸಂಖ್ಯೆ ಮುನಿಸಿಪಾಲಿಟಿಗಳ ವಿಸ್ತೀರ್ಣ ಜನಸಂಖ್ಯೆಗಳಿಗನುಗುಣವಾಗಿರುವುದು. 500 ಪ್ರಜೆಗಳಿರುವ ಸಣ್ಣ ಮುನಿಸಿಪಾಲಿಟಿಗಳಲ್ಲಿ 8–10 ಸದಸ್ಯರೂ ದೊಡ್ಡ ಮುನಿಸಿಪಾಲಿಟಿಗಳಲ್ಲಿ 30–35 ಸದಸ್ಯರೂ ಇರುವರು. ಸದಸ್ಯರ ಅಧಿಕಾರಾವಧಿ 4 ವರ್ಷ. ದೊಡ್ಡ ಮುನಿಸಿಪಾಲಿಟಿಗಳನ್ನು 9 ಮೊಹಲ್ಲಾಗಳನ್ನಾಗಿ ವಿಭಾಗಿಸಿ ಒಂದೊಂದು ಮೊಹಲ್ಲಾದಿಂದ 4 ಪ್ರತಿನಿಧಿಗಳನ್ನು ಸಮಿತಿಗೆ ಚುನಾಯಿಸುವ ಸಂಪ್ರದಾಯವಿರುವುದು. ಸದಸ್ಯರನ್ನು ಚುನಾಯಿಸುವ ಹಕ್ಕು ಪೌರರಿಗೆಲ್ಲರಿಗೂ ಉಂಟು. ಮುನಿಸಿಪಾಲಿಟಿಯ ಸರಹದ್ದಿನಲ್ಲಿ ವ್ಯಾಪಾರ ಮೊದಲಾದವುಗಳನ್ನು ಮಾಡಿಕೊಂಡು ಸರಹದ್ದಿನ ಹೊರಗೆ ವಾಸಮಾಡುವವರಿಗೂ ಕೂಡ ಈ ಪೌರತ್ವದ ಹಕ್ಕಿರುವುದು. ಈ ವಿಚಾರದಲ್ಲಿ ಅಮೆರಿಕಾದ ಮುನಿಸಿಪಾಲಿಟಿಗಳಿಗಿಂತ ಫ್ರೆಂಚರ ಮುನಿಸಿಪಾಲಿಟಿಗಳು ಮೇಲೆಂದು ಹೇಳಬಹುದು. ಏಕೆಂದರೆ ಅಮೆರಿಕಾದ ಮುನಿಸಿಪಾಲಿಟಿಗಳು ತಮ್ಮ ಸರಹದ್ದಿನಲ್ಲಿ ವಾಸಮಾಡುತ್ತಿರುವವರಿಗೆ ಮಾತ್ರ ಪೌರತ್ವದ ಹಕ್ಕನ್ನು ಕೊಟ್ಟಿರುವುವೇ ಹೊರತು ಮುನಿಸಿಪಾಲಿಟಿಯ ಸರಹದ್ದಿನಲ್ಲಿ ವ್ಯಾಪಾರಮಾಡಿಕೊಂಡು ಹೊರಗೆ ಜೀವಿಸುವವರಿಗೆ ಈ ಹಕ್ಕನ್ನು ಕೊಟ್ಟಿಲ್ಲ. ಇದರಿಂದ ಅನು-

ಕೂಲಸ್ಥರಾದ ದೊಡ್ಡ ವ್ಯಾಪಾರಗಾರರಿಂದ ಮುನಿಸಿಪಾಲಿಟಿಗೆ ಹೆಚ್ಚು ಸಹಾಯ ದೊರೆಯುತ್ತಿಲ್ಲ.

ಪುರಸಮಿತಿಗೆ ಸದಸ್ಯನಾಗಿ ನಿಲ್ಲುವ ಉಮೇದುವಾರನಿಗೆ 25 ವರ್ಷ ವಯಸ್ಸಾಗಿರಬೇಕು. ಚುನಾವಣೆಯ ಕಾಲದಲ್ಲಿ ಯಾರೂ ಉಮೇದುವಾರರನ್ನು ನಾಮಕರಣ ಮಾಡಕೂಡದೆಂದು ಶಾಸನ ವಿರುವುದು. ಆಚರಣೆಯಲ್ಲಾದರೊ ರಾಜಕೀಯ ಪಂಗಡಗಳು ಉಮೇದುವಾರರ ಹೆಸರುಗಳನ್ನು ಪ್ರಕಟಿಸಿ ಅವರನ್ನು ಸಮಿತಿಗೆ ಸೇರಿಸುವುದಕ್ಕಾಗಿ ಬಹು ಪ್ರಯತ್ನವನ್ನು ಮಾಡುವುವು.

ಸಮಿತಿಯ ಸದಸ್ಯರ ಚುನಾವಣೆಯಾದ ಮೇಲೆ ಚುನಾಯಿತ ರಲ್ಲಿ ಹಿರಿಯರು ಯಾರು, ಕಿರಿಯರು ಯಾರು ಎಂಬ ಪಟ್ಟಿ ತಯಾರಾಗುವುದು. ಅನಂತರ ಸಮಿತಿಯ ಕಾರ್ಯದರ್ಶಿ, ನಗರಾ ಧ್ಯಕ್ಷ, ಉಪಾಧ್ಯಕ್ಷ-ಇವರ ಚುನಾವಣೆ ನಡೆಯುವುದು. ಸಮಿ ತಿಯ ಸಭೆ ವರ್ಷಕ್ಕೆ ನಾಲ್ಕಾವರ್ತಿಯಾದರೂ ನಡೆಯ ಬೇಕೆಂಬ ನಿಯಮವುಂಟು. ಒಂದೊಂದು ಸಭೆಯೂ ಅನೇಕ ದಿವಸಗಳವರೆಗೆ ನಡೆಯುವುದು. ಸಮಿತಿಯ ಸಭೆಯಲ್ಲಿ ಯಾವ ಪೌರನಾದರೂ ಬಂದು ಕುಳಿತಿರಬಹುದು. ಸದಸ್ಯರು ಕೇಂದ್ರ ಸರ್ಕಾರ, ದೊಡ್ಡದೊಡ್ಡ ಇಲಾಖೆಗಳ ಸಂಬಂಧ ವಾದ ಯಾವ ವಿಷಯಗಳನ್ನೂ ಸಮಿತಿಯಲ್ಲಿ ಚರ್ಚಿಸ ಕೂಡದೆಂದು ನಿರ್ಬಂಧವಿರುವುದು. ಇಂತಹ ನಿಯಮವನ್ನು ಲ್ಲಂಘಿಸಿ ಮಾತಾಡುವ ಸದಸ್ಯರನ್ನು ಸ್ಥಾನದಿಂದ ತೆಗೆಯಬಹು ದೆಂದೂ ಅಂತಹ ವರ್ತನೆಗೆ ಪದೇ ಪದೇ ಅವಕಾಶಕೊಡುತ್ತಿರುವ ಸಮಿತಿಯನ್ನು ಕೂಡಾ ಕೇಂದ್ರಸರ್ಕಾರವು ವಜಾಮಾಡಬಹು ದೆಂದೂ ಶಾಸನವಿರುವುದು.

ಇಂಗ್ಲೆಂಡ್ ಮತ್ತು ಅಮೆರಿಕಾದೇಶಗಳಲ್ಲಿರುವಂತೆ ಫ್ರೆಂಚ್

ಮುನಿಸಿಪಾಲಿಟಿಗೆ ಹೆಚ್ಚು ಅಧಿಕಾರವಿಲ್ಲ. ಫ್ರೆಂಚ್ ಮುನಿಸಿಪಾಲಿಟಿಗಳ ಅಧಿಕಾರದಲ್ಲಿ ಎರಡು ಭಾಗಗಳಿರುವುವು. ಕೇಂದ್ರ ಸರ್ಕಾರಕ್ಕೆ ಶಿಫಾರ್ಸು ಮಾಡಿ ಅದರ ಅಪ್ಪಣೆಯಂತೆ ಮಾಡುವ ಕಾರ್ಯಗಳು ಒಂದು ಭಾಗ. ಸಾಕ್ಷಾತ್ತಾಗಿ ಮುನಿಸಿಪಾಲಿಟಿಯೇ ಮುಂದಾಳಾಗಿ ನಿಂತು ಮಾಡಬಹುದಾದ ಕೆಲಸ ಮತ್ತೊಂದು ಭಾಗ. ಮುನಿಸಿಪಲ್ ಎಲ್ಲೆಯನ್ನು ಬದಲಾಯಿಸುವುದು, ದಾರಿದ್ರ್ಯನಿವಾರಣೆಯ ಏರ್ಪಾಡು, ದೊಡ್ಡ ದೊಡ್ಡ ರಸ್ತೆಗಳನ್ನು ಹಾಕುವುದು, ಸಾರ್ವಜನಿಕ ಉಪಯೋಗಕ್ಕೋಸ್ಕರ ಪೌರರು ಕೊಡುವ ದ್ರವ್ಯವಿನಿಯೋಗ, ಮುನಿಸಿಪಲ್ ಆಸ್ತಿಗಳನ್ನು ಕ್ರಯ ಭೋಗ್ಯಮಾಡುವುದು, ರಸ್ತೆಚೌಕಗಳ ಹೆಸರುಗಳನ್ನು ಬದಲಾಯಿಸುವುದು, ಮುನಿಸಿಪಾಲಿಟಿ ಆಯವ್ಯಯ, ಮಾರ್ಕೆಟ್ಟುಗಳನ್ನು ಏರ್ಪಡಿಸುವುದು—ಇವುಗಳನ್ನು ಕೇಂದ್ರ ಸರ್ಕಾರದ ಅಪ್ಪಣೆಯ ಪ್ರಕಾರ ನಡೆಸಬೇಕೆಂಬ ನಿಯಮವಿರುವುದು. ಮುನಿಸಿಪಲ್ ಆಯವ್ಯಯದಮೇಲೆ ಸ್ಥಳೀಯ ಸರ್ಕಾರದ ಮುಖ್ಯಾಧಿಕಾರಿ (ಪ್ರಿಫೆಕ್ಟ್ ಅಥವ ಸಬ್-ಪ್ರಿಫೆಕ್ಟ್)ಗೆ ಹೆಚ್ಚು ಅಧಿಕಾರವುಂಟು. ಅವನು ಆಯವ್ಯಯಗಳನ್ನು ಹೆಚ್ಚಿಸಬಹುದು, ತಗ್ಗಿಸಬಹುದು. ಹಣಕಾಸಿನ ವಿಷಯದಲ್ಲಿ ಸ್ಥಳೀಯ ಸರ್ಕಾರದ ಮುಖ್ಯಾಧಿಕಾರಿಗೂ ಪುರಸಮಿತಿಗೂ ಭಿನ್ನಾಭಿಪ್ರಾಯ ಬಂದರೆ ಸ್ಥಳೀಯಸರ್ಕಾರದ ತೀರ್ಪನ್ನೇ ಮುನಿಸಿಪಾಲಿಟಿಯು ಒಪ್ಪಬೇಕೆಂದು ಸಂಪ್ರದಾಯವಿರುವುದು. ಸಾಮಾನ್ಯವಾಗಿ ಹಣಕಾಸಿನ ವಿಚಾರದಲ್ಲಿ ಸ್ಥಳೀಯ ಸರ್ಕಾರದ ಮುಖ್ಯಾಧಿಕಾರಿಗಳು ಮುನಿಸಿಪಾಲಿಟಿಗಳ ಸ್ವಾತಂತ್ರ್ಯಕ್ಕೆ ಅಡ್ಡಲಾಗಿ ಬರುವುದಿಲ್ಲ. ದೈನಂದಿನ ಹಣಕಾಸಿನ ವಿಚಾರದಲ್ಲಿಯೇ ಇಷ್ಟು ನಿರ್ಬಂಧಗಳಿರುವಾಗ ಮುನಿಸಿಪಾಲಿಟಿಗಳು ಕೇಂದ್ರಸರ್ಕಾರದ ಅಪ್ಪಣೆಯಿಲ್ಲದೆ ಸಾಲ

ವನ್ನು ತೆಗೆದುಕೊಳ್ಳಲು ಅವಕಾಶವೇ ಇಲ್ಲವೆಂದು ಪುನಃ ಹೇಳಬೇಕಾಗಿಲ್ಲ. ಒಟ್ಟಿನಲ್ಲಿ ಕೇಂದ್ರಸರ್ಕಾರದ ಪ್ರತಿನಿಧಿಯಾಗಿಯೂ ಸ್ಥಳೀಯ ಸರ್ಕಾರದ ಮುಖ್ಯಾಧಿಕಾರಿಯಾಗಿಯೂ ಇರುವ ಪ್ರಿಫೆಕ್ಟ್ ಅಥವಾ ಸಬ್‌ಪ್ರಿಫೆಕ್ಟ್‌ಗೆ ಮುನಿಸಿಪಲ್ ಆಡಳಿತದಲ್ಲಿ ಇರುವಷ್ಟು ಅಧಿಕಾರ ಪುರಸಮಿತಿಗಾಗಲಿ ನಗರಾಧ್ಯಕ್ಷನಿಗಾಗಲಿ ಇಲ್ಲದಿರುವುದು ಫ್ರಾನ್ಸಿನ ಮುನಿಸಿಪಲ್ ಆಡಳಿತದ ಒಂದು ನ್ಯೂನತೆ. ಮುನಿಸಿಪಾಲಿಟಿ ಖುದ್ದಾಗಿ ಮಾಡುವ ಕಾರ್ಯಗಳು ಕಡಿಮೆ. ಅವು ಯಾವುವೆಂದರೆ ಬೆಂಕಿಯಿಂದುಂಟಾಗುವ ಅನರ್ಥಗಳನ್ನು ಕಡಿಮೆಮಾಡುವುದು, ನೀರು, ಗ್ಯಾಸ್, ವಿದ್ಯುಚ್ಛಕ್ತಿಗಳನ್ನು ಒದಗಿಸಿಕೊಡುವುದು.

ಇಂಗ್ಲೆಂಡಿನ ಮುನಿಸಿಪಾಲಿಟಿಗಳಲ್ಲಿರುವಂತೆ ಫ್ರಾನ್ಸಿನ ಮುನಿಸಿಪಾಲಿಟಿಗಳಲ್ಲಿ ಸಮಿತಿಯ ಸಹಾಯಕ್ಕಾಗಿ ಅನೇಕ ಉಪಸಮಿತಿಗಳೂ, ದೈನಂದಿನಕಾರ್ಯಗಳನ್ನು ನೋಡಿಕೊಳ್ಳುವುದಕ್ಕಾಗಿ ಕಾರ್ಯದರ್ಶಿ, ಹಣಕಾಸಿನ ಕೆಲಸವನ್ನು ನೋಡಿಕೊಳ್ಳುವುದಕ್ಕೆ ಖಜಾಂಚಿ ಮುಂತಾದ ಮುಖ್ಯಾಧಿಕಾರಿಗಳೂ ಇವರ ಸಹಾಯಕ್ಕಾಗಿ ಅನೇಕ ನೌಕರರೂ ಇರುವರು.

ಒಟ್ಟಿನಲ್ಲಿ ಸ್ವಾತಂತ್ರ್ಯ, ಸಮಾನತ್ವತತ್ವಗಳಿಗೆ ಮಾತೃಸ್ಥಾನವೆಂದೂ ರಾಜಕೀಯ ವಿಷಯಗಳಿಗೆ ಪ್ರಯೋಗಶಾಲೆಯೆಂದೂ ಕರೆಯಲ್ಪಡುವ ಫ್ರಾನ್ಸ್‌ದೇಶವು ಸ್ಥಳೀಯ ಸರ್ಕಾರದ ವಿಷಯದಲ್ಲಿ ಹೊಸಮಾರ್ಗವನ್ನು ಕಂಡುಹಿಡಿಯದಿರುವುದು ಆಶ್ಚರ್ಯವೇ ಸರಿ! ಮುಖ್ಯವಾಗಿ ಫ್ರೆಂಚ್ ಮುನಿಸಿಪಾಲಿಟಿಗಳು ಸ್ವಾತಂತ್ರ್ಯದಲ್ಲಿ ಅಮೆರಿಕಾ ಮುನಿಸಿಪಾಲಿಟಿಗಳಿಗೆ ಸಮನಲ್ಲ. ಇಂಗ್ಲಿಷ್ ಮುನಿಸಿಪಾಲಿಟಿಗಳಲ್ಲಿರುವಂತೆ ಫ್ರೆಂಚ್ ಮುನಿಸಿಪಾಲಿಟಿಗಳಲ್ಲಿ ಕೇಂದ್ರ ಸರ್ಕಾರದ ಮೇಲ್ವಿಚಾರಣೆಗೂ, ಸ್ಥಳೀಯ ಸರ್ಕಾರದ

ಸ್ವಾತಂತ್ರ್ಯಕ್ಕೂ ಸಾಮರಸ್ಯವಿಲ್ಲ. ಬುದ್ಧಿವಿಷಯಿಕ, ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆಗಳ ವಿಷಯದಲ್ಲಿ ಫ್ರೆಂಚ್ ಮುನಿಸಿಪಾಲಿಟಿಗಳು ಜರ್ಮನ್ ಮುನಿಸಿಪಾಲಿಟಿಗಳಂತೆ ದಕ್ಷತೆ, ನಿಪುಣತೆಯಿಂದ ಕೆಲಸಮಾಡುತ್ತಿಲ್ಲ. ಈ ಕಾರಣಗಳಿಂದ ಫ್ರಾನ್ಸಿನ ಮುನಿಸಿಪಾಲಿಟಿಗಳ ಆಡಳಿತಕ್ರಮವು ಮಾರ್ಪಡಬೇಕೆಂದು ಅನೇಕರು ಇಚ್ಛಿಸುತ್ತಿರುವರು.

---

# ೬. ಇಂಡಿಯಾ ದೇಶದ ಮುನಿಸಿಪಾಲಿಟಿಗಳು

ಪೂರ್ವಕಾಲದ ಹಿಂದೂಸ್ಥಾನದಲ್ಲಿ ಸ್ಥಳೀಯ ಸಂಸ್ಥೆಗಳಿಗೇನೂ ಕೊರತೆಯಿರಲಿಲ್ಲ. ಕಾರಣಾಂತರಗಳಿಂದ ಅವು ಲಯವಾದುವು. ನಮ್ಮ ದೇಶದಲ್ಲಿ ಮುಸಲ್ಮಾನರ, ಮೊಗಲರ ಚಕ್ರಾಧಿಪತ್ಯವು ಹರಡಿದ ಹಾಗೆಲ್ಲಾ ಸ್ಥಳೀಯ ಸರ್ಕಾರಗಳ ಮೇಲಿನ ವಾತ್ಸಲ್ಯ ಕಡಿಮೆಯಾಗುತ್ತಾ ಬಂದಿತು. ಆದರೆ ಇಂಗ್ಲಿಷರ ಆಳ್ವಿಕೆಯು ಪ್ರಾಬಲ್ಯಕ್ಕೆ ಬಂದ ಮೇಲೆ ಅಂದರೆ 19ನೆಯ ಶತಮಾನದಿಂದೀಚೆಗೆ ಸ್ಥಳೀಯ ಸಂಸ್ಥೆಗಳ ಚಳುವಳಿಗೆ ಉತ್ತೇಜನ ದೊರೆತಿರುವುದು. ಗ್ರಾಮಾಭಿವೃದ್ಧಿಯ ಸಲುವಾಗಿ ಡಿಸ್ಟ್ರಿಕ್ಟ್ ಬೋರ್ಡ್, ತಾಲ್ಲೂಕು ಬೋರ್ಡ್, ಗ್ರಾಮ ಪಂಚಾಯಿತಿ ಮೊದಲಾದ ಆಡಳಿತದ ಸಂಸ್ಥೆಗಳೂ, ಪುರ ವಿಭಾಗಗಳಿಗಾಗಿ ಮೇಜರ್ ಮುನಿಸಿಪಾಲಿಟಿಗಳೂ ಮೈನರ್ ಮುನಿಸಿ

ಪಾಲಿಟಿಗಳೂ ಸ್ಥಾಪಿತವಾಗಿರುವುವು. ಆದರೆ ಇತರ ದೇಶಗಳ ಮುನಿಸಿಪಾಲಿಟಿಗಳ ಕಾರ್ಯಕಲಾಪಗಳನ್ನು ನಮ್ಮ ದೇಶದ ಮುನಿಸಿಪಾಲಿಟಿಗಳೊಡನೆ ಹೋಲಿಸಿದರೆ ನಮ್ಮ ಮುನಿಸಿಪಾಲಿಟಿಗಳು ಇನ್ನೂ ಶೈಶವಾವಸ್ಥೆಯಲ್ಲಿಯೇ ಇರುವುವೆಂದು ಹೇಳಬಹುದು. ಇದಕ್ಕೆ ಕಾರಣವೇನೆಂದರೆ ನಮ್ಮ ಮುನಿಸಿಪಾಲಿಟಿ ಆಡಳಿತದ ಮೇಲೆ ಕೇಂದ್ರಸರ್ಕಾರಕ್ಕೆ ಆಕ್ಕರೆ ಇಲ್ಲ. ಅಲ್ಲದೆ ನಮ್ಮ ಮುನಿಸಿಪಲ್ ಆಡಳಿತವು ಪ್ರಾಂತ ಸರ್ಕಾರದ ಅಧೀನ. ಪ್ರಾಂತ ಸರ್ಕಾರಗಳ ಪ್ರವೃತ್ತ್ಯಾನುಕೂಲ, ಉತ್ಸಾಹಗಳೂ ಒಂದೇ ಸಮನಾಗಿಲ್ಲ. ಈ ಕಾರಣದಿಂದ ಒಂದು ಪ್ರಾಂತದ ಮುನಿಸಿಪಲ್ ಕಾರ್ಯಕಲಾಪಗಳಿಗೂ ಮತ್ತೊಂದು ಪ್ರಾಂತದ ಮುನಿಸಿಪಲ್ ಕಾರ್ಯಕಲಾಪಗಳಿಗೂ ವ್ಯತ್ಯಾಸ ಕಂಡುಬರುವುದು ಆಶ್ಚರ್ಯವಲ್ಲ. ಆದರೂ ಆಡಳಿತದ ಕೆಲವು ಮುಖ್ಯವಾದ ಅಂಶಗಳಲ್ಲಿ ಬ್ರಿಟಿಷ್ ಇಂಡಿಯದಲ್ಲಿರುವ ಮುನಿಸಿಪಾಲಿಟಿಗಳೆಲ್ಲಾ ಒಂದೇ ಸಮನಾಗಿರುವುವೆಂದೂ ಅವರ ನೀತಿಯೆಲ್ಲಾ ಒಂದೇ ಎಂದೂ ಸ್ಥೂಲವಾಗಿ ಹೇಳಬಹುದು.

ಬ್ರಿಟಿಷ್ ಇಂಡಿಯಾದಲ್ಲಿರುವ ಮುನಿಸಿಪಾಲಿಟಿಗಳ ಆಡಳಿತಕ್ಕೆ ಮುನಿಸಿಪಲ್ ಕಾರ್ಪೊರೇಷನ್ ಎಂಬ ಪೌರರ ಪ್ರತಿನಿಧಿ ಸಭೆ, ಸ್ಟ್ಯಾಂಡಿಂಗ್ ಕಮಿಟಿ ಎಂಬ ಉಪಸಮಿತಿ, ನಗರಾಧ್ಯಕ್ಷ ಮುನಿಸಿಪಲ್ ಕಮಿಷನರ್ ಎಂಬ ಅಧಿಕಾರಿ–ಇವರುಗಳು ಜವಾಬ್ದಾರರು. ಉದಾಹರಣೆಗಾಗಿ: ಬೊಂಬಾಯಿ ಮುನಿಸಿಪಲ್ ಕಾರ್ಪೊರೇಷನ್ ಸದಸ್ಯರ ಸಂಖ್ಯೆ 117. ಇವರಲ್ಲಿ 106 ಪೌರರಿಂದ ಚುನಾಯಿತರಾದವರು, 8 ಮಂದಿ ಕೂಲಿಗಾರರ ಸಂಸ್ಥೆ. ಛೇಂಬರ್ ಆಫ್ ಕಾಮರ್ಸ್ ಎಂಬ ವ್ಯಾಪಾರಸ್ಥರ ಸಂಸ್ಥೆ ಇವೇ ಮೊದಲಾದ ವಿಶೇಷ ಸಂಸ್ಥೆಗಳ ಪ್ರತಿನಿಧಿಗಳು. ಉಳಿದ

ಮೂರುಮಂದಿ-ಪೋಲಿಸ್ ಕಮೀಷನರ್, ಬಂದರಿನ ಮುಖ್ಯಾಧಿಕಾರಿ, ಎಕ್ಸಿಕ್ಯುಟಿವ್ ಇಂಜಿನಿಯರ್—ಸರಕಾರದ ನಾಮಕರಣ ಸದಸ್ಯರು. ಕಾರ್ಪೊರೇಷನ್ ಸದಸ್ಯರ ಅಧಿಕಾರಾವಧಿ 4 ವರ್ಷಗಳು.

**ಸ್ಟ್ಯಾಂಡಿಂಗ್ ಕಮಿಟಿ:** ಕಾರ್ಪೊರೇಷನ್ನಿನ ಕೆಲಸಗಳಿಗೆ ಮುಖ್ಯಾಧಾರವಾಗಿರುವ ಉಪಸಮಿತಿಗೆ ಸ್ಟ್ಯಾಂಡಿಂಗ್ ಕಮಿಟಿ ಎಂದು ಹೆಸರು. ಬೊಂಬಾಯಿನ ಕಾರ್ಪೊರೇಷನ್ ಸ್ಟ್ಯಾಂಡಿಂಗ್ ಕಮಿಟಿ ಸದಸ್ಯರ ಸಂಖ್ಯೆ 16. ಈ ಸದಸ್ಯರು ಕಾರ್ಪೊರೇಷನ್ನಿನಿಂದ ಚುನಾಯಿತರಾದವರು. ಇವರಲ್ಲಿ ಗಣ್ಯನಾದ ಒಬ್ಬನನ್ನು ಸದಸ್ಯರು ಆ ಕಮಿಟಿಯ ಅಧ್ಯಕ್ಷನನ್ನಾಗಿ ಚುನಾಯಿಸುವರು. ಸ್ಟ್ಯಾಂಡಿಂಗ್ ಕಮಿಟಿಯ ಅಧ್ಯಕ್ಷನ ಅಧಿಕಾರಾವಧಿ 1 ವರ್ಷ ಮಾತ್ರ. ಅಂದರೆ ವರ್ಷವರ್ಷವೂ ಬೇರೆ ಅಧ್ಯಕ್ಷನನ್ನು ಕಮಿಟಿ ಚುನಾಯಿಸುವುದು. ಸ್ಟ್ಯಾಂಡಿಂಗ್ ಕಮಿಟಿ ಸದಸ್ಯರ ಪೈಕಿ ½ ಭಾಗ ಸದಸ್ಯರು ಪ್ರತಿವರ್ಷ ಕೆಲಸದಿಂದ ನಿವೃತ್ತರಾಗಬೇಕೆಂದೂ ಅವರ ಸ್ಥಾನದಲ್ಲಿ ಹೊಸ ಸದಸ್ಯರನ್ನು ಚುನಾಯಿಸಬೇಕೆಂದೂ ನಿಯಮವುಂಟು. ಸದಸ್ಯರಿಗೆ ಸಂಬಳವಿಲ್ಲ. ಆದರೆ ಮೀಟಿಂಗಿಗೆ ಹಾಜರಾಗುವ ಸದಸ್ಯನಿಗೆ ಪ್ರತಿಯೊಂದು ಮೀಟಿಂಗಿಗೆ 30 ರೂ. ಸಂತೆ ಅಲೊಯನ್ಸ್ ದೊರೆಯುವುದು. ಸ್ಟ್ಯಾಂಡಿಂಗ್ ಕಮಿಟಿಯು ಮಾಡಬೇಕಾದ ಕರ್ತವ್ಯಗಳನ್ನು ಶಾಸನವು ಅಷ್ಟು ಸ್ಪಷ್ಟಪಡಿಸಿಲ್ಲ. ಸಾಮಾನ್ಯವಾಗಿ ಮುನಿಸಿಪಾಲಿಟಿಗೆ ಸಂಬಂಧಪಟ್ಟ ವಿಷಯಗಳನ್ನು ಪರಿಶೀಲಿಸುವುದು, ಕಾರ್ಪೊರೇಷನ್ ಅಧಿಕಾರಿಗಳಿಗೆ ಆಡಳಿತದ ವಿಷಯದಲ್ಲಿ ಸಲಹೆಗಳನ್ನು ಸೂಚಿಸುವುದು, ಕಾರ್ಪೊರೇಷನ್ನಿನ ಅಭಿವೃದ್ಧಿಗಾಗಿ ಆಚರಿಸಬೇಕಾದ ನೀತಿಯನ್ನು ನಿರ್ಣಯಿಸುವುದು—

ಇವು ಸ್ಟ್ಯಾಂಡಿಂಗ್ ಕಮಿಟಿಯ ಮುಖ್ಯ ಕೆಲಸಗಳು. ಹೊಸದಾಗಿ ಏರ್ಪಡಿಸುವ ಇಲಾಖೆಗಳ ನೌಕರರನ್ನೂ ರೂ. 500 ಕ್ಕೆ ಮೇಲ್ಪಟ್ಟ ಸಂಬಳ ಬರುವ ಅಧಿಕಾರಿಗಳನ್ನೂ ನೇಮಿಸುವ ಅಧಿಕಾರ ಕಾರ್ಪೊರೇಷನ್ನಿಗೇ ಸೇರಿದ್ದು. ನೌಕರರ ರಜಾ. ಅಲೋಯನ್ಸ್ ವಿಷಯಗಳಲ್ಲಿ ಸ್ಟ್ಯಾಂಡಿಂಗ್ ಕಮಿಟಿಯು ಉಪನಿಯಮಗಳನ್ನು ಮಾಡಿದರೂ ಆ ನಿಯಮಗಳಿಗೆ ಕಾರ್ಪೊರೇಷನ್ನಿನ ಒಪ್ಪಿಗೆ ಅವಶ್ಯಕ. ಕಾರ್ಪೊರೇಷನ್ನಿನ ಆಯವ್ಯಯದ ಪಟ್ಟಿಯನ್ನು ತಯಾರುಮಾಡುವ ಕೆಲಸ ಕಮಿಷನರಿಗೆ ಸೇರಿದ್ದು. ಆದರೆ ಆ ಪಟ್ಟಿಯನ್ನು ವಿಮರ್ಶಿಸಿ ಕಾರ್ಪೊರೇಷನ್ನಿಗೆ ಸಲಹೆ ಕೊಡುವ ಜವಾಬ್ದಾರಿ ಸ್ಟ್ಯಾಂಡಿಂಗ್ ಕಮಿಟಿಗೆ ಸೇರಿರುವುದು. ಆಯವ್ಯಯದ ಪಟ್ಟಿಯನ್ನು ಒಪ್ಪಿ ಮಂಜೂರುಮಾಡುವ ಅಧಿಕಾರ ಕಾರ್ಪೊರೇಷನ್ನಿನದು. ಪ್ರತಿವಾರ ಜಮಾಖರ್ಚಿನ ವರದಿಯನ್ನು ಅಜಮಾಯಿಷಿ ಮಾಡಿ ಅದನ್ನು ಕಾರ್ಪೊರೇಷನ್ನಿನ ತಿಳುವಳಿಕೆಗಾಗಿ ಪ್ರಕಟಿಸುವುದು ಕಮಿಟಿಯ ಮತ್ತೊಂದು ಕರ್ತವ್ಯ.

ಸ್ಟ್ಯಾಂಡಿಂಗ್ ಕಮಿಟಿಯ ಸಹಾಯಕ್ಕಾಗಿ ಇತರ ಸಣ್ಣ ಕಮಿಟಿಗಳಿರುವುವು. ಎಲ್ಲ ಮುನಿಸಿಪಾಲಿಟಿಗಳಲ್ಲಿಯೂ ಪುರಾಭಿವೃದ್ಧಿಯ ಕಮಿಟಿ, ವಿದ್ಯಾಭ್ಯಾಸದ ಕಮಿಟಿಗಳು ಇದ್ದೇ ತೀರಬೇಕೆಂದು ಇಂಡಿಯಾ ಸರ್ಕಾರದ ಶಾಸನವಿದೆ. ಇವುಗಳ ಜೊತೆಗೆ ಅವಶ್ಯಕ ಬಿದ್ದಂತೆ ವಿಶೇಷ ಕಮಿಟಿಗಳನ್ನು ಸ್ಥಾಪಿಸುವ ಸಂಪ್ರದಾಯವುಂಟು. ತಮ್ಮ ಇಲಾಖೆಗೆ ಸಂಬಂಧಪಡುವ ವಿಷಯಗಳನ್ನು ವಿಚಾರಿಸುವುದು, ಅದಕ್ಕೆ ಸೇರಿದ ನೌಕರರನ್ನು ತನಿಖೆ ಮಾಡುವುದು, ಅದರ ಕೆಲಸದ ವಿಷಯವಾಗಿ ಸ್ಟ್ಯಾಂಡಿಂಗ್ ಕಮಿಟಿಗೆ ವರದಿಯನ್ನು ಕಳುಹಿಸುವುದು—

ಇವು ಈ ಸಣ್ಣ ಕಮಿಟಿಗಳು ಮಾಡುವ ಕೆಲಸ. ಪುರಸಮಿತಿಯು ಹೇಗೆ ಪೌರರಿಗೆ ಜವಾಬ್ದಾರಿಯನ್ನು ಹೊತ್ತಿರುವುದೊ ಹಾಗೆಯೇ ಉಪಸಮಿತಿಗಳು ಪುರ ಸಮಿತಿಗೆ ಜವಾಬ್ದಾರಿಯನ್ನು ಹೊತ್ತಿರುವುವು ಎಂದು ತಿಳಿಯಬೇಕು.

**ನಗರಾಧ್ಯಕ್ಷ:** ಬ್ರಿಟಿಷ್ ಇಂಡಿಯಾದ ಮುನಿಸಿಪಾಲಿಟಿಗಳ ಅಧ್ಯಕ್ಷರನ್ನು ಆಯಾ ಪ್ರಾಂತಸರ್ಕಾರವಾಗಲಿ ಅಥವಾ ಕಾರ್ಪೊರೇಷನ್ ಆಗಲಿ ಚುನಾಯಿಸ ಬಹುದೆಂಬ ಸಂಪ್ರದಾಯವುಂಟು. ನಗರಾಧ್ಯಕ್ಷನ ಅಧಿಕಾರಾವಧಿ 1 ವರ್ಷ. ಪಾಶ್ಚಾತ್ಯದೇಶಗಳಲ್ಲಿರುವಂತೆ ನಮ್ಮ ದೇಶದಲ್ಲಿ ನಗರಾಧ್ಯಕ್ಷನಿಗೆ ಸಂಬಳವಾಗಲಿ ಅಥವಾ ಅಲೊಯನ್ಸಾಗಲಿ ಇಲ್ಲ. ಕಾರ್ಪೊರೇಷನ್ ಸಭೆ, ಉಪಸಮಿತಿಗಳ ಸಭೆ, ಇವುಗಳಲ್ಲಿ ನಗರಾಧ್ಯಕ್ಷನು ಅಗ್ರಸ್ಥಾನವನ್ನು ವಹಿಸುವನು. ಸ್ಟ್ಯಾಂಡಿಗ್ ಕಮಿಟಿಗಾದರೋ ಬೇರೆ ಅಧ್ಯಕ್ಷನಿರುವನು. ಕಾರ್ಪೊರೇಷನ್ ಎಂಬುದು ಮುನಿಸಿಪಾಲಿಟಿಯ ಮುಖ್ಯ ಶಾಸನಸಭೆ. ನಗರಾಧ್ಯಕ್ಷನೇ ಕಾರ್ಪೊರೇಷನ್ನಿನ ಅಧ್ಯಕ್ಷ. ಮುನಿಸಿಪಾಲಿಟಿಯ ಕಾರ್ಯನಿರ್ವಾಹಕಾಂಗಕ್ಕೂ ನಗರಾಧ್ಯಕ್ಷನೇ ಮುಖ್ಯಾಧಿಕಾರಿ. ಆದುದರಿಂದ ಇವೆರಡೂ ಸೌಹಾರ್ದದಿಂದ ಕೆಲಸಮಾಡಲು ಸಾಧ್ಯವಾಗಿದೆ. ಆದರೆ ಆಚರಣೆಯಲ್ಲಿ ಇಂತಹ ಸೌಹಾರ್ದವು ಅತಿ ವಿರಳ. ಏಕೆಂದರೆ ಅನೇಕ ದೊಡ್ಡ ಮುನಿಸಿಪಾಲಿಟಿಗಳಲ್ಲಿ ಆಡಳಿತದ ಕಾರ್ಯವನ್ನು ನಿರ್ವಹಿಸುವುದಕ್ಕಾಗಿ ಕಮಿಷನರ್ ಎಂಬ ಪ್ರತ್ಯೇಕ ಮುಖ್ಯಾಧಿಕಾರಿಯು ನೇಮಕವಾಗಿರುವನು. ಇದರಿಂದ ನಗರಾಧ್ಯಕ್ಷನಿಗೆ ಆಡಳಿತ ವಿಷಯದಲ್ಲಿ ಹೆಚ್ಚು ಜವಾಬ್ದಾರಿ ಇರುವುದಿಲ್ಲ.

**ಮುನಿಸಿಪಲ್ ಕಮಿಷನರ್:** ಕಮಿಷನರು ಸಾಮಾನ್ಯವಾಗಿ ಐ. ಸಿ. ಎಸ್. ವರ್ಗಕ್ಕೆ ಸೇರಿದವನು. ಇವನನ್ನು

ಆಯಾ ಪ್ರಾಂತದ ಗೌರ್ನರು ಕಾರ್ಪೊರೇಷನ್ನಿನ ಕೆಲಸಕ್ಕೆ ನೇಮಿಸುವನು. ಇವನ ಅಧಿಕಾರಾವಧಿ 3 ವರ್ಷ. ಸಮರ್ಪಕವಾಗಿ ಕೆಲಸ ಮಾಡುತ್ತಿರುವ ಕಮಿಷನರ ಅಧಿಕಾರಾವಧಿಯನ್ನು ಗೌರ್ನರು ಹೆಚ್ಚಿಸುವುದೂ ಉಂಟು. ಮುನಿಸಿಪಲ್ ಆಡಳಿತಕ್ಕೆ ಇವನೇ ಮುಖ್ಯ ಆಧಾರ. ಶಾಸನದ ದೃಷ್ಟಿಯಿಂದ ನೋಡಿದರೆ ಈ ಅಧಿಕಾರಿಯು ಪುರ ಸಮಿತಿಯ ಆಜ್ಞಾಧಾರಕನೆಂದು ಹೇಳಬಹುದು. ಆಚರಣೆಯಲ್ಲಿಮಾತ್ರ ಇವನಿಗೆ ದೊಡ್ಡ ಕಾರ್ಪೊರೇಷನ್ನಿನಲ್ಲಿಯೂ ಕೂಡಾ (ಮದ್ರಾಸ್, ಬೊಂಬಾಯಿ, ಕಲ್ಕತ್ತ) ವಿಶೇಷಾಧಿಕಾರವುಂಟೆಂದು ಹೇಳಬಹುದು. ಅನೇಕ ಸಂದರ್ಭದಲ್ಲಿ ತನ್ನ ಸ್ವಂತ ಜವಾಬ್ದಾರಿಯ ಮೇಲೆ ಅಂದರೆ ಸಮಿತಿ, ಅಧ್ಯಕ್ಷ ಇವರ ಅನುಮತಿಯಿಲ್ಲದೆ ಕೆಲಸ ಮಾಡಲು ಕಮಿಷನರಿಗೆ ಅವಕಾಶವುಂಟು. ಕೆಲವು ಮುನಿಸಿಪಾಲಿಟಿಗಳಲ್ಲಿ ರೂ. 500 ತಲುಬು ಬರುವ ಅಧಿಕಾರಿಗಳನ್ನು ಕೂಡಾ ಕಮಿಷನರ್ ನೇಮಕಮಾಡಬಲ್ಲನು. ಈ ಸಂದರ್ಭಗಳಲ್ಲಿ ಗೌರ್ನರಿನ ಅಪ್ಪಣೆ ಆವಶ್ಯಕವೆಂಬ ನಿರ್ಬಂಧ ಮಾತ್ರವುಂಟು. ಮುನಿಸಿಪಾಲಿಟಿಯ ದೈನಂದಿನ ಕೆಲಸಗಳ ಜವಾಬ್ದಾರಿಯೆಲ್ಲವೂ ಕಮಿಷನರಿಗೆ ಸೇರಿರುವುದು. ಕೆಲಸಗಳು ಸಿಸ್ತಿನಿಂದ ನಡೆಯುವುದಕ್ಕೆ ಕಮಿಷನರ ಉತ್ಸಾಹವೇ ಮುಖ್ಯ ಕಾರಣ. ಪೌರರ ಸುಖವೇ ತನ್ನ ಸುಖವೆಂದು ಪರೋಪಕಾರ ಬುದ್ಧಿಯಿಂದ ಕೆಲಸ ಮಾಡುವ ಕಮಿಷನರಿಗೆ ಪ್ರಜಾ ಸೇವೆಯನ್ನು ಮಾಡಲು ವಿಶೇಷ ಅವಕಾಶವುಂಟು. ನಮ್ಮ ದೇಶದ ಕೆಲವು ಮುನಿಸಿಪಾಲಿಟಿಗಳು ಮುಂದುವರಿದಿರುವುದಕ್ಕೆ ದೇಶಾಭಿಮಾನಿಗಳಾದ ಕೆಲವು ಕಮಿಷನರ ಶ್ರದ್ಧೆಯೇ ಮುಖ್ಯಕಾರಣವೆನ್ನಬಹುದು. ಕಮಿಷನರಿಗೆ ಹಣಕಾಸಿನ ಜವಾಬ್ದಾರಿ ಅತ್ಯಧಿಕವಾಗಿ

ರುವುದು. ಪುರೋಭಿವೃದ್ಧಿಗೋಸ್ಕರ ದೊಡ್ಡ ದೊಡ್ಡ ಕೆಲಸ ಗಳನ್ನು ಕೈಕೊಳ್ಳುವ ಸಮಯದಲ್ಲಿ ಕಮಿಷನರು ರೂ. 5000 ರಿಂದ ರೂ. 10,000 ವರೆಗೆ ಕಂಟ್ರಾಕ್ಟುದಾರರೊಡನೆ ಒಪ್ಪಂದ ವನ್ನು ಮಾಡಿಕೊಂಡು ಅವರಿಗೆ ತಾನೇ ಕೆಲಸಗಳನ್ನು ವಹಿಸುವ ಅಧಿಕಾರವುಂಟು. ಕಮಿಷನರು ಸ್ಟ್ಯಾಂಡಿಂಗ್ ಕಮಿಟಿ, ಉಪಸ ಮಿತಿ, ಕಾರ್ಪೊರೇಷನ್—ಇವುಗಳ ಸಭೆಗಳಲ್ಲಿ ಭಾಗವಹಿಸಿದರೂ ಅಲ್ಲಿ ವಿಷಯಗಳನ್ನು ನಿರ್ಣಯಿಸುವವೇಳೆ ಓಟು ಕೊಡಲು ಅವ ನಿಗೆ ಹಕ್ಕಿಲ್ಲವೆಂದು ತಿಳಿಯಬೇಕು. ಅಸಮರ್ಪಕವಾಗಿ ಕೆಲಸ ಮಾಡುತ್ತಿರುವ ಕಮಿಷನರನ್ನು ಕೆಲಸದಿಂದ ತೆಗೆಯು ವುದಕ್ಕೆ ಕೆಲವು ಕಾರ್ಪೊರೇಷನ್ನುಗಳಿಗೆ ಅಧಿಕಾರವಿರುವುದು. ಉದಾಹರಣೆಗಾಗಿ, ಬೊಂಬಾಯಿ ಕಾರ್ಪೊರೇಷನ್ನಿನಲ್ಲಿ 64 ಸದಸ್ಯರು ಇಚ್ಛಿಸಟ್ಟರೆ ಕಮಿಷನರನ್ನು ಕೆಲಸದಿಂದ ವಜಾ ಮಾಡಬಹುದು. ಸರಿಯಾಗಿ ಕೆಲಸ ಮಾಡದೆ ಇರುವ ಕಮಿ ಷನರನ್ನು ಕೆಲಸದಿಂದ ತೆಗೆಯುವ ಅಧಿಕಾರವು ಆ ಪ್ರಾಂತದ ಗೌರ್ನರಿಗೂ ಉಂಟು. ಇದೂ ಅಲ್ಲದೆ ಬ್ರಿಟಿಷ್ ಇಂಡಿಯಾದಲ್ಲಿ ರುವ ಮುನಿಸಿಪಾಲಿಟಿಗಳ ಮೇಲೆ ಪ್ರಾಂತ ಸರ್ಕಾರಕ್ಕೆ ಪೂರ್ಣಾಧಿಕಾರವುಂಟು. ಅಂದರೆ ಅಸಮರ್ಪಕವೆಂದು ತೋರಿದ ಮುನಿಸಿಪಲ್ ಕಾರ್ಪೊರೇಷನ್ನನ್ನೇ ವಜಾ ಮಾಡಿ ಅದರ ವಿಶಿಷ್ಟ ಆಡಳಿತವನ್ನೂ ಒಬ್ಬ ಅಧಿಕಾರಿಯ ಕೈಯಲ್ಲಿ ಕೊಡುವ ಅಧಿಕಾರವು ಪ್ರಾಂತ ಸರ್ಕಾರಕ್ಕಿರುವುದು. ಮುನಿಸಿಪಾಲಿಟಿಯ ಕೆಲಸಕ್ಕೆ ಸಹಾಯಕವಾಗಿರುವ ಮುಖ್ಯಾ ಧಿಕಾರಿಗಳು—ಎಂದರೆ ಡೆಪ್ಯುಟಿಕಮಿಷನರ್, ಮುನಿಸಿಪಲ್ ಕಾರ್ಯದರ್ಶಿ, ಇಂಜನಿಯರ್, ಹೆಲ್ತ್ ಆಫೀಸರು, ಇವರುಗಳನ್ನು ನೇಮಿಸುವುದೂ ಅವರ ಸಂಬಳ, ಅಲೋಯನ್ಸ್ ಮೊದಲಾದ

ವುಗಳನ್ನು ನಿರ್ಣಯಿಸುವುದೂ ಕಾರ್ಪೊರೇಷನ್ನಿನ ಅಧಿಕಾರ. ಇತರ ಸಣ್ಣ ನೌಕರವರ್ಗದವರು ಮುನಿಸಿಪಾಲಿಟಿಯಿಂದಲೇ ನೇಮಿಸಲ್ಪಟ್ಟವರಾದುದರಿಂದ ಅವರು ಮುನಿಸಿಪಾಲಿಟಿಗೆ ಜವಾಬ್ದಾರರು ಎಂದು ಮತ್ತೆ ಬೇರೆ ಹೇಳಬೇಕಾಗಿಲ್ಲ.

ಮುನಿಸಿಪಾಲಿಟಿಗಳು ಮಾಡುವ ಕೆಲಸಗಳಲ್ಲಿ ಕೆಲವು ಆವಶ್ಯಕ, ಕೆಲವು ಐಚ್ಛಿಕ. ಅವು ಆವಶ್ಯಕವಾಗಿ ಮಾಡಬೇಕಾದ ಕೆಲಸಗಳು ಯಾವುವೆಂದರೆ: ಕಶ್ಮಲನಿವಾರಣೆ, ನೀರು ದೀಪಗಳ ವ್ಯವಸ್ಥೆ, ಅನಾರೋಗ್ಯವಾದ ಮನೆಗಳನ್ನು ಕ್ರಯಕ್ಕೆ ತೆಗೆದುಕೊಂಡು ಅವುಗಳನ್ನು ಒಡೆಯಿಸಿ ಪೌರರಿಗೆ ಅನುಕೂಲವಾಗುವಂತೆ ಕಟ್ಟಿಸುವುದು, ಜನನಮರಣದ ಲೆಖ್ಖವನ್ನು ಇಡುವುದು, ಸಾಂಕ್ರಾಮಿಕರೋಗಗಳ ನಿವಾರಣೋಪಾಯಗಳನ್ನು ಕಂಡುಹಿಡಿಯುವುದು, ಆಸ್ಪತ್ರೆಗಳನ್ನು ಸ್ಥಾಪಿಸುವುದು, ಮಾರ್ಕೆಟ್ಟುಗಳನ್ನು ಏರ್ಪಡಿಸುವುದು, ಅಪಾಯಕರವಾದ ಪದಾರ್ಥಗಳ ವಿಕ್ರಯದಮೇಲೆ ಹತೋಟಿಯನ್ನಿಡುವುದು, ಬೆಂಕಿಯಿಂದಾಗುವ ಅನಾಹುತವನ್ನು ಕಡಿಮೆಮಾಡುವುದಕ್ಕೆ ತಕ್ಕ ಉಪಾಯಗಳನ್ನು ಏರ್ಪಡಿಸುವುದು, ರಸ್ತೆ, ಸೇತುವೆ, ಚರಂಡಿ, ಇವುಗಳ ಸಂಬಂಧವಾದ ಕೆಲಸಗಳನ್ನು ಮಾಡಿಸುವುದು, ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ತಕ್ಕ ಸೌಕರ್ಯಗಳನ್ನು ಒದಗಿಸಿಕೊಡುವುದು. ಮುನಿಸಿಪಾಲಿಟಿಯ ಐಚ್ಛಿಕ ಕಾರ್ಯಗಳು ಯಾವುವೆಂದರೆ: ಔದ್ಯೋಗಿಕ ವಿದ್ಯಾಭ್ಯಾಸ, ಪುಸ್ತಕ ಭಂಡಾರ, ಚಿತ್ರಶಾಲೆ, ಮ್ಯೂಸಿಯಂ, ಉದ್ಯಾನವನ, ಸಾಲು ಮರಗಳು, ಖಾನೇಷುಮಾರಿ, ಕಲೆ, ಸಂಗೀತ—ಇವುಗಳಿಗೆ ತಕ್ಕ ಏರ್ಪಾಡುಗಳನ್ನು ಮಾಡುವುದು.

ಒಟ್ಟಿನಲ್ಲಿ ನಮ್ಮ ದೇಶದ ಮುನಿಸಿಪಾಲಿಟಿಗಳಲ್ಲಿ ಪ್ರಜಾ

4

ಸೇವೆಯನ್ನು ಮಾಡುವುದಕ್ಕೆ ತಕ್ಕ ಅನುಕೂಲಗಳು ಇನ್ನೂ ಸಾಲವು. ನಮ್ಮ ಮುನಿಸಿಪಾಲಿಟಿಗಳು ತೊಡಕುಗಳಿಗೆ ಸಿಕ್ಕಿರುವುದಕ್ಕೆ ಕೆಲವು ಕಾರಣಗಳಿರುವುವು. ದ್ರವ್ಯಾಭಾವ, ಪ್ರಾಂತ ಸರ್ಕಾರದ ಹಂಗು, ರಾಜಕೀಯ ವಿಷಯಗಳಲ್ಲಿ ಜನರಿಗಿರುವ ಅಜ್ಞಾನ ಮತ್ತು ನಿರುತ್ಸಾಹ—ಇವು ಇದರ ಕಷ್ಟಗಳು. ಜೊತೆಗೆ ಮುನಿಸಿಪಾಲಿಟಿಗಳ ಆಡಳಿತದ ಮೂಲಸೂತ್ರವನ್ನು ಹಿಡಿದಿರುವ ಪ್ರಾಂತ ಸರ್ಕಾರಗಳು ಮುನಿಸಿಪಲ್ ಆಡಳಿತದಲ್ಲಿ ಎಷ್ಟು ಉತ್ಸಾಹವನ್ನು ತೋರಿಸಬೇಕೋ ಅಷ್ಟನ್ನು ತೋರಿಸುತ್ತಿಲ್ಲ. ಮುಖ್ಯವಾಗಿ ಅಜ್ಞಾನಾಂಧಕಾರದಲ್ಲಿ ಮುಳುಗಿರುವ ನಮ್ಮ ದೇಶದ ಜನರಿಗೆ ಸರ್ಕಾರವು ಅನೇಕ ವಿಚಾರದಲ್ಲಿ ಮಾರ್ಗದರ್ಶಿಯಾಗಬೇಕು. ಸ್ಥಾಪಿತವಾಗಿರುವ ಮುನಿಸಿಪಲ್ ಸಂಸ್ಥೆಗಳನ್ನು ಸಮರ್ಪಕವಾಗಿ ಕೆಲಸಮಾಡುತ್ತಿಲ್ಲವೆಂಬ ನೆಪದ ಮೇಲೆ ಕಿತ್ತುಹಾಕುವುದರ ಬದಲು ಅವುಗಳ ಲೋಪದೋಷಗಳನ್ನು ನಿವಾರಣೆಮಾಡಿ ಅವುಗಳನ್ನು ಉತ್ತಮ ಸ್ಥಿತಿಗೆ ತರಲು ಸರ್ವಪ್ರಯತ್ನ ಮಾಡುವುದೇ ಪ್ರಾಂತ ಸರ್ಕಾರದ ನೀತಿಯಾಗಬೇಕು.

# ೭ ಪುರಸೇವೆ

ಪೌರರ ಜೀವನದ ಮಟ್ಟವನ್ನು ತಿಳಿಯುವುದಕ್ಕೆ ಅವರ ಮುನಿಸಿಪಾಲಿಟಿಯು ಕೈಕೊಂಡಿರುವ ಕೆಲಸಗಳೇ ದೊಡ್ಡ ಸಾಕ್ಷಿ. ಪ್ರಜಾಸೇವೆಯನ್ನು ಮಾಡುವ ವಿಷಯದಲ್ಲಿ ಮುನಿಸಿಪಾಲಿಟಿಗಳಿಗಿರುವ ಅವಕಾಶ ಕೇಂದ್ರಸರಕಾರಕ್ಕೂ ಇಲ್ಲವೆಂದು ಹೇಳಬಹುದು. ಏಕೆಂದರೆ ಮನುಷ್ಯನ ಜನನಾರಭ್ಯ ಅವನ ಅಂತ್ಯಕಾಲದವರೆಗೆ ಬೇಕಾದ ಅನುಕೂಲಗಳನ್ನು ಮುನಿಸಿಪಲ್ ಸಂಸ್ಥೆಯೊಂದೇ ಒದಗಿಸಿಕೊಡಬಲ್ಲದು. ಆದರೆ ಇಂತಹ ಸುಯೋಗವು ಇನ್ನೂ ಕೆಲವು ಮುನಿಸಿಪಾಲಿಟಿಗಳಿಗೆ ಬಂದಿಲ್ಲ. ಜನರ ಅಜ್ಞಾನ, ಹಳೆಯ ಆಚಾರ ವ್ಯವಹಾರಗಳಲ್ಲಿ ಮೂಢ ನಂಬಿಕೆ, ಅನಾಗರಿಕಸ್ವಭಾವ, ಕೇಂದ್ರಸರಕಾರದ ಅಧಿಕಾರ ದರ್ಪ, ದೇಶದದಾರಿದ್ರ್ಯ, ದೇಶಾಭಿಮಾನ ಮತ್ತು ಪರೋಪಕಾರ ಬುದ್ಧಿಯ ಅಭಾವ – ಈ ಕಾರಣಗಳಿಂದ ಅನೇಕ ಮುನಿಸಿಪಾಲಿಟಿಗಳು ಮುಂದುವರಿಯುವುದಕ್ಕೆ ಅವಕಾಶವಿಲ್ಲದೆ ಅವುಗಳನ್ನೇ ನಂಬಿರುವ ಪೌರರನ್ನು ಹೀನದಶೆಗೆ ತಳ್ಳಿರುವುವು.

ಮುಂದುವರಿಯುತ್ತಿರುವ ಪಾಶ್ಚಾತ್ಯದೇಶದಲ್ಲಿರುವ ಮುನಿಸಿಪಾಲಿಟಿಗಳು ಸ್ವತಂತ್ರಾಡಳಿತಕ್ಕೆ ಕೇಂದ್ರವಾಗಿರುವುವಲ್ಲದೆ ಪ್ರಜಾನುಕೂಲಗಳಿಗೆ ಮಹದಾಶ್ರಯವಾಗಿಯೂ ಸೌಂದರ್ಯದ ಬೀಡಾಗಿಯೂ ಇರುವುವು. ಮುನಿಸಿಪಾಲಿಟಿಯ ಕಾರ್ಯಗಳನ್ನು ಆರೋಗ್ಯಸಂಬಂಧವಾದ ಕೆಲಸ, ಅಭಿವೃದ್ಧಿಸಂಬಂಧವಾದ ಕೆಲಸ, ಅನುಕೂಲಸಂಬಂಧವಾದ ಕೆಲಸಗಳೆಂದು ಮೂರುವಿಧವಾಗಿ ವಿಂಗಡಿಸಬಹುದು. ಯಾವಕಾರ್ಯವನ್ನು ಕೈಕೊಳ್ಳಬೇಕಾದರೂ ಅದಕ್ಕೆ ತಕ್ಕ ಸನ್ನಿವೇಶವಿರುವುದು ಅತ್ಯಾವಶ್ಯಕ. ಶಾಸ್ತ್ರ

ರೀತಿಯಿಂದ ಕಟ್ಟಲ್ಪಟ್ಟಿರುವ ನಗರವೇ ಉತ್ತಮ ಜೀವನಕ್ಕೆ ತಕ್ಕ ಸನ್ನಿವೇಶ. ಪಟ್ಟಣ ಚೆನ್ನಾಗಿರುವುದು ಎಂದರೆ ಅದು ಅಪ್ರಯೋಜಕವೆಂದರ್ಥವಲ್ಲ. ಜನಜೀವನಕ್ಕೆ ಅತ್ಯಾವಶ್ಯಕವಾಗಿರುವ ಗೃಹವಸತಿ ಮೊದಲಾದ ಸನ್ನಿವೇಶವು ನಿರ್ಮಲವಾಗಿಯೂ ನೋಡುವುದಕ್ಕೆ ಇಂಪಾಗಿಯೂ ಇದ್ದರೆ ಅಂತಹ ಸನ್ನಿವೇಶದಲ್ಲಿ ಜೀವಿಸುವವರ ಆಚಾರವ್ಯವಹಾರಜೀವನಮಾರ್ಗಗಳು ಉತ್ತಮ ರೀತಿಯವಾಗಿರುವುವು. ಪಟ್ಟಣಗಳನ್ನು ಸುಂದರವಾಗಿಟ್ಟುಕೊಂಡಿರುವುದು ಒಣಡಂಭಕ್ಕಲ್ಲ; ಮನುಷ್ಯನ ಮನೋವೃತ್ತಿಯನ್ನು ಪರಿಪಕ್ವಮಾಡಿ ಅವನ ಜೀವನವನ್ನು ಸದುದ್ದೇಶದ ಕಡೆಗೆ ತಿರುಗಿಸುವುದಕ್ಕಾಗಿ. ಚೊಕ್ಕಟವಾದ ರಸ್ತೆ, ರಮ್ಯವಾದ ಉದ್ಯಾನ, ಅಂದವಾಗಿರುವ ಗೃಹವಸತಿ, ಸಾರ್ವಜನಿಕ ವಿಹಾರಸ್ಥಳ, ಈಜುವಕೊಳ, ಕಲಾಮಂದಿರ-ಇವುಗಳನ್ನುಳ್ಳ ಪಟ್ಟಣಗಳನ್ನು ನೋಡಿದರೆ ಯಾರಿಗೆತಾನೇ ಹರ್ಷವುಂಟಾಗುವುದಿಲ್ಲ. ಉದ್ಯಾನವನಗಳ ನಡುವೆ ಹಾಕಿರುವ ಪ್ಯಾರಿಸಿನ ದೊಡ್ಡ ರಸ್ತೆಗಳು (ಬೂಲ್‌ವಾರ್), ಕಣ್ಣುಮರೆಯಾಗುವವರೆಗೂ ನೇರವಾಗಿ ಕಾಣುವ ಬ್ಯುಡಾಪೆಸ್ಟಿನ ರಾಜಬೀದಿಗಳು, ಆಹ್ಲಾದಕರವಾದ ಪ್ರಷ್ಯಾದೇಶದ ದೊಡ್ಡ ದೊಡ್ಡ ಸ್ನಾನದ ಕೊಳಗಳು, ಎಲ್ಲಿ ನೋಡಿದರೂ ಕಣ್ಣಿಗೆ ಆನಂದವನ್ನುಕೊಡುವ ಇಂಗ್ಲೆಂಡಿನ ಹುಲ್ಲುಮೈದಾನಗಳು, ಮನಸ್ಸಿಗೆ ಹರ್ಷವನ್ನುಂಟುಮಾಡುವ ಕಾಶ್ಮೀರ ಬೆಂಗಳೂರು ಮೈಸೂರುಗಳ ಸುಂದರವಾದ ಉದ್ಯಾನವನಗಳು—ಇವು ಯಾರನ್ನು ತಾನೇ ಆಕರ್ಷಿಸುವುದಿಲ್ಲ! ಪಟ್ಟಣಗಳನ್ನು ಶಾಸ್ತ್ರರೀತಿಯಿಂದ ರಚಿಸಿ, ವಾಸಕ್ಕೆ ತಕ್ಕಮನೆ, ವ್ಯಾಪಾರಕ್ಕೆ ತಕ್ಕ ಅಂಗಡಿ, ಆಡಳಿತಕ್ಕೆ ತಕ್ಕ ಕಛೇರಿ, ಕೈಗಾರಿಕೆಗೆ ತಕ್ಕ ಕಾರ್ಖಾನೆ—ಇವುಗಳನ್ನು ಪ್ರತ್ಯೇಕ ಪ್ರತ್ಯೇಕವಾದ

ಸ್ಥಳಗಳಲ್ಲಿ ವಿಂಗಡಿಸುವುದರಿಂದ ಪಟ್ಟಣವು ನೋಡುವುದಕ್ಕೆ ಅಂದವಾಗಿರುವುದಲ್ಲದೆ ಪ್ರಜೆಗಳಿಗೂ ಕೂಡ ಬಹಳ ಅನುಕೂಲವಾಗಿರುವುದು. ಹೀಗೆ ಮನೆ, ಕಾರ್ಖಾನೆ, ಅಂಗಡಿ ಮೊದಲಾದವುಗಳನ್ನು ಪ್ರತ್ಯೇಕ ಸ್ಥಳದಲ್ಲಿ ಕಟ್ಟುವ ಪದ್ಧತಿಗೆ ಜೋನ್ ಪದ್ಧತಿ ಎಂದು ಹೆಸರು.

ಜನರ ಆರೋಗ್ಯವನ್ನು ಕಾಪಾಡುವುದು ಮುನಿಸಿಪಾಲಿಟಿಯ ಮತ್ತೊಂದು ಕೆಲಸ. ಮೊದಲು ಪೌರರ ಅನಾರೋಗ್ಯವನ್ನು ಹೆಚ್ಚಿಸುತ್ತಿರುವ ಕಾರಣಗಳನ್ನು ಎಂದರೆ ಜನಸಾಂದ್ರತೆ, ನಿರ್ಮಲವಾದ ಆಹಾರ ನೀರುಗಳ ಅಭಾವ, ಜನಗಳ ಮತ್ತು ವಾಹನಗಳ ತಿರುಗಾಟದಿಂದ ಉಂಟಾಗುವ ಧೂಳು, ಕೈಗಾರಿಕೆ ಯಂತ್ರಗಳಿಂದ ಹೊರಡುವ ಹೊಗೆ--ಇವುಗಳಿಂದ ಪ್ರಾಪ್ತವಾಗುವ ವ್ಯಾಧಿಗಳು, ಸಾಂಕ್ರಮಿಕ ಜಾಡ್ಯಗಳಿಂದಾಗುವ ಅನಾಹುತ—ಇವೇ ಮೊದಲಾದ ಕಾರಣಗಳನ್ನು ವಿಶೇಷಜ್ಞರ ಸಹಾಯದಿಂದ ನಿರ್ಮೂಲ ಮಾಡಬೇಕು. ಪೌರರ ಮರಣ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂದು ಪಾಶ್ಚಾತ್ಯ ರಾಷ್ಟ್ರಗಳು ಮಾಡುತ್ತಿರುವ ಸಾಹಸ ಇತರರಿಗೆ ಮಾರ್ಗದರ್ಶಿಯಾಗಿರುವುದು. ಇಂಗ್ಲೆಂಡಿನ ಮುನಿಸಿಪಾಲಿಟಿಗಳು ಪೌರರ ಮರಣದ ಸರಾಸರಿ ಸಂಖ್ಯೆಯನ್ನು 30.6% ರಿಂದ 23.5%ಕ್ಕೂ, ಜರ್ಮನ್ ಮುನಿಸಿಪಾಲಿಟಿಗಳು 31.37% ರಿಂದ 21·1%ಕ್ಕೂ, ಇಟಲಿಯ ಮುನಿಸಿಪಾಲಿಟಿಗಳು 30.3% ರಿಂದ 20.1%ಕ್ಕೂ ಅಮೇರಿಕಾ ಮುನಿಸಿಪಾಲಿಟಿಗಳು 27.5% ರಿಂದ 17.4%ಕ್ಕೂ ಇಳಿಸಿರುವುದು ಶ್ಲಾಘನೀಯವೇ ಸರಿ.

ಮುನಿಸಿಪಾಲಿಟಿಗಳು ರೋಗನಿವಾರಣೆಗೋಸ್ಕರ ಮಾಡಬೇಕಾದ ನಾನಾ ವಿಧವಾದ ಪ್ರಯತ್ನಗಳಿರುವುವು. ಚಲನ

ಚಿತ್ರ. ಸುಲಭವಾಗಿ ಅರ್ಥವಾಗುವ ಪುಸ್ತಕ, ಉಪನ್ಯಾಸ— ಇವುಗಳ ಮೂಲಕ ಪ್ರಜೆಗಳಿಗೆ ಸಾಂಕ್ರಾಮಿಕ ಜಾಡ್ಯಗಳ ವಿಚಾರವಾಗಿ ಸರಿಯಾದ ತಿಳುವಳಿಕೆಯನ್ನುಂಟುಮಾಡುವುದು, ಬಡವರಿಗೆ ಉಚಿತವಾಗಿ ಔಷಧ ದೊರಕಿಸುವುದು, ಸಾಂಕ್ರಾಮಿಕ ಜಾಡ್ಯಗಳಿಗೆ ತುತ್ತಾಗುವುದಕ್ಕೆ ಮುಂಚಿತವಾಗಿ ಜನರಿಗೆ ಟೀಕ ಹಾಕಿಸುವುದು ಅಥವಾ ಇನಾಕ್ಯುಲೇಷನ್ ಮಾಡಿಸುವುದು, ಕಲ್ಮಷವಾದ ನೀರಿನಿಂದ ಅನೇಕ ಜಾಡ್ಯಗಳು ಉತ್ಪತ್ತಿಯಾಗದಂತೆ ನಿರ್ಮಲವಾದ ನೀರನ್ನು ಊರಿಗೆ ಸರಬರಾಜುಮಾಡುವುದು- ಇವು ಮುಖ್ಯವಾದುವು. ನಿರ್ಮಲವಾದ ನೀರು ಜನರಿಗೆ ಎಷ್ಟು ಹೆಚ್ಚಾಗಿ ದೊರಕಿದರೆ ಅಷ್ಟು ಒಳ್ಳೆಯದು ಎಂಬ ಅಂಶ ಅನೇಕ ಮುನಿಸಿಪಾಲಿಟಿಗಳ ಮನಸ್ಸಿನಲ್ಲಿ ಇನ್ನೂ ನಾಟಿಲ್ಲ. ಅಮೆರಿಕಾದಲ್ಲಿ ಪ್ರತಿಯೊಬ್ಬ ಪೌರನಿಗೆ ಒಂದು ದಿವಸಕ್ಕೆ 200 ಗ್ಯಾಲನ್‌ನಂತೆ ನೀರು ದೊರೆಯುವಾಗ ಪ್ರತಿಯೊಬ್ಬ ಪೌರನಿಗೂ ಅದರಲ್ಲಿ $\frac{1}{10}$ ಭಾಗವಾದರೂ ದೊರೆಯುವಂತೆ ಹಿಂದೂಸ್ಥಾನದ ಮುನಿಸಿಪಾಲಿಟಿಗಳು ಏಕೆ ಮಾಡುತ್ತಿಲ್ಲ?

ಊರಿನ ಕಲ್ಮಷವು ರೋಗಾದಿಗಳಿಗೆ ಪ್ರಬಲವಾದ ಕಾರಣ. ಅದನ್ನು ಊರಿನಿಂದ ಹೊರಹಾಕುವುದಕ್ಕೆ ಮುನಿಸಿಪಾಲಿಟಿಯು ಏರ್ಪಾಡುಮಾಡಬೇಕು. ಕಲ್ಮಷವನ್ನು ಸಾಗಿಸುವುದು ಎಂದರೆ ಅದನ್ನು ವ್ಯರ್ಥಮಾಡುವುದೆಂದಲ್ಲ. ವಿಜ್ಞಾನದ ಸಹಾಯದಿಂದ ಅದನ್ನು ಗೊಬ್ಬರವನ್ನಾಗಿ ಮಾಡಿ ಅದರಿಂದ ಮುನಿಸಿಪಾಲಿಟಿಯು ವರಮಾನವನ್ನು ಹೆಚ್ಚಿಸಿ ಜನರಿಗೆ ಪ್ರಯೋಜನವಾಗುವಂತೆ ಮಾಡುವುದು ಮುನಿಸಿಪಾಲಿಟಿಯ ನೀತಿಯಾಗಬೇಕು.

ವ್ಯಾಧಿಗಳ ಸ್ವರೂಪಗಳನ್ನು ಕಂಡುಹಿಡಿದು ಅವುಗಳಿಗೆ ತಕ್ಕ

ಚಿಕಿತ್ಸೆಗಳನ್ನು ಮಾಡುವುದಕ್ಕಾಗಿ ವಿಜ್ಞಾನ ಸಂಶೋಧನೆಯ ಸಂಸ್ಥೆಗಳನ್ನು ಸ್ಥಾಪಿಸಿ ವಿಶೇಷಜ್ಞರಿಗೆ ಪ್ರೋತ್ಸಾಹ ಕೊಡುವುದು ಮುನಿಸಿಪಾಲಿಟಿಯ ಮತ್ತೊಂದು ಕೆಲಸ. ಆ ಸಂಸ್ಥೆಗಳು ವ್ಯಾಧಿಗಳಿಗೆ ತಕ್ಕ ಚಿಕಿತ್ಸೆಗಳನ್ನು ಕಂಡುಹಿಡಿಯುವುದಲ್ಲದೆ ಜನರ ಅನಾರೋಗ್ಯ ದೌರ್ಬಲ್ಯಗಳಿಗೆ ಸರಿಯಾದ ಕಾರಣಗಳನ್ನು ಕಂಡುಹಿಡಿದು ಅವುಗಳ ನಿವಾರಣೆಗೆ ತಕ್ಕ ಉಪಾಯಗಳನ್ನು ಕೂಡ ಸೂಚಿಸುವಂತಿರಬೇಕು. ಆಗಲೀಗ ಅವುಗಳಿಂದ ಪೌರರಿಗೆ ಹೆಚ್ಚು ಅನುಕೂಲವುಂಟಾಗುವುದು.

ನಿರ್ಮಲವಾದ ನೀರು ಹೇಗೆ ಮನುಷ್ಯನಿಗೆ ಆವಶ್ಯಕವೋ ಹಾಗೆಯೇ ಬೆರಕೆಯಿಲ್ಲದ ಆಹಾರಪದಾರ್ಥಗಳೂ ಆವಶ್ಯಕ. ಈ ವಿಚಾರದಲ್ಲಿ ಮುನಿಸಿಪಾಲಿಟಿಗಳು ಬರಿ ಉಪನಿಯಮಗಳನ್ನು ಮಾಡುವುದರಿಂದ ಅವರ ಉದ್ದೇಶ ಪೂರ್ತಿಯಾಗುವುದಿಲ್ಲ. ನಿಯಮಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕಿಂತ ಇರುವ ನಿಯಮಗಳನ್ನು ದಕ್ಷತೆಯಿಂದ ಆಚರಣೆಗೆ ತರುವುದು ಮುಖ್ಯ. ಇಂಡಿಯಾದೇಶದಲ್ಲಿ ಇತ್ತೀಚೆಗೆ ಮಿಲ್ಲಿನ ಅಕ್ಕಿಗಿಂತ ಕೊಟ್ಟಿದ ಅಕ್ಕಿ ಆರೋಗ್ಯಕ್ಕೆ ಒಳ್ಳೆಯದು ಎಂದು ಹೇಳದೆ ಇರುವ ವಿಶೇಷಜ್ಞರೇ ಇಲ್ಲ. ಆದರೆ ಇದನ್ನು ಆಚರಣೆಗೆ ತರುವುದಕ್ಕೆ ಯಾವ ಮುನಿಸಿಪಾಲಿಟಿಯೂ ಪ್ರಯತ್ನಿಸದೆ ಇರುವುದನ್ನು ನೋಡಿದರೆ ಮುನಿಸಿಪಾಲಿಟಿಗಳು ಪೌರರ ಆರೋಗ್ಯಕ್ಕೆ ಹೆಚ್ಚು ಗಮನಕೊಟ್ಟಿಲ್ಲವೆಂಬುದು ವ್ಯಕ್ತವಾಗುವುದು.

ಪೌರರಿಗೆ ಖಾಯಿಲೆ ಬಾರದಂತೆ ನಿವಾರಣೋಪಾಯಗಳನ್ನು ಕಂಡುಹಿಡಿಯುವುದು ಹೇಗೆ ಮುನಿಸಿಪಾಲಿಟಿಗಳ ಕರ್ತವ್ಯವೋ ಹಾಗೆಯೇ ರೋಗಗಳಿಂದ ಪೀಡಿತರಾದವರನ್ನು ಗುಣಪಡಿಸುವುದೂ ಅವುಗಳ ಕೆಲಸ. ನಮ್ಮ ದೇಶದ ಮುನಿಸಿಪಾಲಿಟಿಗಳ

ಆಶ್ರಯದಲ್ಲಿರುವ ಆಸ್ಪತ್ರೆಗಳ ಸಂಖ್ಯೆಯೇ ಕಡಿಮೆ; ಅವುಗಳಲ್ಲಿ ದೊರೆಯುವ ಸಹಾಯವು ಇನ್ನೂ ಕಡಿಮೆ. ಪಾಶ್ಚಾತ್ಯರಾಜ್ಯಗಳ ಕೆಲವು ಮ್ಯುನಿಸಿಪಾಲಿಟಿಗಳು ಒಬ್ಬೊಬ್ಬ ರೋಗಿಗೆ ಒಂದು ವರ್ಷಕ್ಕೆ ಸರಾಸರಿ 350—500 ಪೌಂಡುಗಳಷ್ಟು ಖರ್ಚುಮಾಡುತ್ತಿವೆ. ಇದರ ಜೊತೆಗೆ ವಿಶೇಷ ವ್ಯಾಧಿ (ಎಂದರೆ ತ್ರೊನ್ನು, ಕಾಲರಾ, ಸಿಡುಬು) ಗಳಿಂದ ಪೀಡಿತರಾದ ರೋಗಿಗಳ ಸಲುವಾಗಿ ಬೇರೆ ಬೇರೆ ಆಸ್ಪತ್ರೆಗಳನ್ನು ಕೂಡ ಸ್ಥಾಪಿಸಿರುವುವು.

ಪುರೋಭಿವೃದ್ಧಿಗೆ ಮೂಲಾಧಾರವಾಗಿರುವ ಮಕ್ಕಳ ಆರೋಗ್ಯ ವಿದ್ಯಾಭ್ಯಾಸಗಳನ್ನು ನೋಡಿಕೊಳ್ಳುವುದು ಮುನಿಸಿಪಾಲಿಟಿಗಳ ಮತ್ತೊಂದು ಕೆಲಸ. ಪಾಶ್ಚಾತ್ಯದೇಶಗಳಲ್ಲಿ ಮಕ್ಕಳಿಗೋಸ್ಕರವಾಗಿ ಸ್ಥಾಪಿಸಿರುವ ಕಿಂಡರ್‌ಗಾರ್ಟನ್ ಸ್ಕೂಲು, ನರ್ಸರಿಸ್ಕೂಲು, ಮಕ್ಕಳ ಆಟಪಾಟಗಳಿಗೆ ಏರ್ಪಡಿಸಿರುವ ಕ್ರೀಡಾಮಂದಿರಗಳು, ಸಣ್ಣ ಮಕ್ಕಳುಗಳನ್ನು ನೋಡಿಕೊಳ್ಳುವುದಕ್ಕೋಸ್ಕರ ಇರುವ ನರ್ಸಿಂಗ್ ಹೋಮ್, ಬಡವರ ಮಕ್ಕಳಿಗೆ ಉಚಿತವಾಗಿ ಹಾಲು ಮೊದಲಾದ ಪುಷ್ಟಿಯಾದ ಆಹಾರಗಳನ್ನು ಕೊಡುವ ಏರ್ಪಾಡು— ಇವುಗಳನ್ನು ನೋಡಿದರೆ ನಮ್ಮ ದೇಶದ ಮುನಿಸಿಪಾಲಿಟಿಗಳಿಗೆ ಮಕ್ಕಳ ಯೋಗಕ್ಷೇಮದ ಮೇಲಿರುವ ಅನಾದರಣೆಯು ವ್ಯಕ್ತಪಡುವುದು. ಲಂಡನ್ನಿನ 'ಮಕ್ಕಳ ಪೋಷಣೆಯ ಕಮಿಟಿ' ಮಾಡುತ್ತಿರುವ ಕೆಲಸಗಳು ಇತರರಿಗೆ ಮೇಲ್ಪಙ್ಕ್ತಿಯಾಗಿರುವುವು.

ಮನುಷ್ಯನ ಅನಾರೋಗ್ಯಕ್ಕೆ ಸರಿಯಾದ ಆಹಾರವಿಲ್ಲದಿರುವುದು ಒಂದು ಪ್ರಬಲವಾದ ಕಾರಣ. ಅನಾರೋಗ್ಯವಾದ ಮನೆಗಳಲ್ಲಿ ಅವನು ವಾಸಮಾಡುವುದು ಮತ್ತೊಂದು ಕಾರಣ. ನಮ್ಮ ದೇಶದಲ್ಲಿ ಎರಡುಹೊತ್ತು ಸರಿಯಾದ ಊಟ ದೊರೆಯುವವರ

ಸಂಖ್ಯೆಯೇ ಅಧಿಕವಾಗಿರುವುದರಿಂದ ಈ ಸಂಕಟವನ್ನು ಕಡಿಮೆ ಮಾಡುವುದಕ್ಕೆ ಮುನಿಸಿಪಾಲಿಟಿಗಳು ಕೈಲಾದಮಟ್ಟಿಗೆ ಪ್ರಯತ್ನಮಾಡುವುದು ಯುಕ್ತ. ಬೊಂಬಾಯಿಸಂಥ ದೊಡ್ಡ ಪಟ್ಟಣಗಳಲ್ಲಂತೂ ಇದು ಅತ್ಯಾವಶ್ಯಕ. ಬೊಂಬಾಯಿನಲ್ಲಿ ಜೀವಿಸುತ್ತಿರುವ ಕೂಲಿಗಾರರ ಆಹಾರವು ಖೈದಿಗಳ ಆಹಾರಕ್ಕಿಂತ ಕೇಡಾಗಿದೆ. 4 ಜನರನ್ನುಕಾಪಾಡುವ ಒಬ್ಬ ಸಂಸಾರಿಯು ಸರಾಸರಿ ವರಮಾನ ತಿಂಗಳಿಗೆ ರೂ. 52-4-6. ಇದರಿಂದ ಅವನ ಮನೆಯಲ್ಲಿರುವ ಒಬ್ಬೊಬ್ಬನಿಗೆ ದಿನವೊಂದಕ್ಕೆ 1.54 ಪೌಂಡ್ ತೂಕದಷ್ಟು ಕೂಡ ಆಹಾರ ದೊರೆಯುವುದು ಕಷ್ಟವಾಗಿದೆ. ಒಬ್ಬ ಖೈದಿಗಾದರೋ ಜೈಲಿನಲ್ಲಿ ಪ್ರತಿದಿವಸವೂ 1.87 ಪೌಂಡಿನಷ್ಟು ಆಹಾರ ದೊರೆಯುತ್ತಿರುವುದು. ಈ ಪ್ರಕಾರ ಮನುಷ್ಯನನ್ನು ಹೀನಸ್ಥಿತಿಗೆ ಸೆಳೆಯುತ್ತಿರುವ ದಾರಿದ್ರ್ಯವನ್ನು ಕೈಲಾದಮಟ್ಟಿಗೆ ಕಡಿಮೆಮಾಡುವುದಕ್ಕೆ ಮುನಿಸಿಪಾಲಿಟಿಗಳು ಎಷ್ಟು ಸಹಾಯಮಾಡಿದರೆ ಅಷ್ಟು ಒಳ್ಳೆಯದು.

ಪಟ್ಟಣಗಳಲ್ಲಿ ಬಡಕೂಲಿಗಾರರಿಗೆ ವಾಸಕ್ಕೆ ತಕ್ಕ ಮನೆಗಳು ಇಲ್ಲದಿರುವುದು ಎಲ್ಲರಿಗೂ ತಿಳಿದ ವಿಷಯ. ಹೀಗೆ ಹೇಳುವುದರಿಂದ ಬಡಕೂಲಿಗಾರರಿಗಾಗಿ ಮುನಿಸಿಪಾಲಿಟಿಗಳು ಸಾಲವನ್ನಾದರೂ ಮಾಡಿ ಮನೆಗಳನ್ನು ಕಟ್ಟಿಸಿ ಉಚಿತವಾಗಿ ಕೊಡಬೇಕೆಂದು ಅರ್ಥವಲ್ಲ. ಮುನಿಸಿಪಾಲಿಟಿಗಳು ಹತ್ತಾರು ಜನರ ಹಣದಿಂದ ನೂರಾರು ಮನೆಗಳನ್ನು ಕಟ್ಟಿಸಿ ಬಡವರಿಗೆ ಬಾಡಿಗೆಗೆ ಕೊಟ್ಟು ಅವರ ಸೌಕರ್ಯವನ್ನು ಹೆಚ್ಚಿಸಬೇಕೆಂದು ಹೇಳುವುದು ಈ ವಾದದ ತಾತ್ಪರ್ಯ. ಇದು ಅಸಾಧ್ಯವೆಂದು ಕಂಡುಬಂದರೆ ಪಟ್ಟಣದಲ್ಲಿ ಅನುಕೂಲಸ್ಥರಾದ ಪೌರರಿಗೆ ಅಥವಾ ಸಹಕಾರಸಂಘಗಳಿಗೆ ಉತ್ತೇಜನ

ವನ್ನು ಕೊಟ್ಟು ಅವರಿಂದ ಮನೆಗಳನ್ನು ಕಟ್ಟಿಸಿ ಬಡಕೂಲಿಗಾರರಿಗೆ ಬಾಡಿಗೆಗೆ ಕೊಡಿಸುವಂತೆ ಏರ್ಪಾಡು ಮಾಡಬೇಕು. ಹೊಸಮನೆಗಳನ್ನು ಕಟ್ಟಿಸುವುದು ಮುನಿಸಿಪಾಲಿಟಿಯ ಕರ್ತವ್ಯವಾಗಿರುವಂತೆ ಅನಾರೋಗ್ಯವಾದ ಮನೆಗಳನ್ನು ಕೆಡವಿಸಿ ಆರೋಗ್ಯಶಾಸ್ತ್ರಕ್ಕನುಸಾರವಾಗಿ ಹೊಸ ಮನೆಗಳನ್ನು ಕಟ್ಟಿಸಿ ಕೊಡುವುದೂ ಅದರ ಕರ್ತವ್ಯ. ಬೊಂಬಾಯಿನಲ್ಲಿ ಕಳೆದ 20 ವರ್ಷಗಳಲ್ಲಿ ಅನಾರೋಗ್ಯವಾದ 23,755 ದೊಡ್ಡ ಮನೆಗಳನ್ನು ನೆಲಸಮಮಾಡಿ ಅವುಗಳಿಗೆ ಬದಲಾಗಿ ಅನೇಕ ಸಂಸಾರಗಳು ವಾಸಮಾಡುವಂತಹ 20,000 ಮನೆಗಳನ್ನು ಕಟ್ಟಿಸಿರುವುದು ಇತರರಿಗೆ ಮೇಲ್ಪಂಕ್ತಿಯಾಗಬೇಕು.

ಗೃಹವಸತಿಗಳು ವಾಸಕ್ಕೆ ಹೇಗೆ ಅವಶ್ಯಕವೋ ಹಾಗೆಯೇ ತಿರುಗಾಡುವುದಕ್ಕಾಗಿ ವಾಹನಗಳಿರುವುದೂ ಅವಶ್ಯಕ. ಇಂತಹ ವಾಹನಗಳನ್ನು ಮುನಿಸಿಪಾಲಿಟಿಗಳು ಸ್ವಂತ ಲಾಗೋಡಿನಿಂದ ಏರ್ಪಡಿಸಿದಲ್ಲಿ ಅವುಗಳಿಂದ ಪ್ರಜೆಗಳಿಗೆ ಸುಖವಾಗುವುದಲ್ಲದೆ ಮುನಿಸಿಪಾಲಿಟಿಗಳ ವರಮಾನವೂ ಹೆಚ್ಚುವುದು. ಮುನಿಸಿಪಾಲಿಟಿಯ ಅಧಿಕಾರಿಗಳು ಮುಂದಾಳುಗಳಾಗಿ ನಿಂತು ಪೌರರ ಅನುಕೂಲಕ್ಕಾಗಿ ಎಷ್ಟೆಷ್ಟು ಸೌಕರ್ಯಗಳನ್ನೊದಗಿಸಿಕೊಟ್ಟರೆ ಅವುಗಳಿಂದ ಮುನಿಸಿಪಾಲಿಟಿಗಳಿಗೆ ಅಷ್ಟುಅಷ್ಟು ಲಾಭವುಂಟು.

ಸಂಘದ ಶಕ್ತಿಯನ್ನು ಉಪಯೋಗಿಸಬಲ್ಲ ಜನರು ಎಂತಹ ಕಾರ್ಯಗಳನ್ನಾದರೂ ಮಾಡಬಲ್ಲರು ಎಂಬುದಕ್ಕೆ ಮುಂದುವರಿಯುತ್ತಿರುವ ಪಾಶ್ಚಾತ್ಯ ಮುನಿಸಿಪಾಲಿಟಿಗಳ ಕಾರ್ಯಕಲಾಪಗಳೇ ದೊಡ್ಡ ನಿದರ್ಶನಗಳಾಗಿರುವುವು. ಪ್ರಗತಿಮಾರ್ಗವನ್ನನುಸರಿಸುತ್ತಿರುವ ಇಂಗ್ಲೆಂಡಿನ ಮುನಿಸಿಪಾಲಿಟಿಗಳು ಪೌರರ ಜೀವನವನ್ನು ಎಷ್ಟರಮಟ್ಟಿಗೆ ಉತ್ತಮಸ್ಥಿತಿಗೆ ತಂದಿರುವುವು,

ಅವು ಪೌರರಿಗೆ ಯಾವ ಯಾವ ರೀತಿಯಲ್ಲಿ ಪ್ರಯೋಜನಕಾರಿಗಳಾಗಿರುವುವು ಎಂಬುದನ್ನು ಪರಿಶೀಲಿಸಿದರೆ ಮುನಿಸಿಪಾಲಿಟಿಗೆ ಯಾವ ಸ್ಥಾನವನ್ನು ಕೊಡಬಹುದು ಎಂಬ ವಿಷಯವು ವಿಶದವಾಗುವುದು.

ಹುಟ್ಟಿನ ಶಿಶುವಿನಿಂದ ಹಿಡಿದು ವೃದ್ಧರಾಗುವವರೆಗೆ ಜನರ ಪೋಷಣೆಗಾಗಿ ಅವು ಮಾಡಿರುವ ಏರ್ಪಾಡುಗಳು ಅದ್ಭುತವಾಗಿವೆ. ಇಂಗ್ಲೆಂಡಿನ ಮುನಿಸಿಪಾಲಿಟಿಗಳು ಗರ್ಭಿಣಿಯರ ಮತ್ತು ಶಿಶುಗಳ ಸಂರಕ್ಷಣೆಯ ಕೇಂದ್ರಗಳನ್ನು ಸ್ಥಾಪಿಸಿ ಗರ್ಭಿಣಿಯರ ಆರೋಗ್ಯವನ್ನು ಆಗಿಂದಾಗ್ಗೆ ಪರೀಕ್ಷಿಸುವುದಕ್ಕೆ ಏರ್ಪಡಿಸಿರುವುವು. ಬಡವರಾದ ಸ್ತ್ರೀಯರು ಪ್ರಸವಿಸಿದ ಕಾಲದಲ್ಲಿ ಉಚಿತವಾಗಿ ಮುನಿಸಿಪಾಲಿಟಿಯಿಂದ ವೈದ್ಯರ ಸೂಲಗಿತ್ತಿಯರ ಸಹಾಯವನ್ನೂ ಹಾಲು ಮೊದಲಾದವುಗಳನ್ನೂ ಪಡೆಯುತ್ತಿರುವರು. ಮಗು ಜನನವಾದ ಎರಡು ದಿವಸದಲ್ಲಿ ಸಿಟಿ ಮೆಡಿಕಲ್ ಆಫೀಸರಿಗೂ ಜನನದ ರಿಜಿಸ್ಟ್ರಾರ್ ಆಫೀಸಿಗೂ ಆ ವಿಷಯವು ತಿಳಿಯುವುದು. ಸ್ವಲ್ಪ ವಯಸ್ಸಾದಮೇಲೆ ದೇವಿ ಹಾಕುವ ಇನ್ಸ್ಪೆಕ್ಟರು ಬಂದು ಅದಕ್ಕೆ ದೇವಿ ಹಾಕುವರು. ಏತನ್ಮಧ್ಯೆ ಮಗುವಿನ ತಾಯಿಯು ಕೂಲಿಯಿಂದ ಜೀವಿಸುವವಳಾದರೆ ಅವಳ ಮಗುವನ್ನು ನೋಡಿಕೊಂಡಿರುವುದಕ್ಕೆ ಶಿಶುಸಂರಕ್ಷಣಕೇಂದ್ರಗಳು ಏರ್ಪಾಡಾಗಿರುವುವು. ಕಿವುಡರು, ಮೂಕರು, ಹೆಳವರು, ಅಂಗವಿಹೀನರು—ಇಂಥ ಮಕ್ಕಳ ಜೀವನೆಗೆಗೆ ಮುನಿಸಿಪಾಲಿಟಿಗಳು ಬೇರೆ ಸ್ಥಳಗಳನ್ನು ಏರ್ಪಡಿಸಿ ಅವರ ಪೋಷಣೆಗೂ ಕೂಡ ಅನುಕೂಲವನ್ನು ಕಲ್ಪಿಸಿರುವುವು. ಆಕಸ್ಮಿಕವಾಗಿ ಮಕ್ಕಳಿಗೆ ಕೆಟ್ಟ ಖಾಯಿಲೆಗಳು—ಸಿಡುಬು, ನಾಯಿಕೆಮ್ಮಲು—ಬಂದರೆ ಅವುಗಳನ್ನು ಗುಣಪಡಿಸುವುದಕ್ಕೋಸ್ಕರ ಮುನಿಸಿ-

ಪಾಲಿಟಿಗಳು ಪ್ರತ್ಯೇಕವಾದ ಆಸ್ಪತ್ರೆಗಳನ್ನು (ಐಸೋಲೇಷನ್ ಆಸ್ಪತ್ರೆ) ಏರ್ಪಡಿಸಿರುವುವು.

ಮಗುವಿಗೆ 5 ವರ್ಷ ತುಂಬಿದಮೇಲೆ ಮುನಿಸಿಪಾಲಿಟಿಯಲ್ಲಿ ಅಕ್ಷರಾಭ್ಯಾಸಕ್ಕೆ ಅವಕಾಶವುಂಟು. ಮುನಿಸಿಪಲ್ ಪಾಠಶಾಲೆಗಳು ಮಗುವಿಗೆ ಓದುವುದು, ಲೆಖ್ಖ, ಚರಿತ್ರೆ ಭೂಗೋಳ-ಇವುಗಳಲ್ಲಿ ಶಿಕ್ಷಣಕೊಡುವುವು. ಪಾಠಶಾಲೆಯ ವೈದ್ಯರು ಮಗುವಿನ ದೇಹಸ್ಥಿತಿ ಕಣ್ಣು, ಕಿವಿ, ಹಲ್ಲು—ಇವುಗಳನ್ನು ಆಗಿಂದಾಗ್ಗೆ ಪರೀಕ್ಷಿಸಿ ತಕ್ಕ ಚಿಕಿತ್ಸೆಯನ್ನುಮಾಡುವರು. ಬಡವರ ಮಕ್ಕಳಿಗೆ ಉಚಿತವಾಗಿ ಆಹಾರ ಕೊಡುವ ಏರ್ಪಾಡನ್ನು ಮುನಿಸಿಪಾಲಿಟಿಗಳು ಮಾಡಿರುವುದಲ್ಲದೆ ಮಕ್ಕಳಿಗೆ ಈಜುವುದಕ್ಕೂ ಆಟಪಾಟಗಳನ್ನಾಡುವುದಕ್ಕೂ ತಕ್ಕ ಪ್ರೋತ್ಸಾಹವನ್ನು ಕೊಡುವುವು.

11 ವರ್ಷ ತುಂಬಿದ ಹುಡುಗನು ಪ್ರಾಥಮಿಕ ಶಿಕ್ಷಣವನ್ನು ಹೊಂದಿ ಎರಡನೆಯ ದರ್ಜೆಯ ಪಾಠಶಾಲೆಯನ್ನು ಸೇರುವನು; ಅಲ್ಲಿ ಸಾಧಾರಣ ಶಿಕ್ಷಣ, ಸ್ವಲ್ಪಮಟ್ಟಿಗೆ ಔದ್ಯೋಗಿಕ ಶಿಕ್ಷಣ—ಇವುಗಳನ್ನು ಪಡೆಯುವನು. ಇದೂ ಅಲ್ಲದೆ ಮುನಿಸಿಪಾಲಿಟಿ ಆಶ್ರಯದಲ್ಲಿರುವ ಪುಸ್ತಕಭಂಡಾರ, ವಾಚನಶಾಲೆಗಳನ್ನು ಕೂಡ ಉಪಯೋಗಿಸಲು ಇವನಿಗೆ ಅವಕಾಶವುಂಟು.

ಪ್ರೌಢ ವಿದ್ಯಾಭ್ಯಾಸದಲ್ಲಿ ಆಸಕ್ತಿಯಿಲ್ಲದ ಹುಡುಗನು ತನ್ನ 14ನೆಯ ವರ್ಷದಲ್ಲಿ ಮುನಿಸಿಪಾಲಿಟಿಯಿಂದ ಏರ್ಪಾಡಾದ ಔದ್ಯೋಗಿಕ ಪಾಠಶಾಲೆ ಅಥವಾ ಸಂಸ್ಥೆಯಲ್ಲಿ ಸಾಯಂಕಾಲದ ಹೊತ್ತು ಔದ್ಯೋಗಿಕ ಶಿಕ್ಷಣವನ್ನು ಪಡೆಯುವನು. ದುಡಿಮೆಗೆ ಅನುಕೂಲವಿಲ್ಲದ ಹುಡುಗನಿಗೆ 'ಲೋಕಲ್ ಜೂವಿನೈಲ್

ಎಂಪ್ಲಾಯ್‌ಮೆಂಟ್ ಡಿಪಾರ್ಟ್‌ಮೆಂಟ್ ' ಅಥವಾ ಯುವಕರಿಗೆ ಉದ್ಯೋಗವನ್ನು ದೊರಕಿಸುವ ಸಂಸ್ಥೆಯ ಸಹಾಯದಿಂದ ಒಂದು ಹಂಗಾಮಿ ಚಾಕರಿಯನ್ನು ಸಂಪಾದಿಸುವುದಕ್ಕೂ ಅವಕಾಶವುಂಟು. ಇಷ್ಟಪಟ್ಟರೆ ಇವನು ಆಗಿಂದಾಗ್ಗೆ ಮುನಿಸಿಪಲ್ ಸಮಿತಿಯ ಮೀಟಿಂಗುಗಳಿಗೆ ಹೋಗಿ ಅಲ್ಲಿನ ವಿದ್ಯಮಾನಗಳನ್ನು ಕೂಡ ನೋಡಬಹುದು.

20 ವರ್ಷ ತುಂಬಿದ ಯುವಕನು ಜೀವನೋಪಾಯಕ್ಕೋಸ್ಕರ ಚಾಕರಿಯನ್ನು ಮಾಡಿಕೊಂಡು ಸಂಸಾರವನ್ನು ಹೂಡಬೇಕೆಂದಿದ್ದರೆ ಅಂತಹವನಿಗೆ ಮುನಿಸಿಪಾಲಿಟಿಯ ಆಶ್ರಯದಲ್ಲಿರುವ ಸಣ್ಣ ಸಣ್ಣ ಮನೆಗಳು ಬಾಡಿಗೆಗೆ ದೊರೆಯುವುವು. ಅಂತಹ ಮನೆಯಲ್ಲಿ ಮುನಿಸಿಪಾಲಿಟಿ ಸರಬರಾಜು ಮಾಡುವ ವಿದ್ಯುಚ್ಛಕ್ತಿ ದೀಪ, ಅಡಿಗೆ ಮಾಡುವುದಕ್ಕೆ ಗ್ಯಾಸು, ನೀರು ಮೊದಲಾದ ಸೌಕರ್ಯಗಳು ದೊರೆಯುವುದರಿಂದ ಇವನಿಗೆ ಸುಖವಾಗಿ ಜೀವನಮಾಡಲು ಸಾಧ್ಯವಾಗುವುದು. ಮುನಿಸಿಪಾಲಿಟಿಯಿಂದ ಏರ್ಪಡಿಸಿರುವ ಬಸ್ಸು ಅಥವಾ ರೈಲು ಇರುವುದರಿಂದ ಮನೆಯಿಂದ ಆಫೀಸಿಗೆ ಹೋಗುವುದಕ್ಕೆ ಇವನಿಗೆ ಅನುಕೂಲವು ಮತ್ತಷ್ಟು ಹೆಚ್ಚುವುದು.

21 ವರ್ಷ ತುಂಬಿದಮೇಲೆ ಪೌರತ್ವದ ಹಕ್ಕು ಲಭಿಸಿ ಓಟರುಗಳ ಪಟ್ಟಿಯಲ್ಲಿ ಇವನ ಹೆಸರು ದಾಖಲಾಗುವುದು. ಇವನು ಸ್ವತಂತ್ರವಾಗಿ ಜೀವನ ಮಾಡುವವನಾದುದರಿಂದ ಮುನಿಸಿಪಾಲಿಟಿಗೆ ಬಡವರ ಸಲುವಾಗಿ ರೇಟ್ಸ್ ಅಥವಾ ತೆರಿಗೆಯನ್ನು ಕೊಡಬೇಕಾಗುವುದು. ನಿರುದ್ಯೋಗ, ಖಾಯಿಲೆ, ಕೈಕಾಲು ಊನವಾಗುವುದು—ಇವೇ ಮೊದಲಾದ ಅನರ್ಥಗಳಿಂದ ಉಂಟಾಗಬಹುದಾದ ಕಷ್ಟವನ್ನು

ಸಿಪಾರಸೆ ಮಾಡಿಕೊಳ್ಳುವುದಕ್ಕೋಸ್ಕರ ಇವನು ಪ್ರತಿವಾರ ತನ್ನ ಸಂಪಾದನೆಯ ಒಂದು ಭಾಗವನ್ನು ಜೀವವಿಮೆಗಾಗಿ ಕಂತು ಕೊಡಲಾರಂಭಿಸುವನು. ಒಂದುವೇಳೆ ನಿರುದ್ಯೋಗದಿಂದ ದೀರ್ಘಕಾಲ ಸಂಕಟಪಡುವ ದುಸ್ಥಿತಿ ಬಂದರೆ ಆಗ ಮುನಿಸಿ ಪಾಲಿಟಿಯು ಇವನಿಗೂ ಇವನ ಹೆಂಡತಿಗೂ ಜೀವನಾಂಶವನ್ನು ಕೊಡುವುದು. ಮುನಿಸಿಪಾಲಿಟಿಯಿಂದ ದ್ರವ್ಯಸಹಾಯವಾಗುತ್ತಿರುವುದು ಎಂಬ ಧೋರಣೆಯಿಂದ ಇರಲು ಇವನಿಗೆ ಅವಕಾಶ ವಿಲ್ಲ. ಏಕೆಂದರೆ ಮುನಿಸಿಪಾಲಿಟಿಯ ರಿಲೀವಿಂಗ್ ಆಫೀಸರು ಇವನು ಹೇಗೆ ಜೀವನವನ್ನು ಮಾಡುತ್ತಿರುವನು ಎಂಬುದನ್ನು ಪರೀಕ್ಷಿಸುವುದಲ್ಲದೆ, ಅಸಮರ್ಪಕವಾಗಿ ಕಂಡುಬಂದ ಅಂಶಗಳನ್ನು ಮುನಿಸಿಪಾಲಿಟಿಗೆ ತಿಳಿಸಿ ಇವನಿಗೆ ಬರುವ ಜೀವನಾಂಶವನ್ನು ಕಡಿಮೆಮಾಡಿಸುವನು. ಮುನಿಸಿಪಾಲಿಟಿಯಿಂದ ದ್ರವ್ಯ ಸಹಾಯವನ್ನು ಪಡೆಯುವ ಅವಧಿಯಲ್ಲಿ ಇವನಿಗೆ ಪೌರತ್ವದ ಹಕ್ಕು ದೊರೆಯುವುದಿಲ್ಲ.

ಪುನಃ ಉದ್ಯೋಗವು ದೊರೆತು ಸ್ವತಂತ್ರವಾಗಿ ಜೀವನವನ್ನುಮಾಡುವ ಅವಕಾಶ ದೊರೆತರೆ ಇವನಿಗೆ ಪುನಃ ಪೌರತ್ವದ ಹಕ್ಕು ಸಿಕ್ಕುವುದು. ಪೌರರು ಒಂದು ವೇಳೆ ಇವನನ್ನು ಪುರಸಮಿತಿಗೆ ಚುನಾಯಿಸಿದರೆ ಆ ಸಮಿತಿಯ ಸದಸ್ಯತ್ವವನ್ನು ಸ್ವೀಕರಿಸಿ ತನ್ನ ಕೈಲಾದಮಟ್ಟಿಗೆ ಪ್ರಜಾಸೇವೆಯನ್ನು ಮಾಡಲವಕಾಶವೂ ಇವನಿಗೆ ದೊರೆಯುವುದು. ಇವನು ಉತ್ಸಾಹಶಾಲಿಯಾಗಿಯೂ, ವಿಶೇಷಜ್ಞನಾಗಿಯೂ ಕಂಡುಬಂದರೆ ಪುರಸಮಿತಿಗೆ ಸೇರಿದ ಉಪಸಮಿತಿಗಳನ್ನು ಪ್ರವೇಶಿಸುವುದಕ್ಕೂ, ಮುನಿಸಿಪಾಲಿಟಿಯ ಅಧಿಕಾರಿಗಳಲ್ಲೊಬ್ಬನಾಗುವುದಕ್ಕೂ ನಗರಾಧ್ಯಕ್ಷನಾಗುವುದಕ್ಕೂ ಅವಕಾಶವನ್ನುಪಡೆಯುವನು. ಪುರಾ

ಭಿಮಾನದಿಂದಲೂ ವಿಚಕ್ಷಣೆಯಿಂದಲೂ ಇವನು ಕೆಲಸ ಮಾಡಿದಲ್ಲಿ ಅವನ ಖ್ಯಾತಿಯು ಕೇಂದ್ರ ಸರ್ಕಾರದವರಿಗೂ ವ್ಯಾಪಿಸಿ ಇವನಿಗೆ ಅನೇಕ ಸನ್ಮಾನಗಳು ಕೂಡ ದೊರೆಯ ಬಹುದು. ಈ ಪ್ರಕಾರ ತನ್ನ ಮುನಿಸಿಪಾಲಿಟಿಯಿಂದ ಕಾಲ ಕಾಲಕ್ಕೆ ದೊರೆಯುವ ಸೌಕರ್ಯಗಳನ್ನನುಭವಿಸಿದ ಪೌರನು ಕೊನೆಗೆ ಮುನಿಸಿಪಾಲಿಟಿಯಿಂದ ಏರ್ಪಾಡಾದ ರುದ್ರಭೂಮಿ ಯಲ್ಲಿ ಐಕ್ಯನಾಗುವನು.

೩೮. ಸುಭಾಷಿತ ಸಂಗ್ರಹಗಳು— ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.

೩೯. ಮಕ್ಕಳ ಭಾವಜೀವನ— ಬಿ. ಕುಪ್ಪುಸ್ವಾಮಿ ನಾಯುಡು, ಎಂ.ಎ.

೪೦. ಸಹಕಾರ— ಎಸ್. [illegible], ಎಂ.ಎ.

೪೧. ನಯಸೇನ— ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.

೪೨. ಕೌಟಿಲ್ಯ— ಎಂ. ವಿ. ಕೃಷ್ಣರಾವ್, ಎಂ.ಎ., ಬಿ. [illegible]

ತೆಲುಗು ಚಾಟುಪದ್ಯಗಳು - ಕೆ. ವೆಂಕಟ[illegible]

[illegible]ಮಿಸಿಪಾಲಿಟಿಗಳು - ಎಚ್. ಕೃಷ್ಣರಾವ್, [illegible]

[illegible]

೧೯೪೩ನೆಯ ಜುಲೈನಿಂದ [illegible] ಅಚ್ಚಾಗುವ ಪುಸ್ತಕಗಳ ಸಾ[illegible] ೩ ಆಣೆ, ವಾರ್ಷಿಕ ಚಂದಾ (೮ ಪುಸ್ತಕಗಳಿಗೆ) ರೂ. [illegible]; ಉತ್ತಮ [illegible] ಆಣೆ; ವಾರ್ಷಿಕ ಚಂದಾ (೮ ಪುಸ್ತಕಗಳಿಗೆ) ರೂ. [illegible]

[illegible] ಮೈಸೂರು